॥ ಶ್ರೀರಾಮ ಪ್ರಸೀದ ॥

ಶ್ರೀಮನ್ಮಧ್ವಸಿದ್ಧಾಂತ ಪ್ರಕಾಶಿನೀ

ಎಂಬ

ಮಾಸ ಪತ್ರಿಕೆ

ಶ್ರೀಮನ್ಮಧ್ವಮತೇ ಹರಿಃ ಪರತರಸ್ಸತ್ಯಂ ಜಗತ್ತತ್ತ್ವತೋ
ಭೇದೋ ಜೀವಗಣಾಃ ಹರೇರನುಚರಾಃ ನೀಚೋಚ್ಚಭಾವಂಗತಾಃ ।
ಮುಕ್ತಿರ್ನೈಜಸುಖಾನುಭೂತಿರಮಲಾ ಭಕ್ತಿಶ್ಚ ತತ್ಸಾಧನಮ್
ಹ್ಯಕ್ಷಾದಿತ್ರಿತಯಂ ಪ್ರಮಾಣಮಖಿಲಾಮ್ನಾಯೈಕವೇದ್ಯೋ ಹರಿಃ ॥

ಸಂಪುಟ ೬.] ಫೆಬ್ರವರಿ—೧೯೨೨. [ಸಂಚಿಕೆ ೨.
ದುರ್ಮತಿ—ಮಾಘ ಮಾಸ.

ಶ್ರೀಮನ್ಮಧ್ವಸಿದ್ಧಾಂತಪ್ರಕಾಶಿನೀ ಸಭಾ
...ದ ರಿಪೋರ್ಟ್.

ಈ ವರ್ಷದಲ್ಲಿ... ಪತ್ರಿಕೆಯ ಕೆಲಸವು ಸಾಧಾರಣ ಚಂದಾದಾರರಿಂದಲ್ಲದೇ ಮಠಾಧಿಪತಿಗಳು ಮತ್ತು ಉದಾರರಾದ ದೊಡ್ಡಮನುಷ್ಯರುಗಳು ಇವರುಗಳ ವಿಶೇಷಸಹಾಯ ದ್ರವ್ಯದಿಂದ ನಡೆದಿರುತ್ತದೆಂಬ ಅಂಶವು ಈ ಕೆಳಗೆ ವಿವರಿಸುವ ಜಮಾಖರ್ಚುಗಳ ಪಟ್ಟಿಯಿಂದ ವ್ಯಕ್ತವಾಗುತ್ತದೆ. ಪತ್ರಿಕೆಯು ಸಕಾಲಕ್ಕೆ ಸಿದ್ಧವಾಗದೆ ಇರುವುದಕ್ಕೆ ನಮಗೆ ಇರುವ ಅನುಪಪತ್ತಿಗಳನ್ನು ಚಂದಾದಾರರಿಗೆ ಅನೇಕವೇಳೆ ನಮ್ಮ ಪತ್ರಿಕೆಯ ಮೂಲಕ ತಿಳಿಸಿರುತ್ತೇವೆ. ಈ ಸಂಪುಟವನ್ನು ಪೂರ್ತಿ ಮಾಡುವುದಕ್ಕೆ ತಂದ ಸಾಲ ೩೦೦೦ ರೂಪಾಯಿಗಳಲ್ಲಿ ಸಿಲ್ಕು ೪೬—೧೪—೨ ಜಾತಾ ೨೯೫೩—೧—೧೦ ಸಾಲ ಉಳಿದಿದೆ. ಪುನಃ ಅವುಗಳನ್ನು ಈಗ ವಿವರಿಸಲು ಅನಾವಶ್ಯಕವಾಗಿ...ದೆ. ಸರ್ವರೂ ಅವರವರಿಂದ ಸಾಧ್ಯವಾದ ಸಹಾಯಗಳನ್ನು ಮಾಡಿ ಈ ಮಹಾ ಕಾರ್ಯವು ಸರಿಯಾಗಿ ನಡೆಯುವಂತೆ ಪ್ರೋತ್ಸಾಹಮಾಡಬೇಕೆಂದು ಪ್ರಾರ್ಥಿಸುತ್ತೇವೆ.

ಆಶ್ರಯದಾತರು ಮತ್ತು ಪೋಷಕರು ಇವರಿಂದ ಬಂದ ದ[illegible]

ಆದಾಯ (ಜಮಾ)

೧.	ಶ್ರೀ ಶ್ರೀ	ಉತ್ತರಾದಿಮಠದ ಸ್ವಾಮಿಗಳವರಿಂದ	೧೫೦--೦--೦
೨.	,,	ಉಡುಪಿ ಅದಮಾರಮಠದ ಸ್ವಾಮಿಗಳವರಿಂದ	೨೦--೦--೦
೩.	,,	ಕೃಷ್ಣಾಪುರದಮಠದ ಸ್ವಾಮಿಗಳವರು	೧೫--೦--೦
೪.	,,	ಪೇಜಾವರ ಮಠದ ಸ್ವಾಮಿಗಳವರು	೧೨--೦--೦
೫.	,,	ಪಲಮಾರ ಮಠದ ಸ್ವಾಮಿಗಳವರು	೫--೦--೦
೬.	,,	ಕಾಣೂರು ಮಠದ ಸ್ವಾಮಿಗಳವರು	೧೨--೦--೦
೭.	ಮ|| ರಾ||	ರಾಜಸಭಾಭೂಷಣ ಕರ್ಪೂರಶ್ರೀನಿವಾಸರಾಯರು	೨೦--೦--೦
೮.	,,	ಬಿ. ವೆಂಕೋಬರಾವ್ ಡೆಪ್ಯುಟೀಕಮಿಷನರ್, ಹಾಸನ (೨೦ ಪ್ರತಿಗಳ ಚಂದ)	೪೫--೦--೦
೯.	,,	ರಿಟೈರ್ಡು ರಿಜಮೆಂಟ್‌ದಾರ್–ಹೆಚ್. ಕೃಷ್ಣರಾವ್, ಮೈಸೂರು.	೧೦--೦--೦
೧೦.	,,	ಪಿ. ವಿ. ನರಶಿಂಗರಾವ್, ಬೆಂಗಳೂರು.	೫--೦--೦
೧೧.	,,	ಪಿ. ಎ. ನರಶಿಂಗರಾವ್ ಮಿರಾಸ್‌ದಾರ್, ಮಗಾಲೂರು.	೫--೦--೦
೧೨.	,,	ಕೊಡಿಗೇಹಳ್ಳಿ ನರಸಪ್ಪನವರು.	೫--೦--೦
೧೩.	,,	ಯನ್. ವೆಂಕಟರಾವ್, ರಿಟೈರ್ಡು ಸೀನಿಯರ್ ಅಸಿಸ್ಟೆಂಟ್ ಕಮಿಷನರ್, ಮೈಸೂರು.	೫--೦--೦
		ಯಂ. ರಾಮಚಂದ್ರರಾವ್ ರಿಟೈರ್ಡು ಶಿರಸ್ತೇದಾರ್, ಬೆಂಗಳೂರು.	೫--೦--೦
		ಜಿ. ಸತ್ಯಾಜಿರಾವ್ ಸಿಟಿ ಮ್ಯಾಜಿಸ್ಟ್ರೇಟ್, ಮೈಸೂರು	೫--೦--೦

|| ಶ್ರೀ ||

ಗೀತಾರಹಸ್ಯದ ಪ್ರಸ್ತಾವನೆಯ ವಿಚಾರ.

"ಲೋಕದಲ್ಲಿ ಬಂಧುಜನರೊಡನೆ ಯುದ್ಧವನ್ನು ಮಾಡುವುದು ನಿಂದ್ಯವಾದುದೆಂದು ವ್ಯಾಕುಲನಾದ ಅರ್ಜುನನಿಗೆ ಅಂಥಾ ಯುದ್ಧದಲ್ಲಿಯೇ ಪ್ರವೃತ್ತಿಯನ್ನುಂಟುಮಾಡಲು ಉಪದೇಶಿಸಲ್ಪಟ್ಟ ಗೀತೆಯಲ್ಲಿ, ಬ್ರಹ್ಮಜ್ಞಾನದಿಂದಲಾಗಲಿ ಅಥವಾ ಭಕ್ತಿಯಿಂದಲಾಗಲಿ ಮೋಕ್ಷವನ್ನು ಹೇಗೆ ಸಂಪಾದಿಸಬೇಕೆಂಬ ವಿಚಾರ ಎಂದರೆ ಕೇವಲ ಮೋಕ್ಷಮಾರ್ಗದ ವಿಚಾರವು ಏತಕ್ಕೆ ? ಎಂಬ ಶಂಕೆಯು ಉಂಟಾಗಿ ಅನೇಕ ಟೀಕಾಗ್ರಂಥಗಳನ್ನು ವಿಮರ್ಶೆಮಾಡಿದರೂ ಇದಕ್ಕೆ ಸರಿಯಾದ ಉತ್ತರವು ದೊರೆಯದರಿಂದ ಮೇಲಿನ ಶಂಕೆಯೇ ದೃಢವಾಯಿತು" (ಗೀ. ರ. ಉ. ೫ ಪು, ೧೪-೧೫) ಎಂದು ಮ|| ರಾ|| ತಿಲಕರವರು ಬರೆದಿರುವರು. ಇದು ಸರಿಯಾದುದಲ್ಲ. ಈ ಶಂಕೆಗೆ ಸರಿಯಾದ ಉತ್ತರವು "ಶ್ರೀ ಗೀತಾತಾತ್ಪರ್ಯ" ಎಂಬ ಶ್ರೀಮಧ್ವಾಚಾರ್ಯರ ಗ್ರಂಥದಲ್ಲಿ ಸಿಕ್ಕುವುದು. "ತತ್ರ ಸಾಕ್ಷಾದಿಂದ್ರಾವತಾರಮುತ್ತಮಾಧಿಕಾರಿಣಮಾತ್ಮನಃ ಪ್ರಿಯತಮಮರ್ಜುನಂ, ಕ್ಷತ್ರಿಯಾಣಾಂವಿಶೇಷತೋಽಪಿಪರಧರ್ಮಂ ನಾರಾಯಣದ್ವಿಟ್ತದನುಬಂಧಿನಿಗ್ರಹಂ ಬಂಧುಸ್ನೇಹಾತ್ ಅಧರ್ಮತ್ವೇನ ಆಶಂಕ್ಯತತೋನಿವೃತ್ತಪ್ರಾಯಂ ಸ್ವವಿಹಿತವೃತ್ತ್ಯಾ ಭಕ್ತ್ಯಾ ಭಗವದಾರಾಧನಮೇವ ಪರಮೋಧರ್ಮಃ, ತದ್ವಿರುದ್ಧಃ ಸರ್ವೋಽಪ್ಯಧರ್ಮಃ, ಭಗವದಧೀನತ್ವಾತ್ಸರ್ವಸ್ಯ ಇತಿಬೋಧಯತಿಭಗವಾನ್ನಾರಾಯಣಃ । ಸಕ್ಷ್ಯಂಪ್ಯೈತದತ್ರಾವಗಮ್ಯತೇ" ಎಂಬ ಗೀತಾತಾತ್ಪರ್ಯದಲ್ಲಿರುವ ಆಚಾರ್ಯರ ಉಕ್ತಿಯಿಂದಲು, ಮತ್ತು "ಸ್ವಕರ್ಮಣಾತಮಭ್ಯರ್ಚ್ಯಸಿದ್ಧಿಂವಿಂದತಿಮಾನವಃ" ಎಂಬ ಗೀತಾವಾಕ್ಯದಿಂದಲೂ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರುಗಳು ಸ್ವಸ್ವವಿಹಿತವಾದ ಕರ್ಮಗಳನ್ನು ಮಾಡಿ ಅದರಿಂದಲೇ ಅಂತಃಕರಣಶುದ್ಧಿಯನ್ನು ಸಂಪಾದಿಸಿಕೊಂಡು ಪರಮಾ

ತ್ಮನ ಜ್ಞಾನ ಮತ್ತು ಮೋಕ್ಷ ಇವುಗಳನ್ನು ಪಡೆಯಬೇಕೆಂದು ಸಿದ್ಧಾಂತವಾಗುವುದು. “ಧರ್ಮ್ಯಾದ್ಧಿ ಯುದ್ಧಾಚ್ಛ್ರೇಯೋಽನ್ಯತ್ ಕ್ಷತ್ರಿಯಸ್ಯ ನ ವಿದ್ಯತೇ” ಎಂಬುವ ವಚನಾನುಸಾರ ಅರ್ಜುನನೇ! ನೀನು ಕ್ಷತ್ರಿಯನಾದುದರಿಂದ ಭಗವದಾರಾಧನ ರೂಪವಾದ ಸ್ವಧರ್ಮವಾದ ಯುದ್ಧವನ್ನು ಮಾಡಿ ಜ್ಞಾನ ಮತ್ತು ಮೋಕ್ಷವನ್ನು ಸಂಪಾದಿಸಬೇಕೆಂಬುದು ಸ್ಪಷ್ಟವಾಗಿರುವುದರಿಂದಲು, ಈಗ ನೀನು ಪರಮಾತ್ಮನ ದ್ವೇಷಿಗಳಾಗಿಯೂ, ಅವರ ಅನುಬಂಧಿಗಳಾಗಿಯೂ ಇರುವ ಈ ಸ್ವಜನರನ್ನು ಯುದ್ಧಮಾಡಿ ನಿಗ್ರಹಿಸುವುದು ಗರ್ಹ್ಯವಾದುದೆಂದು ಬಿಡುವುದು ಶಾಸ್ತ್ರಸಮ್ಮತವಲ್ಲವೆಂದು ಅರ್ಜುನನಿಗೆ ಉಪದೇಶಮಾಡಿರುವುದರಿಂದಲು ಮೋಕ್ಷಮಾರ್ಗವಿವೇಚನೆಯಲ್ಲಿ ಯುದ್ಧವೂ ಸೇರಿರುವುದು, ಎಂಬುದು ಶ್ರೀಮದಾಚಾರ್ಯರ ಗೀತಾ ತಾತ್ಪರ್ಯ ಗ್ರಂಥದಿಂದ ಸ್ಪಷ್ಟಪಡುವುದರಿಂದ ಮ॥ ರಾ॥ ತಿಲಕರ ಶಂಕೆಗೆ ಉತ್ತರವು ಬಂದೇ ಬರುವುದು. ಹೀಗಿರುವಲ್ಲಿ ಯಾವ ಟೀಕೆಯಿಂದಲೂ ಈ ಶಂಕೆಗೆ ಉತ್ತರ ಬರುವುದಿಲ್ಲವೆಂಬಂಶವು ಯುಕ್ತವಾಗಲಾರದು.

ಚಿಕ್ಕೋಡಿಯಲ್ಲಿ ಶ್ರೀ ಸ್ವಾಮಿಗಳವರಿಗೂ, ಮ॥ ರಾ॥ ತಿಲಕರವರಿಗೂ ಚರ್ಚೆ ನಡೆದಾಗ ಈ ವಿಷಯವೂ ಚರ್ಚಿಸಲ್ಪಡಬೇಕೆಂಬದಾಗಿ ವ್ಯವಸ್ಥೆಯಾಗಿತ್ತು. ಮತ್ತು ಅಲ್ಲಿ ನಡೆದ ವೃತ್ತಾಂತ ಮತ್ತು ಚರ್ಚಿಸಲ್ಪಟ್ಟ ವಿಷಯಗಳನ್ನು ಪ್ರಸಿದ್ಧಪಡಿಸಿದ ಪುಸ್ತಕದಲ್ಲಿ ಈ ವಿಷಯವೂ ಬಂದಿರುವುದು. ಅಲ್ಲದೆ. ಶ್ರೀ ಶ್ರೀಗಳವರು ಪೂನಾಪಟ್ಟಣದಲ್ಲಿರುವಾಗ, ತಿಲಕರವರು ಸ್ವಾಮಿಗಳವರ ಸಂದರ್ಶನಕ್ಕೆ ಬಂದು ಈ ಮೇಲಿನ ವಿಷಯವನ್ನು ಇನ್ನೂ ಕೆಲವು ವಿಷಯಗಳನ್ನು ಚರ್ಚಿಸಿದರು. ಆ ಅಂಶಗಳನ್ನೇ ಇಲ್ಲಿ ನಿರೂಪಿಸುವೆವು.

ತಿಲಕರವರು— ಗೀತಾರಹಸ್ಯದಲ್ಲಿ ಬರೆದ ಸರ್ವವಿಷಯಗಳೂ ಯಾವುದೊಂದು ಟೀಕೆಯಲ್ಲಿಯೂ ಇಲ್ಲ. ಹಾಗಿದ್ದಲ್ಲಿ ನಾನು ಈ ಗ್ರಂಥವನ್ನು ಬರೆಯಲು ಕಾರಣವೇ ಇರಲಿಲ್ಲ. ಈ ಅಭಿಪ್ರಾಯದಿಂದ ಯಾವ ಗ್ರಂಥದಲ್ಲಿಯೂ ನಮ್ಮ ಶಂಕೆಗೆ ಸರಿಯಾದ ಉತ್ತರ ಬರುವುದಿಲ್ಲವೆಂದು ಬರೆದಿರುವೆನು.

ಶ್ರೀ ಶ್ರೀಗಳವರು— ಯುದ್ಧದಲ್ಲಾಸಕ್ತಿಯನ್ನುಂಟುಮಾಡಲು ಉಪದೇಶಮಾಡಿದ ಗೀತೆಯಲ್ಲಿ ಜ್ಞಾನದಿಂದಲಾಗಲಿ ಭಕ್ತಿಯಿಂದಲಾಗಲಿ ಮೋಕ್ಷವನ್ನು ಹೇಗೆ ಸಂಪಾದಿಸಬೇಕು ? ಇದರ ಎಂದರೆ ಮೋಕ್ಷಮಾರ್ಗದವಿಚಾರವೇತಕ್ಕೆ? ಎಂಬ ಶಂಕೆಗೆ ಸರಿಯಾದ ಉತ್ತರವು ನಮ್ಮ ಗೀತಾತಾತ್ಪರ್ಯಗ್ರಂಥದಲ್ಲಿ ಬರೆದಿರುವುದೆಂದು ನಾವು ಮೇಲೆ ತೋರಿಸಿರುವೆವು. ಗೀತೆಯಮೇಲೆ ಬರೆದಿರುವ ಯಾವ ಟೀಕೆಯಲ್ಲಿಯೂ ನಮ್ಮ ಶಂಕೆಗೆ ಸರಿಯಾದ ಉತ್ತರವಿಲ್ಲವೆಂಬ ವಾಕ್ಯಕ್ಕೆ 'ಗೀತಾರಹಸ್ಯದಲ್ಲಿ ನಾವು ಬರೆದ ಸರ್ವವಿಷಯಗಳೂ ಯಾವ ಗ್ರಂಥದಲ್ಲೂ ಬರೆದಿಲ್ಲ' ಎಂದು ಅರ್ಥವಾಗುವುದಿಲ್ಲ. ಹಾಗೆ ಅರ್ಥವು ಆದರೆ ಅಥವಾ ಹಾಗೆ ಅರ್ಥವಾಗುವಂತೆ ನೀವು ಶುದ್ಧಮಾಡಿದರೆ ನೀವು ಬರೆದ ಸರ್ವವಿಷಯಗಳಿಗೂ ಗೀತೆಗೂ ಸಂಬಂಧವೇ ಇಲ್ಲವಾದುದರಿಂದ, ಇತರ ಟೀಕಾಗ್ರಂಥಕಾರರುಗಳಿಗೆ ಅದನ್ನು ಬರೆಯುವ ಆವಶ್ಯಕತೆ ಇಲ್ಲ. ಮತ್ತು ನಿಮ್ಮ ಗೀತಾರಹಸ್ಯದಲ್ಲಿ ನೀವು ಬರೆದ ಎಲ್ಲಾ ವಿಷಯಗಳನ್ನು ಬರೆಯದೇ ಇರುವುದು ಆ ಗೀತೆಯ ಟೀಕಾಕಾರರಿಗೆ ಎಷ್ಟುಮಾತ್ರಕ್ಕೂ ನ್ಯೂನತೆಯಲ್ಲ.

ತಿ:—ನಾನು ನೋಡಿರುವ ಟೀಕೆಗಳಲ್ಲಿ ಇದಕ್ಕೆ ಸರಿಯಾದ ಉತ್ತರವಿಲ್ಲವೆಂಬುದು ನನ್ನಭಿಪ್ರಾಯವು.

ಶ್ರೀ:—ಹಾಗೆ ನಿಮ್ಮಭಿಪ್ರಾಯವಾದರೆ ನಿಮ್ಮ ಬರವಣಿಗೆಯಲ್ಲಿ 'ನಾನು ನೋಡಿರುವ ಗ್ರಂಥಗಳಲ್ಲಿ' ಎಂದು ಬರೆದಿರಬಹುದಾಗಿತ್ತು. ಹಾಗೆ ಬರೆಯದೇ ಯಾವ ಗ್ರಂಥಗಳಲ್ಲಿಯೂ ಎಂದು ಬರೆದುದರಿಂದ ಆ ಗ್ರಂಥಕಾರರಿಗೆಲ್ಲಾ ನ್ಯೂನತೆಯನ್ನುಂಟುಮಾಡಿದಂತಾಗುವುದು. ಆದುದರಿಂದ ಹೀಗೆ ಬರೆಯುವುದು ಸರಿಯಲ್ಲ.

ಪ್ರಸ್ತಾವನೆಯ ಆರನೆಯ ಪುಟದಲ್ಲಿ "ಗೀತೆಯಲ್ಲಿ ಪ್ರತಿಪಾದಿತವಾದ ವಿಷಯವು ಪ್ರವೃತ್ತಿಪರವಾದುದು ಎಂಬ ಮತವು ನಿಶ್ಚಿತವಾಗಿದೆ" ಎಂದು ಬರೆದಿದೆ. ಹಾಗೂ, ವಿಷಯಪ್ರವೇಶ ಪುಟ ೧೦, ಪಂಕ್ತಿ ೧೦ ರಲ್ಲಿ "ಪ್ರವೃತ್ತಿ ಎಂದರೆ ಸಂನ್ಯಾಸವನ್ನು ಕೈಕೊಳ್ಳದೆ ಯಾವಜ್ಜೀವವೂ ಚಾತುರ್ವರ್ಣ್ಯವಿಹಿತವಾದ ನಿಷ್ಕಾಮ ಕರ್ಮವನ್ನು ಮಾ

ತುವುದೆಂಬರ್ಥವು ಪ್ರಸಿದ್ಧವಾದುದು. ಗೀತೆಯಲ್ಲಿ ಅರ್ಜುನನಿಗೆ ಉಪದಿಷ್ಟವಾದ ಧರ್ಮವು ಭಾಗವತ ಧರ್ಮವು, ಅದೇ ಪ್ರವೃತ್ತಿಧರ್ಮವೆಂದೆನ್ನಿಸುವುದು" ಎಂದು ಬರೆದಿದೆ. ಮತ್ತು ಪ್ರವೃತ್ತಿಧರ್ಮವೆಂದರೆ ಸಂನ್ಯಾಸವನ್ನು ಕೈಕೊಳ್ಳದೇ ನಿಷ್ಕಾಮಕರ್ಮವನ್ನು ಯಾವಜ್ಜೀವವೂ ನಡೆಸುತ್ತಿರುವುದೆಂದು ಇನ್ನೂ ಅನೇಕ ಕಡೆಗಳಲ್ಲಿ ಬರೆದಿದೆ. ಗೀತೆಯಲ್ಲಿ ಹೇಳಿರುವ ಧರ್ಮವು ಪ್ರವೃತ್ತಿಪರವೆಂಬುದು ಶಾಸ್ತ್ರವಿರುದ್ಧವಾದುದು. ಈ ವಿಧಾನಕ್ಕೆ ಎಂದರೆ ಗೀತೆಯಲ್ಲಿ ಪ್ರವೃತ್ತಿಧರ್ಮವೇ ನಿರೂಪಿಸಲ್ಪಟ್ಟದೆ ಎಂಬುದಕ್ಕೆ ಯಾವ ಆಧಾರವನ್ನು ಅವರು ತೋರಿಸಿರುವುದಿಲ್ಲ. ಮನುಸ್ಮೃತಿಯಲ್ಲಿ "ಸುಖಾಭ್ಯುದಯಿಕಂಚೈವನೈಶ್ರೇಯಸಿಕಮೇವಚ। ಪ್ರವೃತ್ತಂಚನಿವೃತ್ತಂಚ ದ್ವಿವಿಧಂಕರ್ಮವೈದಿಕಂ। ಇಹಚಾಮುತ್ರವಾಕಾಮ್ಯಂ ಪ್ರವೃತ್ತಂ ಕರ್ಮಕೀರ್ತ್ಯತೇ ॥ ನಿಷ್ಕಾಮಂಜ್ಞಾನಪೂರ್ವಂತು ನಿವೃತ್ತಮುಪದಿಶ್ಯತೆ" ಎಂದು, ಮತ್ತು "ಅಕಾಮೋಪಹತಂನಿತ್ಯಂ ನಿವೃತ್ತಂಚವಿಧೀಯತೆ । ಕಾಮತಸ್ತುಕೃತಂಕರ್ಮಪ್ರವೃತ್ತಮುಪದಿಶ್ಯತೆ" ಎಂದು ಹೇಳಿರುವುದು. ಈ ವಚನಗಳ ಅಭಿಪ್ರಾಯವು, 'ಐಹಿಕ ಅಥವಾ ಆಮುಷ್ಮಿಕಫಲಗಳ ಆಶೆಯಿಂದ ಮಾಡಲ್ಪಡುವ ಕರ್ಮಗಳಿಗೆ ಪ್ರವೃತ್ತಿಕರ್ಮವೆಂದು ಹೆಸರು. ಫಲೇಚ್ಛೆಯಿಲ್ಲದೆ ಜ್ಞಾನಪೂರ್ವಕವಾಗಿ ಮಾಡಲ್ಪಡುವ ಕರ್ಮವು ನಿವೃತ್ತಕರ್ಮವೆನ್ನಿಸುವುದು' ಎಂದಾಗುವುದು. ತಿಲಕರವರು ಗೀತಾರಹಸ್ಯ ೮೯ನೆಯ ಪುಟದಲ್ಲಿ ಈ ಮೇಲೆ ಉದಾಹರಿಸಿರುವ ಮನುಸ್ಮೃತಿಯ ಶ್ಲೋಕಗಳರ್ಥವನ್ನು ಇದೇ ರೀತಿಯಾಗಿಯೇ ಬರೆದಿರುವರು. ಆದುದರಿಂದ ನಿಷ್ಕಾಮಕರ್ಮವು ಪ್ರವೃತ್ತಿಕರ್ಮವೆಂದು ಹೇಳಿದರೆ ಮನುಸ್ಮೃತಿಯು ವಿರೋಧವು ಬರುವುದು. ಮ॥ ರಾ॥ ತಿಲಕರವರು ತಾವು ಬರೆದಿರುವ ಅರ್ಥಕ್ಕೆ, ಮಹಾಭಾರತ, ಶಾಂತಿಪರ್ವ ಅಧ್ಯಾಯ ೩೪೩ ಶ್ಲೋಕ ೮೦+೮೧, ನ್ನು ಪ್ರಮಾಣವಾಗಿ ಉದಾಹರಿಸಿರುವರು. ಆದರೆ ಆ ಶ್ಲೋಕಗಳರ್ಥವು ಅವರು ಬರೆಯುವ ಅರ್ಥಕ್ಕೆ ಅನುಕೂಲಿಸಲಾರದು. "ನಾರಾಯಣಪರಾ ವೇದಾಃ ಯಜ್ಞಾನಾರಾಯಣಾತ್ಮಕಾಃ। ತಪೋ ನಾರಾಯಣಪರಂ ನಾರಾಯಣಪರಾ ಗತಿಃ ॥ ನಾರಾಯಣಃ ಪರಂ

ಸತ್ಯಂ ಮಿತಂ ನಾರಾಯಣಾತ್ಮಕಂ । ನಾರಾಯಣಪರೋಧರ್ಮಃ ಪುನರಾವೃತ್ತಿರ್ದುರ್ಲಭಃ । ಪ್ರವೃತ್ತಿಲಕ್ಷಣಶ್ಚೈವಧರ್ಮೋನಾರಾಯಣಾತ್ಮಕಃ ” ಈ ಶ್ಲೋಕಗಳರ್ಥವು ಹೀಗೆಂದರೆ—ವೇದಗಳು ನಾರಾಯಣಪರವೆಂದರೆ ನಾರಾಯಣನನ್ನು ಪ್ರತಿಪಾದಿಸುವುವು. ಯಜ್ಞಗಳು ನಾರಾಯಣಸ್ವಾಮಿಕವು. ತಪಸ್ಸು ನಾರಾಯಣನ ಉದ್ದೇಶ್ಯಕವಾದುದು. “ಪುನರಾವೃತ್ತಿ ರ್ದುರ್ಲಭಃ” ಎಂದರೆ—ಪುನರ್ಜನ್ಮವನ್ನು ನಾಶಮಾಡುವಂಥಾ ಮತ್ತು ಮೋಕ್ಷಪ್ರದವಾದ ಧರ್ಮವು ನಾರಾಯಣೋದ್ದೇಶ್ಯಕವಾದುದು. ಮತ್ತು ಪ್ರವೃತ್ತಿಲಕ್ಷಣಧರ್ಮವು ನಾರಾಯಣಾತ್ಮಕವಾದುದು. ಈ ರೀತಿಯಾಗಿ ಮೋಕ್ಷಪರಧರ್ಮವು ಮತ್ತು ಪ್ರವೃತ್ತಿಲಕ್ಷಣಧರ್ಮವು ಭಿನ್ನಭಿನ್ನವಾಗಿದೆಯೆಂದು ಹೇಳಿರಲು, ‘ನಾರಾಯಣೀಯಧರ್ಮವು ಮೋಕ್ಷಪ್ರದವಾಗಿದ್ದು ಪ್ರವೃತ್ತಿಪರವೂ ಆಗಿರುವುದು’ ಎಂದು, ಆ ಧರ್ಮಕ್ಕೆ ಎರಡುವಿಧ ಲಕ್ಷಣವೂ ಉಂಟೆಂಬುವೇ ಮುಂತಾದ ತಿಲಕರವರ ಲೇಖನವನ್ನು ನೋಡಲಾಗಿ ಮೇಲೆಕಂಡ ಮ॥ ಭಾ॥ ಶ್ಲೋಕಗಳ ಅರ್ಥವು, ಅವರಿಗೆ ಆಗಲಿಲ್ಲವೆಂದು ಹೇಳಬೇಕಾಗಿ ಬರುತ್ತದೆ. ಮೇಲಿನ ಶ್ಲೋಕಗಳಿಗೆ ನಾವು ಬರೆದಿರುವ ಅರ್ಥವನ್ನು ನೋಡಲಾಗಿ ನಿಷ್ಕಾಮ ಕರ್ಮಕ್ಕೆ ಪ್ರವೃತ್ತಿಧರ್ಮವೆಂಬ ಹೆಸರು ಇಲ್ಲವೆಂದು ಸ್ಪಷ್ಟವಾಗಿ ಕಂಡುಬರುವುದು. ತಿಲಕರವರು ಈ ಧರ್ಮವು ಪ್ರವೃತ್ತಿಪರವು ಎಂಬುದನ್ನು ಮಹಾಭಾರತದಲ್ಲಿ ಸಿದ್ಧವಾಗುವುದೆಂದು ಹೇಗೆ ಬರೆದಿರುವರು? ಆದರೆ ಗೀತಾಧರ್ಮವು ಪ್ರವೃತ್ತಿಪರವಾದುದು, ಎಂಬರ್ಥವನ್ನು ಹೇಳುವ ಶ್ಲೋಕವು ಮಹಾಭಾರತದ ಈ ಅಧ್ಯಾಯದಲ್ಲಂತೂ ಇಲ್ಲ. ಹಾಗೆ ಸಿದ್ಧಮಾಡುವ ಶ್ಲೋಕವು ಯಾವ ಸ್ಥಳದಲ್ಲಿರುವುದು ಎಂಬುದನ್ನು ಅವರು ಅವಶ್ಯ ಬರೆಯಬೇಕಾಗಿತ್ತು. ಹಾಗೆ ಬರೆಯದೇ ಇರೋಣವು ಶಾಸ್ತ್ರಪದ್ಧತಿಗೆ ವಿರುದ್ಧವಾದುದು.

ಮ॥ ರಾ॥ ತಿಲಕರವರು “ಯತೀನಾಂಚಾಪಿಯೋಧರ್ಮಃ ಸತೇ ಪೂರ್ವಂನೃಪೋತ್ತಮ । ಕಥಿತೋಹರಿಗೀತಾಸು ಸಮಾಸವಿಧಿಕಲ್ಪಿತಃ ” ಎಂಬ ಮ. ಭಾ. ಶಾಂ. ಪ. ೩೪೮, ೫೩, ಶ್ಲೋಕದಿಂದ ‘ಎಲ್ಲ

ರಾಜಶ್ರೇಷ್ಠನೆ! ಗೀತೆಯಲ್ಲಿ ಪ್ರವೃತ್ತಿಪರವಾದ ಭಾಗವತ ಧರ್ಮವು ಮಾತ್ರವೇ ಹೇಳಲ್ಪಟ್ಟಿಲ್ಲ. ಆದರೆ ಭಾಗವತ ಧರ್ಮವು ಮತ್ತು ಸಂನ್ಯಾಸಿಗಳ ನಿವೃತ್ತಿಧರ್ಮವು ಸಂಕ್ಷೇಪವಾಗಿ ನಿರೂಪಿಸಲ್ಪಟ್ಟಿರುವುವು ' ಎಂದು ಲಬ್ಧವಾಗುತ್ತದೆ. ಹೀಗೆ ಸಂನ್ಯಾಸಿಗಳ ನಿವೃತ್ತಿಧರ್ಮವೂ ಸಹ ಹೇಳಲ್ಪಟ್ಟಿದೆ ಎಂಬುದರಿಂದ ಪ್ರವೃತ್ತಿಧರ್ಮವು ಸಹ ಗೀತೆಯಲ್ಲಿ ಹೇಳಲ್ಪಟ್ಟಿರುವುದು ಎಂದು ಸಿದ್ಧವಾಯಿತು ಎಂದು ಬರೆದಿರುವರು. ಆದರೆ ಇದು ಸರಿಯಾದುದಲ್ಲ. ಮೇಲೆಕಂಡ ಶ್ಲೋಕದಲ್ಲಿ ಯತಿಗಳ ಧರ್ಮವೂ ಹೇಳಲ್ಪಟ್ಟಿರುವುದು ಎಂದು ಇದೆ ಹೊರತು ಯತಿಗಳ ನಿವೃತ್ತಿಧರ್ಮವೆಂದು ಹೇಳುವ ನಿವೃತ್ತಿಪದವು ಇಲ್ಲ. ನಿವೃತ್ತಿಧರ್ಮವು ಯತಿಗಳಿಗೆ ಮಾತ್ರ ಸಂಬಂಧಪಟ್ಟದ್ದಾದರೆ ಯತಿಗಳ ಧರ್ಮ ಹೇಳಿರುವುದೆಂಬ ಮಾತ್ರದಿಂದಲೇ ನಿವೃತ್ತಿಧರ್ಮವೆಂದು ಅರ್ಥಮಾಡಬಹುದಾಗಿತ್ತು. ಆದರೆ ನಿಷ್ಕಾಮ ಕರ್ಮರೂಪವಾದ ನಿವೃತ್ತಿಧರ್ಮವು ಗೃಹಸ್ಥಾಶ್ರಮಿಗಳಿಗೂ, ಸಂನ್ಯಾಸಿಗಳಿಗೂ ಎಲ್ಲರಿಗೂ ಸಂಬಂಧಪಟ್ಟದ್ದಾಗಿರುತ್ತದೆ. ಆದರಿಂದ ಮೇಲಿನ ಶ್ಲೋಕಕ್ಕೆ 'ಗೃಹಸ್ಥಾಶ್ರಮಿಗಳಿಗು ಸಂಬಂಧಪಟ್ಟ ನಿವೃತ್ತಿಧರ್ಮವೇ ಗೀತೆಯಲ್ಲಿ ಹೇಳಿರುವುದಿಲ್ಲ. ಯತಿಗಳಿಗೆ ಸಂಬಂಧಿಸುವ ನಿವೃತ್ತಿಧರ್ಮವೂ ಹೇಳಲ್ಪಟ್ಟಿತು' ಎಂದು ಅರ್ಥವಾಗುವುದು. ಮತ್ತು ಆ ಶ್ಲೋಕದಲ್ಲಿ ಸಂನ್ಯಾಸಗ್ರಹಣಮಾಡದೇನೇ ಯಾವತ್ತನ್ನೂ ಚಾತುರ್ವರ್ಣ್ಯವಿಹಿತವಾದ ನಿಷ್ಕಾಮ ಕರ್ಮವನ್ನು ಮಾಡುವುದೇ ಪ್ರವೃತ್ತಿಧರ್ಮವೆಂದು ಹೇಳಲಿಲ್ಲ. ಆದುದರಿಂದ ಈ ಶ್ಲೋಕದ ಆಧಾರದಿಂದ ಗೀತೆಯು ಪ್ರವೃತ್ತಿಪರವಾದುದು ಎಂದು ಹೇಳುವುದು ಯುಕ್ತವಲ್ಲ. ಗೀತೆಯಲ್ಲಿ ಯಾವರೂ ಸಂನ್ಯಾಸಗ್ರಹಣಮಾಡದವೇ ಕರ್ಮಗಳನ್ನು ಮಾಡಬೇಕೆಂತ ಎಲ್ಲಿಯೂ ಹೇಳಲಿಲ್ಲ. ಆದರೆ ಸಂನ್ಯಾಸಿಯೇ ಆಗಲಿ ಗೃಹಸ್ಥಾಶ್ರಮಿಯೇ ಆಗಲಿ ಫಲವನ್ನಾಶಿಸದೆ ಸಿದ್ಧಿಯಾಗಲಿ, ಆಗದೇಯಿರಲಿ, ಸಮಬುದ್ಧಿಯಾಗಿ ಕೃಷ್ಣಾರ್ಪಣ ಬುದ್ಧಿಯಿಂದ ತನ್ನ ವರ್ಣಕ್ಕೂ ಆಶ್ರಮಕ್ಕೂ ಅನುರೂಪವಾದ ಕರ್ಮಗಳವರೆ ನಿವೃತ್ತಿಧರ್ಮವನ್ನು ಮಾಡಬೇಕೆಂಬುದೇ ಗೀತೆಯ ಸಿದ್ಧಾಂತ

ವಾಗಿರುವುದು. ಗೀತೆಯು ಪ್ರವೃತ್ತಿಧರ್ಮವನ್ನು ಹೇಳುವುದಿಲ್ಲ. ಮ॥ ರಾ॥ ತಿಲಕರವರು ಗೀತಾರಹಸ್ಯದ ೮೨೯ನೆಯ ಪುಟದಲ್ಲಿ "ಕರ್ಮಗಳಲ್ಲಿ, ಫಲದ ಆಶೆಯಿಂದ ಮಾಡುವ ಕರ್ಮವು ಕಾಮ್ಯವೆಂತಲೂ, ಫಲದ ಆಶೆಯಿಲ್ಲದೆ ಮಾಡುವುದು ನಿಷ್ಕಾಮಕರ್ಮವೆಂತಲೂ ಎರಡು ಪ್ರಭೇದಗಳುಂಟು. ಮನುಸ್ಮೃತಿಯಲ್ಲಿ ಇವುಗಳಿಗೆ, ಫಲದ ಆಶೆಯಿಂದ ಮಾಡುವುದು ಪ್ರವೃತ್ತಿಕರ್ಮವೆಂತಲೂ, ಅದರ ಆಶೆಯನ್ನಿಡದೆ ಮಾಡುವ ಕರ್ಮವು ನಿವೃತ್ತಿಕರ್ಮವೆಂತಲೂ ಲಕ್ಷಣಗಳನ್ನೇರ್ಪಡಿಸಿರುವರು. (ಮನುಸ್ಮೃತಿ ೧೨ನೆಯ ಅ. ೮೮+೮೯)" ಎಂದು ಬರೆದು ಇರುತ್ತಾರೆ. ಆದರೆ ಪ್ರಕೃತ ಅವರಿಗೆ ಆ ಮನುಸ್ಮೃತಿಯ ವಿಸ್ಮೃತಿ (ಮರವು) ಉಂಟಾಗಿ ನಿಷ್ಕಾಮಕರ್ಮವೆ ಪ್ರವೃತ್ತಿಧರ್ಮವೆಂದು ಬರೆಯುವುದನ್ನು ನೋಡಿದರೆ ಆಶ್ಚರ್ಯವಾಗುವುದು. ಅಥವಾ ಗೀತೆಯು ನಿವೃತ್ತಿಕರ್ಮವನ್ನು ಹೇಳುವುದು ಎಂದಕೂಡಲೇ ಶಂಕರಾಚಾರ್ಯರಿಗೆ ಅಭಿಮತನಾದ ಸರ್ವಕರ್ಮತ್ಯಾಗರೂಪವಾದ ಕರ್ಮಸಂನ್ಯಾಸವೇ ಗೀತೆಯ ಮುಖ್ಯಾರ್ಥವೆಂಬುದಾಗಿ ತಮಗೆ ಅಭಿಮತವಾದ ಕರ್ಮಯೋಗವು ನಷ್ಟವಾದೀತೆಂಬ ಭಯದಿಂದಲೇ ನಿಷ್ಕಾಮಕರ್ಮವು ಪ್ರವೃತ್ತಿಕರ್ಮವೆಂದೂ, ಗೀತೆಯು ಅದನ್ನೇ ಹೇಳುತ್ತದೆಂದೂ ಬರೆದಿರುವಂತೆ ತೋರುತ್ತದೆ. ಆದರೆ ಮೇಲಿನ ಪ್ರಮಾಣದಿಂದ ನಿಷ್ಕಾಮಕರ್ಮವೂ ಪ್ರವೃತ್ತಿಕರ್ಮವೂ ಬೇರೆಬೇರೆಯಾಗಿ ಸಿದ್ಧವಾಗುವುದೇ ಹೊರತು ಇವೆರಡು ಎಂದಿಗೂ ಒಂದೇ ಆಗಲಾರದು. ಗೀತೆಯು ನಿಷ್ಕಾಮಕರ್ಮವನ್ನೇ ವಿಧಾನಮಾಡುವುದಾದುದರಿಂದ ಪ್ರವೃತ್ತಿಕರ್ಮ ಪ್ರತಿಪಾದಕವೆಂದು ಹೇಳತಕ್ಕುದಲ್ಲ. ಗೀತಾರಹಸ್ಯದಲ್ಲಿ ಇನ್ನೂ ಅನೇಕ ಸಂದರ್ಭಗಳಲ್ಲಿಯೂ ಗೀತೆಯು ಪ್ರವೃತ್ತಿಕರ್ಮ ಪ್ರತಿಪಾದಕವೆಂದು ಬರೆದಿದೆ. ಆ ಸ್ಥಳಗಳಲ್ಲೆಲ್ಲಾ ನಾವು ಮೇಲೆಹೇಳಿದ ದೋಷಗಳು ಬರುತ್ತಲೇ ಇರುವುವೆಂದು ತಿಳಿಯುವುದು ವಾಚಕರಿಗೆ ಕರ್ತವ್ಯವಾಗಿದೆ.

ಗೀತಾರಹಸ್ಯದ ಪ್ರಸ್ತಾವನೆಯ ೨ನೆಯ ಪುಟದಲ್ಲಿ "ಸಾಂಸಾರಿಕಕರ್ಮಗಳು ಗೌಣ ಮತ್ತು ತ್ಯಾಜ್ಯ ಎಂದು ವ್ಯವಸ್ಥೆ ಮಾಡಿ, ಬ್ರಹ್ಮಜ್ಞಾನ ಭಕ್ತಿ ಮೊದಲಾದ ನಿವೃತ್ತಿಪರ ಮೋಕ್ಷ

ಮಾರ್ಗವನ್ನೇ ಗೀತೆಯು ನಿರೂಪಿಸಿರುವುದೆಂಬುದು ನಮಗೆ ಅಸಮ್ಮತವಾದರೂ ಗೀತೆಯಲ್ಲಿ ಮೋಕ್ಷಮಾರ್ಗ ವಿವೇಚನೆಯು ಸ್ವಲ್ಪವೂ ಇಲ್ಲವೆಂಬುದು ಕೂಡ ನಮಗೆ ಸಮ್ಮತವಲ್ಲವೆಂಬುದನ್ನು ನಾವು ಪ್ರಾರಂಭದಲ್ಲಿಯೇ ಹೇಳುವೆವು" ಎಂದು ಬರೆದಿರುವುದು. ಇದರಿಂದ ಗೀತೆಯಲ್ಲಿ ಸಾಂಸಾರಿಕ ಕರ್ಮಗಳು ಮತ್ತು ಬ್ರಹ್ಮಜ್ಞಾನ ಭಕ್ತಿ ಮೊದಲಾದ ಮೋಕ್ಷಮಾರ್ಗಗಳೂ ಈ ಉಭಯವೂ ನಿರೂಪಣ ಮಾಡಲ್ಪಟ್ಟವೆಯೆಂದು ತಿಲಕರ ಅಭಿಪ್ರಾಯವಿದ್ದಂತೆ ತೋರುತ್ತದೆ. ಆದರೆ ಇದು ಸರಿಯಾದುದಲ್ಲ. ಏತಕ್ಕೆಂದರೆ!—ಕರ್ಮಗಳಲ್ಲಿ 'ನಿಷಿದ್ಧವು, ಉದಾಸೀನವು, ಮತ್ತು ವಿಹಿತವು' ಎಂದು ಮೂರು ಭೇದಗಳು ಉಂಟು. "ನಪರದಾರಾನ್ ಗಚ್ಛೇತ್, ನಸುರಾಂಪಿಬೇತ್; ನಪಲಾಂಡುಂಭಕ್ಷಯೇತ್" ಇತ್ಯಾದಿ ಶ್ರುತಿಗಳಿಂದ ನಿಷಿದ್ಧವಾದ ಪರಸ್ತ್ರೀಗಮನ, ಮದ್ಯಪಾನ, ಪಲಾಂಡುಭಕ್ಷಣ ಇವೇ ಮೊದಲಾದುವು ನಿಷಿದ್ಧಕರ್ಮಗಳು. ಹಸ್ತಚಾಲನಾದಿಗಳು (ಕುಳಿತಿರುವಾಗ ಮಾಡುವ ನಾನಾಬಗೆಯ ಅಂಗಚೇಷ್ಟೆಗಳು) ಉದಾಸೀನ ಕರ್ಮವೆಂದರ್ಥ. ವೇದಶಾಸ್ತ್ರ ಪುರಾಣಾದಿಗಳಿಂದ ಮಾಡಲ್ಪಡತಕ್ಕದೆಂದು ಸಿದ್ಧವಾದ ಸಂಧ್ಯಾವಂದನ, ಯಜ್ಞ, ದಾನ, ತಪಸ್ಸು ಮೊದಲಾದುವು ವಿಹಿತಕರ್ಮವೆಂದು ಸಿದ್ಧವಾಗಿವೆ. ಈ ಮೂರುಬಗೆಯ ಕರ್ಮಗಳಲ್ಲಿ ತಿಲಕರವರಿಂದ ಹೇಳಲ್ಪಟ್ಟಿರುವ ಸಾಂಸಾರಿಕ ಕರ್ಮಗಳು ನಿಷಿದ್ಧವೆಂತಲೂ ಅಥವಾ ಉದಾಸೀನವೆಂತಲೂ ಹೇಳಲಿಕ್ಕಿಲ್ಲ. ಏತಕ್ಕೆಂದರೆ—ಗೀತೆಯು ನಿಷಿದ್ಧೋದಾಸೀನ ಕರ್ಮಗಳನ್ನು ಹೇಳಿರುವುದೆಂದು ತಿಲಕರು ಮತ್ತು ಇತರರು ಯಾರೂ ಒಪ್ಪಲಾರರು. ಉಳಿದುದು ವಿಹಿತಕರ್ಮವು. ಅದರಲ್ಲಿಯು ಐಹಿಕ ಎಂದರೆ ಈಶ್ವರಾನುಗ್ರಹ ಮೋಕ್ಷ ಇದರಿಂದ ಭಿನ್ನವಾದ ಸತೀಸುತಾದಿ ಸಂಪತ್ತನ್ನೂ ಸ್ವರ್ಗ ಮೊದಲಾದ ಉತ್ತಮ ಫಲವನ್ನೂ ಕೊಡತಕ್ಕ "ಜ್ಯೋತಿಷ್ಟೋಮೇನ ಸ್ವರ್ಗಕಾಮೋಯಜೇತ, ಪುತ್ರಕಾಮಃ ಪುತ್ರೇಷ್ಟ್ಯಾಯಜೇತ" ಇತ್ಯಾದಿ ಶ್ರುತಿಗಳಿಂದ ವಿಹಿತವಾದ ಕರ್ಮಗಳು ಕಾಮ್ಯವೆಂತಲೂ, "ಪರೀಕ್ಷ್ಯಲೋಕಾನ್ ಕರ್ಮಚಿತಾನ್ ಬ್ರಾಹ್ಮಣೋನಿರ್ವೇದಮಾಯಾತ್. ನಾಸ್ತ್ಯಕೃತಃ ಕೃತೇನ, ತದ್ವಿಜ್ಞಾನಾರ್ಥಂ

ಸಗುರುಮೇವಾಭಿಗಚ್ಛೇತ್। ಶಾನ್ತೋದಾನ್ತಉಪರತಸ್ತಿತಿಕ್ಷುಃ ಸಮಾ
ಹಿತೋಭೂತ್ವಾ ಆತ್ಮನ್ಯೇವಾತ್ಮಾನಂಪಶ್ಯೇತ್। ಆತ್ಮಾವಾಅರೇದ್ರಷ್ಟ
ವ್ಯಃ ಶ್ರೋತವ್ಯೋಮಂತವ್ಯೋ ನಿದಿಧ್ಯಾಸಿತವ್ಯಃ, ತಮೇವಂವಿದ್ವಾನ
ಮೃತಇಹಭವತಿ" ಇತ್ಯಾದಿ ಶ್ರುತಿಗಳಿಂದ ವಿಹಿತವಾದ ಭಗವದನುಗ್ರ
ಹ ಮತ್ತು ಮೋಕ್ಷ ಇವುಗಳಿಗೆ ಕಾರಣವಾದ ಕರ್ಮಗಳು ನಿಷ್ಕಾಮ
ಕರ್ಮವೆಂತಲು ಎರಡು ಬಗೆಯುಂಟು. ತಿಲಕರವರು ಹೇಳುವ ಸಾಂ
ಸಾರಿಕಕರ್ಮಗಳು ವಿಹಿತವಾದ ಸಕಾಮಕರ್ಮವೆಂದು ಹೇಳಿದರೆ ಗೀ
ತೆಯು ಅವುಗಳನ್ನು ಪ್ರತಿಪಾದಿಸಲಾಗದು. ಏತಕ್ಕೆಂದರೆ—"ಮಾಕ
ರ್ಮಫಲಹೇತುರ್ಭೂಃ, ಮುಕ್ತಸಂಗಃ ಸಮಾಚಾರ" ಇತ್ಯಾದಿ ವಾಕ್ಯ
ಗಳಿಂದ 'ಫಲೋದ್ದೇಶದಿಂದ ಕರ್ಮಮಾಡತಕ್ಕದ್ದಲ್ಲ. ಫಲೇಚ್ಛಾಸಂ
ಬಂಧವಿಲ್ಲದೆ ಕರ್ಮವನ್ನಾಚರಿಸು' ಎಂಬ ರೀತಿಯಾಗಿ ಸಕಾಮಕರ್ಮ
ನಿಷೇಧವೇ ಗೀತೆಯಲ್ಲಿ ಹೇಳಿರುವುದು. ಇವುಗಳನ್ನು ಬಿಟ್ಟಲ್ಲಿ ಉಳಿ
ಯುವುದು ನಿಷ್ಕಾಮಕರ್ಮವಾಗುವುದು.

ಅದು ಬ್ರಹ್ಮಚರ್ಯ, ಗೃಹಸ್ಥತೆ, ವಾನಪ್ರಸ್ಥ, ಸಂನ್ಯಾಸ ಈ
ನಾಲ್ಕು ಆಶ್ರಮಗಳಿಂದ ಯುಕ್ತರಾದ ಬ್ರಾಹ್ಮಣಾದಿ ವರ್ಣಗಳಿಗೆ "ಸ್ವ
ಕರ್ಮಣಾತಮಭ್ಯರ್ಚ್ಯ ಸಿದ್ಧಿಂವಿಂದತಿಮಾನವಃ। ಸ್ವೇಸ್ವೇಕರ್ಮಣ್ಯ
ಭಿರತಃ ಸಂಸಿದ್ಧಿಂಲಭತೆನರಃ॥" ಇತ್ಯಾದಿ ವಚನಗಳಿಂದ ವಿಹಿತವಾಗಿ
ರುವುದು. ಈ ಕರ್ಮಗಳಿಂದ ಭಗವದಾರಾಧನೆಯನ್ನು ಮಾಡಿ (ಭಗವ
ದರ್ಪಣಬುದ್ಧಿಯಿಂದ ಈ ಕರ್ಮಗಳನ್ನಾಚರಿಸಿ) ಅಂತಃಕರಣಶುದ್ಧಿ
ಯಾದನಂತರ "ಉಪದೇಕ್ಷ್ಯನ್ತಿತೇಜ್ಞಾನಂ ಜ್ಞಾನಿನಸ್ತತ್ವದರ್ಶಿ
ನಃ" ಎಂದರೆ—ತತ್ವವನ್ನು ಬಲ್ಲವರಾದ ಜ್ಞಾನಿಗಳು ಜ್ಞಾನವನ್ನು
ಪದೇಶ ಮಾಡುವರು ಎಂತಲೂ, "ಅನ್ಯೇತ್ವೇವಮಜಾನಂತಃಶ್ರುತ್ವಾ
ನ್ಯೇಭ್ಯಉಪಾಸತೆ" ಎಂದರೆ, ತತ್ವವನ್ನರಿಯದ ಜನರು ಗುರುಗ
ಳಿಂದ ತತ್ವಶ್ರವಣವನ್ನು ಮಾಡಿ ಉಪಾಸನೆಯನ್ನಾಚರಿಸುವರು, ಎಂ
ಬುದಾಗಿಯೂ ಪ್ರಮಾಣವಿರುವುದರಿಂದ ಗುರುಗಳಿಂದ ಜ್ಞಾನೋಪದೇ
ಶವನ್ನು ಹೊಂದಬೇಕು. ಗುರುಗಳು ಎಂತಹ ಜ್ಞಾನವನ್ನು ಬೋಧಿ
ಸುವರೋ ಆ ಜ್ಞಾನಸ್ವರೂಪವು ಸಹ ಗೀತೆಯಲ್ಲಿ ನಿರೂಪಿಸಲ್ಪಟ್ಟದೆ.

ಹೇಗೆಂದರೆ:—“ದ್ವಾವಿಮೌ ಪುರುಷೌಲೋಕೇ ಕ್ಷರಶ್ಚಾಕ್ಷರಏವಚ । ಕ್ಷರಃಸರ್ವಾಣಿಭೂತಾನಿ ಕೂಟಸ್ಥೋಕ್ಷರಉಚ್ಯತೇ ॥ ಉತ್ತಮಃಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ । ಯೋಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯಈಶ್ವರಃ ॥ ಯಸ್ಮಾತ್ಕ್ಷರಮತೀತೋಹ ಮಕ್ಷರಾದಪಿಚೋತ್ತಮಃ । ಅತೋಸ್ಮಿಲೋಕೇವೇದೇಚ ಪ್ರಥಿತಃಪುರುಷೋತ್ತಮಃ ॥ ಯೋಮಾಮೇವಮಸಂಮೂಢೋ ಜಾನಾತಿಪುರುಷೋತ್ತಮಮ್ । ಸಸರ್ವವಿದ್ಭಜತಿಮಾಂ ಸರ್ವಭಾವೇನಭಾರತ ॥ ಇತಿಗುಹ್ಯತಮಂಶಾಸ್ತ್ರ ಮಿದಮುಕ್ತಂಮಯಾನಘ । ಏತದ್ಬುದ್ಧ್ವಾಬುದ್ಧಿಮಾನ್ ಸ್ಯಾತ್ ಕೃತಕೃತ್ಯಶ್ಚಭಾರತ ॥” ಎಂದರೆ—ಬ್ರಹ್ಮಾದಿ ಸಕಲರು ಕ್ಷರಪುರುಷರು. ಲಕ್ಷ್ಮೀದೇವಿ ಅಕ್ಷರರು. ಈ ಪುರುಷರಕಿಂತಲು ಪರಮಾತ್ಮನು ಭಿನ್ನನಾಗಿಯೂ, ಉತ್ತಮನಾಗಿಯೂ ಇರುವನು. ಆತನು ಸರ್ವಪ್ರಪಂಚವಲ್ಲೂ ಪ್ರವೇಶಮಾಡಿ ಸರ್ವವನ್ನೂ ರಕ್ಷಿಸುವನು. ಯಾವ ಪುರುಷನು ಮೋಹಶೂನ್ಯನಾಗಿ ಈ ತತ್ತ್ವವನ್ನು ತಿಳಿಯುವನೋ ಅವನೇ ಸರ್ವಜ್ಞನು. ಮತ್ತು ಈ ರೀತಿಯಿಂದಲೇ ಭಗವದುಪಾಸನೆಯನ್ನು ಮಾಡುವ ಪುರುಷನು ಅಪರೋಕ್ಷಜ್ಞಾನಿಯಾಗಿ ಕೃತಕೃತ್ಯನು ಎಂದರೆ ಮುಕ್ತನಾಗುವನು. ಈ ರೀತಿಯಾಗಿ ನಿರೂಪಿಸಲ್ಪಟ್ಟ ಈ ಜ್ಞಾನವು “ಶ್ರುತಿವಿಪ್ರತಿಪನ್ನಾ ತೇ ಯದಾಸ್ಥಾಸ್ಯತಿನಿಶ್ಚಲಾ” ಎಂಬ ರೀತಿಯಿಂದ ದೃಢವಾದ ನಂತರ ಮನನಾದ್ಯುಪಾಯಗಳಿಂದ ಈಶ್ವರಧ್ಯಾನವನ್ನು ಮಾಡಬೇಕು. ತದನಂತರ “ಧ್ಯಾನಯೋಗಪರೋನಿತ್ಯಂ ವೈರಾಗ್ಯಂ ಸಮುಪಾಶ್ರಿತಃ। ಸಮಃಸರ್ವೇಷುಭೂತೇಷು ಮದ್ಭಕ್ತಿಂ ಲಭತೇಪರಾಂ ॥ ಭಕ್ತ್ಯಾಮಾಮಭಿಜಾನಂತಿ ಯಾವಾನ್ಯಶ್ಚಾಸ್ಮಿತತ್ತ್ವತಃ।” ಈ ರೀತಿಯಾಗಿ ಭಗವಂತನಲ್ಲಿ ಭಕ್ತಿಯುಂಟಾಗಿ ಅಪರೋಕ್ಷಜ್ಞಾನವುಂಟಾಗುವುದು. ಮತ್ತು “ಪ್ರಿಯೋಹಿಜ್ಞಾನಿನೋತ್ಯರ್ಥಮಹಂ ಸಚಮಮಪ್ರಿಯಃ” ಎಂಬ ಶ್ಲೋಕದಲ್ಲಿ ಹೇಳಿದ ಪ್ರಕಾರ ಭಗವಂತನ ಪ್ರೀತಿ ಎಂದರೆ ಅನುಗ್ರಹ ಉಂಟಾಗುವುದು. ಅನಂತರ “ಸುಖಮಕ್ಷಯ್ಯಮಶ್ನುತೇ । ಸುಖೇನಬ್ರಹ್ಮಸಂಸ್ಪರ್ಶಮತ್ಯಂತಂ ಸುಖಮಶ್ನುತೇ” ಇತ್ಯಾದಿ ವಚನಗಳಿಂದ ವಿಹಿತವಾದ ಬ್ರಹ್ಮಪ್ರಾಪ್ತಿ

ಯಿಂದುಂಟಾಗುವ ಶಾಶ್ವತಸುಖರೂಪವಾದ ಮೋಕ್ಷವು ಉಂಟಾಗುವುದು. ಈ ರೀತಿಯಾಗಿ ಗೀತೆಯಲ್ಲಿ ಆಯಾ ಸ್ಥಳಗಳಲ್ಲಿರುವ ಕರ್ಮವಿಧಾಯಕ ವಾಕ್ಯಗಳನ್ನು ವಿಮರ್ಶೆಮಾಡಿದಲ್ಲಿ, ನಿಷ್ಕಾಮಕರ್ಮ, ಬ್ರಹ್ಮಜ್ಞಾನ, ಈಶ್ವರಭಕ್ತಿ ಇವೇ ಮೊದಲಾದ ಮೋಕ್ಷಮಾರ್ಗಕ್ಕನುಕೂಲವಾದ ನಿವೃತ್ತಿಕರ್ಮಗಳ ವಿಧಾನ ಉಂಟೇಹೊರತು ಸಾಂಸಾರಿಕಕರ್ಮಗಳ ವಿಧಾನವು ಗೀತೆಯಲ್ಲಿ ಎಲ್ಲಿಯೂ ಇಲ್ಲ. ತಿಲಕರವರು, ಸಾಂಸಾರಿಕಕರ್ಮಗಳು ಯಾವುವು? ಮತ್ತು ಅವು ಎಲ್ಲಿ ಹೇಳಿರುವುವು? ಎಂಬುದನ್ನು ಸ್ಪಷ್ಟವಾಗಿ ಹೇಳದೆ ಕೇವಲ ಮೋಕ್ಷಮಾರ್ಗ ನಿರೂಪಣವೇ ಗೀತೆಯಲ್ಲಿ ಮಾಡಲ್ಪಟ್ಟಿರುವುದೆಂಬುದು ನಮಗೆ ಸಮ್ಮತವಲ್ಲ ಎಂದು ಹೇಳೋಣ ಮಾತ್ರದಿಂದಲೇ ಗೀತೆಯು ಸಾಂಸಾರಿಕ ಕರ್ಮವನ್ನು ಪ್ರತಿಪಾದಿಸುವುದೆಂದು ಸಿದ್ಧವಾಗಲಾರದು. ಮತ್ತು “ಅಸಕ್ತಿರನಭಿಷ್ವಂಗಃ ಪುತ್ರದಾರಗೃಹಾದಿಷು। ಇಂದ್ರಿಯಾರ್ಥೇಷುವೈರಾಗ್ಯಂ॥ ಯಜ್ಞಾರ್ಥಾತ್ಕರ್ಮಣೋನ್ಯತ್ರ ಲೋಕೋಯಂಕರ್ಮಬಂಧನಃ” ಇತ್ಯಾದಿ ವಚನಗಳಿಂದ ಸಾಂಸಾರಿಕ ಕರ್ಮಗಳನ್ನು ಎಂದರೆ, ಭಗವದರ್ಪಣಬುದ್ಧಿಯಿಲ್ಲದೆ ಆತ್ಮೋಪಭೋಗಕ್ಕಾಗಿ ಮಾಡುವ ಕರ್ಮವನ್ನು ಮಾಡಕೂಡದೆಂತ ಸ್ಪಷ್ಟವಾಗಿ ನಿಷೇಧವನ್ನು ಮಾಡಿರುವರು.

ಗೀತಾರಹಸ್ಯದ ಪ್ರಸ್ತಾವನೆಯ ಏಳನೆಯ ಪುಟದಲ್ಲಿ ರಾ॥ ತಿಲಕರವರು “ಯಾವ ಯುಕ್ತಿಯಿಂದ ಕರ್ಮಾಚರಣವನ್ನು ಮಾಡಿದರೆ ಪಾಪಸಂಬಂಧವುಂಟಾಗದೆ ಮೋಕ್ಷವುಂಟಾಗುವುದೋ ಆ ಯುಕ್ತಿಯು ಎಂದರೆ—ಜ್ಞಾನಮೂಲಕವಾದ ಭಕ್ತಿಪ್ರಧಾನವಾದ ಕರ್ಮಯೋಗವೇ ಗೀತೆಯಲ್ಲಿ ಹೇಳಲ್ಪಟ್ಟಿರುವುದೆಂದು ನಮ್ಮ ಅಭಿಪ್ರಾಯ ಇರುವುದು.” ಎಂದು ಬರೆದಿರುವರು. ಆದರೆ ಜ್ಞಾನಮೂಲಕವಾದ ಭಕ್ತಿಪ್ರಧಾನವಾದ ಕರ್ಮಯೋಗವೆಂದರೆ ಏನು? ಜ್ಞಾನಪದದಿಂದ ಅಪರೋಕ್ಷಜ್ಞಾನವನ್ನು ಗ್ರಹಣಮಾಡಿದರೆ ಅದು ಕರ್ಮಕ್ಕೆ ಮೂಲವಾಗಲಾರದು. ಕರ್ಮೋಪಯುಕ್ತವಾದ ಶಾಸ್ತ್ರಜನ್ಯಜ್ಞಾನವನ್ನು ಸ್ವೀಕರಿಸಿದರೆ ಅದು ಮೋಕ್ಷಕ್ಕೆ ಕಾರಣವೆಂದು ಎಲ್ಲಿಯೂ ಹೇಳಿರುವುದಿಲ್ಲ. “ತಮೇವಂವಿದ್ವಾನ್ ಅಮೃತಇಹಭವತಿ ನಾನ್ಯಃ ಪಂಥಾವಿದ್ಯತೇಽಯನಾ

ಯು” ಇತ್ಯಾದಿ ಶ್ರುತಿಗಳಿಂದ “ಸಹಸ್ರಶೀರ್ಷತ್ವವೇ ಮೊದಲಾದ ಅನೇಕಗುಣವಿಶಿಷ್ಟನಾದ ಪರಮಾತ್ಮನ ಅಪರೋಕ್ಷಜ್ಞಾನದಿಂದಲೇ ಮೋಕ್ಷವುಂಟಾಗುವುದು. ಮೋಕ್ಷವು ಇನ್ನು ಯಾವ ವಿಧದಿಂದಲೂ ಉಂಟಾಗಲಾರದು” ಎಂದು ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಅದರಿಂದ ಕರ್ಮಾಪೇಕ್ಷವಾದ ಶಾಸ್ತ್ರಜನ್ಯಜ್ಞಾನವು ಮೋಕ್ಷಕಾರಣವಲ್ಲವೆಂದು ಸ್ಪಷ್ಟವಾಗುವುದು. ರಾ॥ ತಿಲಕರವರ ಗೀತಾರಹಸ್ಯದ ೪೨೭ ನೆಯ ಪುಟದಲ್ಲಿ “ಪರಮೇಶ್ವರನ ಅನುಭವಾತ್ಮಕ ಜ್ಞಾನದಿಂದಲೇ ಮೋಕ್ಷವುಂಟಾಗುವುದು” ಎಂತಲೂ, ೬೫೩ ನೆಯ ಪುಟದಲ್ಲಿ “ಮೋಕ್ಷಪ್ರಾಪ್ತಿಗೆ ಜ್ಞಾನವನ್ನು ಬಿಟ್ಟರೆ ಬೇರೆಯಾವ ಉಪಾಯವು ಇಲ್ಲ” ಎಂತಲೂ, ೬೫೬ ನೆಯ ಪುಟದಲ್ಲಿ “ಮೋಕ್ಷಕ್ಕೆ ಜ್ಞಾನವೊ ಸಾಧನವಾಗಿರುವುದು; ಕರ್ಮವು ಅಲ್ಲ” ಎಂತಲೂ ಬರೆದಿರುವುದು. ಇದರಿಂದ ಪರಮಾತ್ಮನ ಅಪರೋಕ್ಷಜ್ಞಾನದಿಂದಲೇ ಮೋಕ್ಷವುಂಟಾಗುವುದೆಂಬುದು ಸ್ಪಷ್ಟವಾಗುವುದು. ಆದುದರಿಂದ ಜ್ಞಾನಮೂಲಕ ಕರ್ಮಯೋಗದಿಂದ ಮೋಕ್ಷವುಂಟಾಗುವುದೆಂಬುದಾಗಿ ಬರೆದಿರುವುದು ಸರಿಯಾಗಿರುವುದಿಲ್ಲ.

ಗೀತಾರಹಸ್ಯದ ಪ್ರಸ್ತಾವನೆಯ ೮ ನೆಯ ಪುಟದಲ್ಲಿ—“ಪ್ರಾಚೀನಟೀಕಾಕರ್ತರು ತಮಗೆ ಅಭಿಮತವಾದ ಸಂಪ್ರದಾಯದ ಸಿದ್ಧ್ಯರ್ಥವಾಗಿ ಗೀತೆಯಲ್ಲಿರುವ ಕೆಲವು ಶ್ಲೋಕಗಳಿಗೆ ಕ್ಲಿಷ್ಟಾರ್ಥವನ್ನು ಬರೆದಿರುವರು. (ಅಧ್ಯಾಯ ೩. ಶ್ಲೋ. ೧೩. ೧೯. ಅಧ್ಯಾಯ ೬. ಶ್ಲೋ. ೩. ಅಧ್ಯಾಯ ೧೮. ಶ್ಲೋ. ೨.)” ಎಂದು ಬರೆದಿರುವರು. ಆದರೆ ಈ ಆಕ್ಷೇಪವು ಕರ್ಮವನ್ನು ಮಾಡಕೂಡದು ಎಂದು ಅರ್ಥ ಮಾಡುವ ಅದ್ವೈತ ಟೀಕಾಕರ್ತೃಗಳಿಗೆ ಸಂಬಂಧಪಡುತ್ತದೆ ಹೊರತು ದ್ವೈತಟೀಕಾಕರ್ತೃಗಳಿಗೆ ಸಂಬಂಧಪಡುವುದಿಲ್ಲ. ಏತಕ್ಕೆಂದರೆ— ದ್ವೈತಮತಾನುಯಾಯಿಗಳು ಮೇಲೆಕಂಡ ಶ್ಲೋಕಗಳಿಗೆ ಕರ್ಮವನ್ನು ಮಾಡಕೂಡದು ಎಂಬ ಅರ್ಥವನ್ನು ಬರೆದಿರುವುದಿಲ್ಲ.

ರಾ॥ ತಿಲಕರವರು “ಗೀತಾಗ್ರಂಥದ ತಾತ್ಪರ್ಯ ವಿಷಯದಲ್ಲಿ ಸಾಮಾನ್ಯವಾದ ವಾಚಕರಿಗೆ ಉಂಟಾಗುವ ಅನ್ಯಥಾ ಜ್ಞಾನವು ಬೇರೆ ಉಪಾಯದಿಂದ ದೂರವಾಗುವುದು ಸಾಧ್ಯವಲ್ಲ” ಎಂದು ಬರೆದಿರುವರು.

ಇಲ್ಲಿ ಅನ್ಯಥಾ ಜ್ಞಾನವೆಂದರೆ ಏನು? ನಾವು ಅಧ್ಯಾಸವಾದನಿರಾಸದಲ್ಲಿ ಹೇಳಿರುವ ಪ್ರಕಾರ ಬ್ರಹ್ಮನಲ್ಲಿ ಜಗತ್ತಿನ ಅಧ್ಯಾಸವು ಯುಕ್ತವಾಗುವುದಿಲ್ಲ. ಅಧ್ಯಸ್ತವಾದ ಅಂತಃಕರಣವೇ ಮೊದಲಾದ ಉಪಾಧಿಗಳಿಂದ ಪರಬ್ರಹ್ಮನಿಗೆ ಜೀವಭಾವವು ಬರುವುದಿಲ್ಲ. ಗೀತೆಯಲ್ಲಿ ಪ್ರಪಂಚವು ಮಿಥ್ಯಾಭೂತವಾದುದೆಂಬುದಾಗಿಯೂ, ಜೀವನಿಗೂ ಬ್ರಹ್ಮನಿಗೂ ಐಕ್ಯವುಂಟೆಂಬುದಾಗಿಯೂ ಹೇಳತಕ್ಕ ಶ್ಲೋಕವು ಒಂದಾದರೂ ಇಲ್ಲ. ಮತ್ತು "ಅಸತ್ಯಮಪ್ರತಿಷ್ಠಂತೇಜಗದಾಹುರನೀಶ್ವರಮ್" ಎಂಬ ಶ್ಲೋಕದಿಂದ ಪ್ರಪಂಚವು ಮಿಥ್ಯಾಭೂತವಾದುದೆಂದು ಹೇಳತಕ್ಕವರ ನಿಂದೆಯೂ, "ಈಶ್ವರೋಽಹಮಹಂಭೋಗೀ" ಎಂಬ ಶ್ಲೋಕದಿಂದ ಜೀವೇಶ್ವರರ ಅಭೇದವನ್ನು ಹೇಳತಕ್ಕವರ ನಿಂದೆಯೂ ಮಾಡಲ್ಪಟ್ಟಿರುವುದು. "ಉತ್ತಮಃ ಪುರುಷಸ್ತ್ವನ್ಯಃ" ಎಂಬ ಶ್ಲೋಕದಲ್ಲಿ ಜೀವೇಶ್ವರರ ಭೇದವು ಸ್ಪಷ್ಟವಾಗಿ ಹೇಳಲ್ಪಟ್ಟಿರುವುದು. ಇವರಿಂದ ಗೀತೆಯಲ್ಲಿ "ಪ್ರಪಂಚವು ಸತ್ಯವಾದುದು; ಜೀವಬ್ರಹ್ಮಭೇದವು ವಾಸ್ತವವಾದುದು" ಎಂಬ ಪ್ರಮೇಯಗಳೇ ಹೇಳಲ್ಪಟ್ಟಿರುವುವೆಂದು ಸಿದ್ಧಿಸುವುದೇ ಹೊರತು ಪ್ರಪಂಚವು ಮಿಥ್ಯಾಭೂತವಾದುದೆಂದೂ, ಜೀವಬ್ರಹ್ಮರಿಗೆ ಐಕ್ಯವುಂಟೆಂದೂ ಗೀತೆಯಲ್ಲಿ ಹೇಳಿರುವಂತೆ ಸಿದ್ಧವಾಗುವುದಿಲ್ಲ. "ತಸ್ಮಾದಸಕ್ತಃ ಸತತಂ ಕಾರ್ಯಂ ಕರ್ಮ ಸಮಾಚರ| ಜೋಷಯೇತ್ಸರ್ವಕರ್ಮಾಣಿ ವಿದ್ವಾನ್ಯುಕ್ತಃ ಸಮಾಚರನ್" ಇತ್ಯಾದಿ ಶ್ಲೋಕಗಳಿಂದ ಜ್ಞಾನೋತ್ತರ ಕಾಲದಲ್ಲಿ ಜ್ಞಾನಿಗಳಾದ ಪುರುಷರು ಕರ್ಮವನ್ನು ಮಾಡಬೇಕೆಂದು ಸಿದ್ಧಿಸುವುದು. ಹೀಗಿರಲು, 'ಪ್ರಪಂಚಮಿಥ್ಯಾತ್ವವು ಜೀವಬ್ರಹ್ಮರ ಐಕ್ಯವು ಜ್ಞಾನೋತ್ತರಕರ್ಮತ್ಯಾಗವು ಇವುಗಳೇ ಗೀತೆಯ ತಾತ್ಪರ್ಯಾರ್ಥಗಳಾಗಿರುವುವು' ಎಂಬ ಅನ್ಯಥಾಜ್ಞಾನವು ಸಾಮಾನ್ಯರಾದ ವಾಚಕರಿಗೆ ಉಂಟಾಗಿರುವುದು ಎಂದು ತಿಲಕರವರ ಅಭಿಪ್ರಾಯವಿದ್ದರೆ ಗೀತಾರಹಸ್ಯವನ್ನು ಪ್ರತಿಪಾದನಮಾಡಿ ಮೇಲೆಕಂಡ ಅನ್ಯಥಾಜ್ಞಾನವನ್ನು ದೂರಮಾಡುವುದು ಯುಕ್ತವಾಗಿರುವುದು. ಹಾಗಲ್ಲದೆ 'ಸಮಸ್ತವಾದ ಕ್ರಿಯೆಗಳು ತತ್ಸಾಧನೆಗಳು ತತ್ಕರ್ತೃಗಳು ಇವೇ ಮೊದಲಾದ ಸಕಲ ಪ್ರಪಂಚವೂ

ಬ್ರಹ್ಮನ ಅಜ್ಞಾನದಿಂದ ಕಲ್ಪಿತವಾದುದು. ಬ್ರಹ್ಮಜ್ಞಾನ ಉಂಟಾದ ನಂತರ ಸಮಸ್ತಪ್ರಪಂಚವೂ ನಿವೃತ್ತವಾಗುವುದು. ಅನಂತರ ಜ್ಞಾನಿಯಾದ ಪುರುಷನಿಗೆ ಕ್ರಿಯಾಸಾಧನವಾದ ವಸ್ತುಗಳ ಜ್ಞಾನವು ಉಂಟಾಗದೆ ಇರುವುದರಿಂದ ಜ್ಞಾನೋತ್ತರದಲ್ಲಿ ಜ್ಞಾನಿಯಾದವನು ಕರ್ಮಮಾಡುವುದು ಅಯುಕ್ತವಾದುದು.' ಇವೇ ಮೊದಲಾದುವುಗಳು ಸಿದ್ಧಾಂತಪ್ರಮೇಯಗಳು. "ಪಿತಾಸಿ ಲೋಕಸ್ಯ ಚರಾಚರಸ್ಯ ತ್ವಮಸ್ಯ ಪೂಜ್ಯಶ್ಚ ಗುರುರ್ಗರೀಯಾನ್। ನ ತ್ವತ್ಸಮೋಸ್ತ್ಯಭ್ಯಧಿಕಃ ಕುತೋನ್ಯೋ ಲೋಕತ್ರಯೇಪ್ಯಪ್ರತಿಮಪ್ರಭಾವ" ಇತ್ಯಾದಿ ಶ್ಲೋಕಗಳಿಂದ ಸಿದ್ಧವಾಗುವ 'ಈಶ್ವರಸರ್ವೋತ್ತಮತ್ವ, ಜಗತ್ಸತ್ಯತ್ವ, ಜೀವಬ್ರಹ್ಮಭೇದ ಇವುಗಳು ಅಯುಕ್ತವಾದವುಗಳು' ಎಂಬುದೇ ಅನ್ಯಥಾಜ್ಞಾನವು ಎಂದು ತಿಲಕರವರು ಅಭಿಪ್ರಾಯಪಟ್ಟಿದ್ದರೆ ತಿಲಕರವರ ಗೀತಾರಹಸ್ಯದಿಂದ ಈ ಅನ್ಯಥಾಜ್ಞಾನವು ಅಭಿವೃದ್ಧಿಗೊಳ್ಳುವುದೇ ಹೊರತು ದೂರವಾಗಲಾರದು. 'ಪ್ರಪಂಚವು ಸತ್ಯಭೂತವಾದುದು, ಜೀವೇಶ್ವರಭೇದವು ನಿಜವಾದುದು, ಈಶ್ವರನು ಸರ್ವೋತ್ತಮನಾದವನು' ಎಂಬುದೇ ಗೀತಾತಾತ್ಪರ್ಯಾರ್ಥವು. ಪ್ರಪಂಚಮಿಥ್ಯಾತ್ವವು ಜೀವಬ್ರಹ್ಮರ ಅಭೇದವು ಗೀತೆಯ ತಾತ್ಪರ್ಯಾರ್ಥವಲ್ಲ. ಈ ವಿಷಯಗಳನ್ನು ಆಯಾ ಪ್ರಕರಣಗಳಲ್ಲಿ ಸ್ಪಷ್ಟವಾಗಿ ನಿರೂಪಿಸುವೆವು.

ರಾ|| ರಾ|| ತಿಲಕರವರು, "ಗೀತೆಯಲ್ಲಿರುವ ಸಿದ್ಧಾಂತಗಳು ಭಾರತ ಮತ್ತು ಸಾಂಖ್ಯಶಾಸ್ತ್ರ ಮೊದಲಾದ ಮೂಲಗ್ರಂಥಗಳಿಂದ ಯಾವ ಸ್ಥಳದಲ್ಲಿ ಗೃಹೀತವಾಗಿರುವುದು ಎಂಬುದನ್ನು ನಿರೂಪಿಸುವೆವು" ಎಂಬುದಾಗಿ ಬರೆದಿರುವರು. ನಿರೀಶ್ವರವಾದಿಯಾದ ಕಪಿಲಋಷಿಯಿಂದ ನಿರ್ಮಿತವಾದ ಪ್ರಕೃತಿಯೇ ಜಗತ್ಕರ್ತೃ ಎಂಬುವ ಸಿದ್ಧಾಂತವನ್ನು ಪ್ರತಿಪಾದಿಸುವ ಸಾಂಖ್ಯಶಾಸ್ತ್ರವನ್ನೇ ತಿಲಕರವರು ಇಲ್ಲಿ ಅಂಗೀಕರಿಸಿದಂತೆ ತೋರುವುದು. ಆದರೆ ನಿರೀಶ್ವರಸಾಂಖ್ಯಶಾಸ್ತ್ರವು ಗೀತಾಸಿದ್ಧಾಂತಗಳಿಗೆ ಮೂಲವಾಗಲಾರದು. ಗೀತೆಯಲ್ಲಿರುವ ಸಿದ್ಧಾಂತಗಳಿಗೆ ಸಾಂಖ್ಯಶಾಸ್ತ್ರವನ್ನು ಪ್ರಮಾಣವಾಗಿ ತೆಗೆದುಕೊಳ್ಳುವುದೇ ಅಯುಕ್ತವು. ಗೀತೆಯಲ್ಲಿ ಅನೇಕ ಸ್ಥಳಗಳಲ್ಲಿ ಸಾಂಖ್ಯವೆಂಬ ಪದ

ವಿರುವುದು. ಆ ಪದಕ್ಕೆ ಸಾಂಖ್ಯಶಾಸ್ತ್ರವೆಂದು ತಿಲಕರು ಅರ್ಥ ಬರೆದಿರುವರು. 'ಸಾಂಖ್ಯರ ಪ್ರಕೃತಿಯು ಇಲ್ಲಿ ಗೃಹೀತವಾಗಿರುವುದು. ಸಾಂಖ್ಯರ ಪ್ರಕ್ರಿಯೆಯು ಗೀತೆಗೆ ಸಮ್ಮತವಾಗಿರುವುದು' ಎಂದು ಕೂಡ ಬರೆಯುತ್ತಾರೆ. ಆದರೆ ಇದು ಅವರ ಸಿದ್ಧಾಂತಕ್ಕೆ ವಿರುದ್ಧವಾದುದು. ಏತಕ್ಕೆಂದರೆ, ಸಾಂಖ್ಯರಿಂದ ಅಂಗೀಕರಿಸಲ್ಪಟ್ಟಿರುವ ಪ್ರಕೃತಿಯು ಸತ್ಯವಾದುದು. ಅದ್ವೈತ ಮತಾವಲಂಬಿಗಳಾದ ತಿಲಕರವರಿಂದ ಅಂಗೀಕರಿಸಲ್ಪಟ್ಟ ಪ್ರಕೃತಿಯಾದರೋ ಮಿಥ್ಯಾಭೂತವಾದುದು. ಆದುದರಿಂದ ಸಾಂಖ್ಯರ ಪ್ರಕೃತಿಯೇ ಗೀತೆಯಲ್ಲಿ ಹೇಳಿದೆಯೆಂಬುದು ಸರಿಯಾಗುವುದಿಲ್ಲ. ಸಾಂಖ್ಯಶಾಸ್ತ್ರದಲ್ಲಿ ಹೇಳಿರುವ ಕೆಲವು ಪ್ರಮೇಯವು ಗೀತೆಯಲ್ಲಿ ಹೇಳಿರಬಹುದು. ಅಷ್ಟು ಮಾತ್ರದಿಂದಲೇ ಗೀತಾಗ್ರಂಥಕ್ಕೆ ಸಾಂಖ್ಯಶಾಸ್ತ್ರವು ಮೂಲವೆಂದು ಹೇಳುವುದಾದರೆ, ಬೌದ್ಧ ಚಾರ್ವಾಕಾದಿ ಶಾಸ್ತ್ರಗಳಲ್ಲಿ ಉಕ್ತವಾದ ಕೆಲವು ಪ್ರಮೇಯಗಳೂ ಗೀತೆಯಲ್ಲಿ ಹೇಳಿರುವುದರಿಂದ ಆ ಶಾಸ್ತ್ರಗಳೂ ಕೂಡ ಗೀತೆಯ ಸಿದ್ಧಾಂತಕ್ಕೆ ಪ್ರಮಾಣವೆಂದು ಹೇಳಬೇಕಾಗುವುದು. ಆದುದರಿಂದ ಗೀತೆಯಲ್ಲಿರುವ ಸಾಂಖ್ಯಶಬ್ದಕ್ಕೆ ಜ್ಞಾನವೆಂದು ಅರ್ಥವನ್ನು ಹೇಳಬೇಕು. ಮತ್ತು ಕೆಲವು ಸ್ಥಳಗಳಲ್ಲಿ ಶ್ರೀಕಪಿಲನಾಮಕ ಪರಮಾತ್ಮನಿಂದ ಪ್ರಣೀತವಾದ ಶಾಸ್ತ್ರವೆಂದು ಅರ್ಥವನ್ನು ಹೇಳಬೇಕು. ಶ್ರೀಕಪಿಲನಾಮಕ ಪರಮಾತ್ಮನು, ಸಾಂಖ್ಯಶಾಸ್ತ್ರವನ್ನು ರಚಿಸಿದ ಕಪಿಲಋಷಿಯೂ ಪರಸ್ಪರ ಭಿನ್ನರಾಗಿರುವರೆಂಬ ವಿಷಯವು ಲೋಕಪ್ರಸಿದ್ಧವು. ಮತ್ತು ಶ್ರೀಶಂಕರಾಚಾರ್ಯರಿಗೂ ಸಹ ಈ ಅಂಶವು ಸಮ್ಮತವಾದುದು.

ಇದುವರೆಗೂ ರಾ|| ರಾ|| ತಿಲಕರವರು ಬರೆದ ಗೀತಾರಹಸ್ಯದ ಪ್ರಸ್ತಾವನೆಯಲ್ಲಿರುವ ಕೆಲವು ವಿಷಯಗಳ ಯುಕ್ತಾಯುಕ್ತತೆಯ ವಿಚಾರವನ್ನು ಮಾಡಿದುದಾಯಿತು. ಇನ್ನು ಮುಂದೆ ರಾ|| ರಾ|| ತಿಲಕರವರು ಗೀತೆಯ ಅರ್ಥವನ್ನು ಪಕ್ಷಪಾತವಿಲ್ಲದೆ ಬರೆದಿರುವರೋ ಅಥವಾ ತಮ್ಮ ಸಂಪ್ರದಾಯಾಗ್ರಹದಿಂದ ಆವಿಷ್ಟರಾಗಿ ಬರೆದಿರುವರೋ ಎಂಬುವ ಅಂಶವನ್ನು ವಿಚಾರ ಮಾಡುವೆವು.

(೧) ವ॥ ರಾ॥ ತಿಲಕರವರು ಪ್ರಾಚೀನ ಭಾಷ್ಯಕಾರರು ಗೀತಾರ್ಥವನ್ನು ಆಗ್ರಹಾವಿಷ್ಟರಾಗಿ ಬರೆದಿರುವರೆಂತಲೂ, ತಾವು ಆಗ್ರಹವಿಲ್ಲದೆ ಸರಳವಾದ ಅರ್ಥವನ್ನು ಬರೆಯುವೆವೆಂತಲೂ ಹೇಳಿರುವರು. ಆದರೆ ಇವರ ಹೇಳೋಣವು ಎಷ್ಟುಮಟ್ಟಿಗೆ ನಿಜವೆಂಬುವುದು ವಿಚಾರಮಾಡತಕ್ಕದಾಗಿದೆ. ರಾ॥ ಶ್ರೀ॥ ತಿಲಕರವರು ಗೀತಾರಹಸ್ಯದ ಕೊನೆಯ ಭಾಗದಲ್ಲಿ ಗೀತೆಯ ಶ್ಲೋಕಗಳಿಗೆ ಅರ್ಥವನ್ನು ಬರೆದಿರುವರು. ಹಾಗೂ ಗೀತಾರಹಸ್ಯದ ಇತರ ಭಾಗಗಳಲ್ಲಿ ತಾವು ಹೇಳಿರುವ ಸಿದ್ಧಾಂತಗಳಿಗೆ ಪ್ರಮಾಣವಾಗಿ ಗೀತೆಯ ಶ್ಲೋಕಗಳನ್ನು ಉದಾಹರಿಸಿರುವರು. ಯಾವ ಅರ್ಥಕ್ಕೆ ಪ್ರಮಾಣವಾಗಿ ಗೀತಾಶ್ಲೋಕವನ್ನು ಉದಾಹರಿಸಿರುವರೋ ಆ ಅರ್ಥಕ್ಕೂ ಗೀತೆಗೂ ಸಂಬಂಧವಿಲ್ಲವೆಂಬುವುದು ಅವರು ಬರೆದಿರುವ ಗೀತಾರ್ಥದಿಂದಲೇ ಗೊತ್ತಾಗುವುದು; ಅದು ಹೇಗೆಂದರೆ:—

ಗೀತಾರಹಸ್ಯ ಪುಟ ೧೯೭ ಪಂಕ್ತಿ ೪ ರಲ್ಲಿ 'ಸಾಂಖ್ಯರು ಪ್ರಕೃತಿ ಮತ್ತು ಪುರುಷ ಎಂಬ ಸ್ವತಂತ್ರವಾದ ಎರಡು ತತ್ತ್ವಗಳು ಉಂಟೆಂದು ಹೇಳುವರು. ಆದರೆ ಈ ದ್ವೈತವನ್ನು ಬಿಟ್ಟು ಪ್ರಕೃತಿಯು ಮತ್ತು ಪುರುಷನು ಒಬ್ಬನಾದ ನಿರ್ಗುಣಬ್ರಹ್ಮನ ವಿಭೂತಿರೂಪಗಳೆಂದು ವೇದಾಂತದ ಸಿದ್ಧಾಂತವಿರುವುದರಿಂದ ಗೀತೆಯು ಇದನ್ನು ಹೇಳುವುದು. (ಗೀತಾ ಅ. ೯. ಶ್ಲೋ. ೧೦)' ಎಂದು ರಾ॥ ತಿಲಕರವರು ಬರೆದಿರುವರು. ಹಾಗೆ ತಾವು ಹೇಳಿದ ವೇದಾಂತಸಿದ್ಧಾಂತಕ್ಕೆ ಪ್ರಮಾಣವಾಗಿ ಹೇಳಿರುವ ಗೀತೆಯ ೯ ನೆಯ ಅಧ್ಯಾಯದ ೧೦ ನೆಯ ಶ್ಲೋಕವು "ಮಯಾಧ್ಯಕ್ಷೇಣ ಪ್ರಕೃತಿಃ ಸೂಯತೇ ಸಚರಾಚರಂ । ಹೇತುನಾನೇನ ಕೌಂತೇಯ ಜಗದ್ವಿಪರಿವರ್ತತೇ" ಎಂಬುದಾಗಿ ಇರುವುದು. ಈ ಶ್ಲೋಕಾರ್ಥವನ್ನು 'ನಾನು ಅಧ್ಯಕ್ಷನಾಗಿ ಪ್ರಕೃತಿಯಿಂದ ಸಂಪೂರ್ಣ ಚರಾಚರ ಸೃಷ್ಟಿಯನ್ನು ಉಂಟುಮಾಡುವೆನು. ಇದರಿಂದಲೇ ಎಲೈ ಅರ್ಜುನನೇ! ಈ ಜಗದ್ವ್ಯಾಪಾರವು ನಡೆದಿರುವುದು' ಎಂದು ಅವರೇ ಬರೆದಿರುವರು. ಹೀಗಿರಲು 'ಪ್ರಕೃತಿಯು ಮತ್ತು ಪುರುಷನು ಒಬ್ಬ ನಿರ್ಗುಣಪರಬ್ರಹ್ಮನ ವಿಭೂತಿರೂಪಗಳು' ಎಂಬ ವೇ

ದಾಂತಸಿದ್ಧಾಂತಕ್ಕೆ ಈ ಶ್ಲೋಕವು ಹೇಗೆ ಪ್ರಮಾಣವಾದೀತು? ಈ ಸಿದ್ಧಾಂತವನ್ನು ಹೇಳುವ ಶಬ್ದವು ಬಂದಾಪರೂ ಈ ಶ್ಲೋಕದಲ್ಲಿಲ್ಲ. ಅದು ಇಲ್ಲವೆಂಬುವುದು ತಿಲಕರವರಿಗೆ ತಿಳಿಯುವುದೆಂದು ಅವರು ಬರೆದ ಗೀತಾರ್ಥದಿಂದಲೇ ವ್ಯಕ್ತವಾಗುತ್ತದೆ. ಆದರೂ ಅದ್ವೈತಸಿದ್ಧಾಂತಕ್ಕೆ ಈ ಶ್ಲೋಕವನ್ನು ಪ್ರಮಾಣವಾಗಿ ಹೇಳುವುದು ಆಗ್ರಹ ಮೂಲಕವೆಂದು ಸಂಸ್ಕೃತಜ್ಞರಾದವರಿಗೆ ಸ್ಪಷ್ಟವಾಗಿ ಕಂಡುಬರುವುದು.

(೨) ಗೀತಾರಹಸ್ಯ ಪುಟ ೧೯೮. ಪಂಕ್ತಿ ೮ ರಲ್ಲಿ 'ಗೀತೆಯಲ್ಲಿ ಭಗವಂತನು 'ಮಮಯೋನಿರ್ಮಹಬ್ರಹ್ಮ' ಎಂದರೆ ಪ್ರಕೃತಿಯು ನನ್ನ ಯೋನಿಯು, ಅಥವಾ ನನ್ನ ಸ್ವರೂಪವಾಗಿರುವುದು. (ಗೀ. ಅ. ೧೪. ಶ್ಲೋ. ೩.)' ಎಂದು ಬರೆದಿರುವುದು. ೧೪ ನೆಯ ಅಧ್ಯಾಯದ ೩ ನೆಯ ಶ್ಲೋಕವು "ಮಮಯೋನಿರ್ಮಹಬ್ರಹ್ಮ ತಸ್ಮಿನ್ಗರ್ಭಂ ದಧಾಮ್ಯಹಮ್ । ಸಂಭವಃ ಸರ್ವಭೂತಾನಾಂ ತತೋಭವತಿಭಾರತ ।" ಎಂಬುದು. ಈ ಶ್ಲೋಕಕ್ಕೆ ತಿಲಕರವರು ಬರೆದ ಅರ್ಥವು 'ಎಲೈ ಅರ್ಜುನನೆ! ಮಹದ್ಬ್ರಹ್ಮ ಎಂದರೆ ಪ್ರಕೃತಿಯು ನನ್ನ ಯೋನಿಯಾಗಿದೆ. ನಾನು ಅದರಲ್ಲಿ ಗರ್ಭವನ್ನಿಡುವೆನು. ಅನಂತರ ಅದರಿಂದ ಸರ್ವಭೂತಗಳೂ ಉಂಟಾಗುವುವು' ಎಂಬುದಾಗಿ ಇರುವುದು. ಇದರಲ್ಲಿ 'ಪ್ರಕೃತಿಯು ನನ್ನ ಸ್ವರೂಪಭೂತವಾದುದು' ಎಂಬ ಅರ್ಥವು ಯಾವ ಪದದಿಂದ ಲಬ್ಧವಾಗುವುದು? ಯೋನಿಶಬ್ದಾರ್ಥವು ಜನ್ಮಸ್ಥಾನವೆಂತ ಆಗುವುದು; ಸ್ವರೂಪವೆಂದು ಆಗಲಾರದು. ಹೀಗಿರಲು ಯೋನಿಶಬ್ದಕ್ಕೆ ಸ್ವರೂಪವೆಂಬರ್ಥವನ್ನು ಹೇಳಿರುವುದು ಆಗ್ರಹಮೂಲವೆ? ಅಲ್ಲವೆ? ಎಂಬುದನ್ನು ವಾಚಕರು ಊಹಿಸಬೇಕು.

(೩) ಗೀತಾರಹಸ್ಯ ಪುಟ ೧೯೮ ಪಂಕ್ತಿ ೨೧-೨೨, 'ಆದರೆ ಸತ್ಯವಾದಜ್ಞೇಯವು ಯಾವದೋ (ಗೀತಾ ಅ. ೧೩. ಶ್ಲೋ. ೧೨) ಅದು ಪ್ರಕೃತಿ ಮತ್ತು ಪುರುಷ ಎಂದರೆ ಜ್ಞಾನ, ಮತ್ತು ಜ್ಞಾತಾ ಇವುಗಳ ಆಚೆಗೆ ಇದ್ದು ಅದಕ್ಕೆ ಪರಮಪುರುಷನೆಂದು ಗೀತೆಯಲ್ಲಿ ಸಂಜ್ಞೆಯಿರುವುದು' ಎಂದು ಬರೆದಿರುವರು. 'ಬ್ರಹ್ಮಸತ್ಯಂ ಜಗನ್ಮಿಥ್ಯಾ'

ಎಂಬುವ ಅದ್ವೈತಸಿದ್ಧಾಂತವು ಗೀತೆಯಲ್ಲಿ ಹೇಳಿರುವುದೆಂದು ತಿಳಿಸುವುದಕ್ಕಾಗಿ ರಾ॥ ತಿಲಕರವರು “ಸತ್ಯವಾದ ಜ್ಞೇಯವು” ಎಂಬ ಶಬ್ದವನ್ನು ಪ್ರಯೋಗಮಾಡಿ, ಅದಕ್ಕೆ ಪ್ರಮಾಣಭೂತವಾಗಿ ಗೀತೆಯ ೧೩ ನೆಯ ಅಧ್ಯಾಯದ ೧೨ ನೆಯ ಶ್ಲೋಕವನ್ನು ಉದಾಹರಿಸಿರುವರು. ಆ ಶ್ಲೋಕವು “ಜ್ಞೇಯಂ ಯತ್ತತ್ಪ್ರವಕ್ಷ್ಯಾಮಿ ಯಜ್ಜ್ಞಾತ್ವಾಮೃತಮಶ್ನುತೇ । ಅನಾದಿಮತ್ಪರಂ ಬ್ರಹ್ಮ ನ ಸತ್ತನ್ನಾಸದುಚ್ಯತೇ ॥” ಎಂಬುದು. ಇದರಲ್ಲಿ “ಸತ್ಯವಾದ ಜ್ಞೇಯವು” ಎಂಬ ಅರ್ಥಕ್ಕೆ ಬೋಧಕವಾದ ಪದವಿಲ್ಲದಿದ್ದರೂ ಹೀಗೆ ಅರ್ಥ ಬರೆದಿರುವುದು ಆಗ್ರಹಮೂಲಕವೆಂದು ಸ್ಪಷ್ಟವಾಗಿ ಹೇಳಬಹುದು.

(೪) ಗೀತಾರಹಸ್ಯ ಪುಟ ೨೧೧. ಪಂಕ್ತಿ ೨೩-೨೪ ರಲ್ಲಿ “೧೮ ನೆಯ ಅಧ್ಯಾಯದ ೬೧ ನೆಯ ಶ್ಲೋಕದಲ್ಲಿ “ಎಲೈ ಅರ್ಜುನನೇ ಸರ್ವಪ್ರಾಣಿಗಳ ಶರೀರಗಳಲ್ಲಿ ಜೀವರೂಪದಿಂದ ಈಶ್ವರನು ವಾಸವಾಗಿದ್ದುಕೊಂಡು ಆತನು ತನ್ನ ಮಾಯೆಯಿಂದ ಸಮಸ್ತಭೂತಗಳನ್ನೂ ಯಂತ್ರಗಳಂತೆ ನಿಯಮನ ಮಾಡುವನು” ಎಂದು ಅರ್ಜುನನಿಗೆ ಉಪದೇಶಿಸಲ್ಪಟ್ಟಿದೆ” ಎಂದು ಬರೆದಿರುವರು. ೧೮ ನೆಯ ಅಧ್ಯಾಯದ ೬೧ ನೆಯ ಶ್ಲೋಕವು “ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ। ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ॥” ಎಂಬುದು. ಇದರ ಅರ್ಥವು, “ಎಲೈ ಅರ್ಜುನನೇ ಈಶ್ವರನು ಸರ್ವಪ್ರಾಣಿಗಳ ಹೃದಯದಲ್ಲಿದ್ದು ಯಂತ್ರಾರೂಢವಾದಂತೆ ಇರುವ ಸಮಸ್ತಪ್ರಾಣಿಗಳನ್ನು ನಿಯಮನಮಾಡುವನು” ಎಂದಾಗುವುದು. ಇದರಲ್ಲಿ “ಈಶ್ವರನು ಜೀವರೂಪದಿಂದ ಪ್ರಾಣಿಗಳ ಹೃದಯದಲ್ಲಿರುವನು” ಎಂದು ಹೇಳಿರುವುದಿಲ್ಲ. ಆದರೂ ಹಾಗೆ ಅರ್ಥವನ್ನು ಹೇಳುವುದು ಆಗ್ರಹಮೂಲಕವೇ ಸರಿ. ಅಲ್ಲದೆ “ಸ್ಮೃತೇಶ್ಚ” (ಬ್ರಹ್ಮಸೂತ್ರ ೧-೨-೬) ಈ ಸೂತ್ರದ ಶಾಂಕರಭಾಷ್ಯದಲ್ಲಿ “ಸ್ಮೃತಿಶ್ಚ ಶಾರೀರಪರಮಾತ್ಮನೋರ್ಭೇದಂ ದರ್ಶಯತಿ “ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ। ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ॥” ಇತ್ಯಾದ್ಯಾ” ಎಂದು ಶಂಕರಾಚಾರ್ಯರು ಹೇಳಿರುವರು.

ಮೇಲೆ ಕಂಡ ಶ್ಲೋಕವು ಶಾರೀರ ಎಂದರೆ ಜೀವನು ಮತ್ತು ಪರಮಾತ್ಮ ಇವರುಗಳಿಗೆ ಭೇದವನ್ನು ಹೇಳುವುದರಿಂದ ಶಂಕರಾಚಾರ್ಯರು, "ಸ್ಮೃತಿಶ್ಚ ಶಾರೀರಪರಮಾತ್ಮನೋರ್ಭೇದಂ ದರ್ಶಯತಿ" ಎಂಬ ಅರ್ಥಕ್ಕೆ ಈ ಶ್ಲೋಕವು ಪ್ರಮಾಣವೆಂದು ಹೇಳಿರಲು, ಯಾವ ಶ್ಲೋಕವು ಜೀವಬ್ರಹ್ಮರಿಗೆ ಭೇದಬೋಧಕವೆಂದು ಶಂಕರಾಚಾರ್ಯರು ಒಪ್ಪಿರುವರೋ ಅದೇ ಶ್ಲೋಕದಲ್ಲಿ 'ಜೀವರೂಪೇಣ' ಎಂಬ ಪದವನ್ನು ಸೇರಿಸಿ ಜೀವಬ್ರಹ್ಮರಿಗೆ ಐಕ್ಯವನ್ನು ಈ ಶ್ಲೋಕವು ಹೇಳುವುದೆಂದು ಹೇಳುವ ತಿಲಕರವರ ಅದ್ವೈತಮತದ ಆಗ್ರಹವು ಶಂಕರಾಚಾರ್ಯರಿಗಿಂತಲೂ ಅಧಿಕವಾಗಿರುವುದೆಂದು ಯಾರಾದರೂ ಹೇಳಬಹುದು.

(೫) ಗೀತಾರಹಸ್ಯ ಪುಟ ೨೦೩ ಪಂಕ್ತಿ ೧ ರಲ್ಲಿ 'ಅವ್ಯಯ ಮತ್ತು ಅಕರ್ತೃವಾದ ಪರಮಾತ್ಮನೊಬ್ಬನೇ ಪ್ರಾಣಿಗಳ ಹೃದಯದಲ್ಲಿ ಜೀವರೂಪದಿಂದ ಇರುವುದರಿಂದ (ಗೀ. ಅ. ೧೩. ಶ್ಲೋಕ ೩೧.)' ಎಂದಿದೆ. ಹದಿಮೂರನೇ ಅಧ್ಯಾಯದ ೩೧ ನೇ ಶ್ಲೋಕವು, "ಅನಾದಿತ್ವಾನ್ನಿರ್ಗುಣತ್ವಾತ್ ಪರಮಾತ್ಮಾಯಮವ್ಯಯಃ । ಶರೀರಸ್ಥೋಽಪಿ ಕೌಂತೇಯ ನಕರೋತಿ ನಲಿಪ್ಯತೇ ॥" ಎಂಬುದು. ಇದರ ಅರ್ಥವು 'ಅನಾದಿ ಮತ್ತು ನಿರ್ಗುಣನಾದುದರಿಂದ ಈ ಅವ್ಯಯನಾದ ಪರಮಾತ್ಮನು ಶರೀರದಲ್ಲಿ ಇದ್ದಾಗಲೂ, ಎಲೈ ಅರ್ಜುನನೇ, ಪರಮಾತ್ಮನು ಯಾವ ಕರ್ಮವನ್ನೂ ಕೂಡ ಮಾಡುವುದಿಲ್ಲ, ಹಾಗೂ ಯಾವ ಕರ್ಮದ ಸಂಬಂಧವನ್ನೂ ಉಂಟಾದವನಲ್ಲ' ಎಂದಿರುವುದೆಂದು ತಿಲಕರವರೇ ಬರೆದಿದ್ದಾರೆ. 'ಜೀವರೂಪದಿಂದ' ಎಂಬ ಅರ್ಥಬೋಧಕವಾದ ಪದವು ಯಾವುದು?

(೬) ಗೀ. ಪುಟ ೨೭೦. ಪಂಕ್ತಿ ೩೧ ರಲ್ಲಿ 'ನಮಾಂ ಕರ್ಮಾಣಿ ಲಿಂಪಂತಿ' ಎಂದರೆ, ನನಗೆ ಕರ್ಮಗಳ ಗುಣಗಳ ಸಂಬಂಧವು ಯಾವಾಗಲೂ ಇರುವುದಿಲ್ಲ (ಗೀ. ಅಧ್ಯಾಯ ೪. ಶ್ಲೋಕ ೧೪.)' ಎಂದು ರಾ|| ತಿಲಕರವರು ತಮಗೆ ಸಮ್ಮತವಾದ ಬ್ರಹ್ಮ ನಿರ್ಗುಣನೆಂಬ ಅರ್ಥದ ಸಿದ್ಧಿಗೋಸ್ಕರ ಬರೆದಿರುತ್ತಾರೆ. ೪ ನೆಯ ಅ. ೧೪ ನೆಯ ಶ್ಲೋಕವು "ನ ಮಾಂ ಕರ್ಮಾಣಿ ಲಿಂಪಂತಿ ನಮೇ ಕರ್ಮಫಲೇ ಸ್ಪೃಹಾ । ಇತಿ ಮಾಂ

ಯೋಽಭಿಜಾನಾತಿ ಕರ್ಮಭಿರ್ನ ಸ ಬಧ್ಯತೇ।" ಎಂಬುದು. ಇದರ ಅರ್ಥವನ್ನು "ನನಗೆ ಕರ್ಮಲೇಪವು ಎಂಬಂತೆ ಬಾಧೆಯು ಇಲ್ಲ. ಕಾರಣವೇನೆಂದರೆ ನನಗೆ ಕರ್ಮಗಳಿಂದುಂಟಾಗುವ ಫಲಗಳಲ್ಲಿ ಅಭಿಲಾಷೆಯಿಲ್ಲ. ಹೀಗೆಂದು ಯಾವನು ತಿಳಿಯುವನೋ ಅವನಿಗೂ ಕರ್ಮಬಾಧೆ ಉಂಟಾಗುವುದಿಲ್ಲ" ಎಂದು ಬರೆದಿರುವರು. ಇದರಲ್ಲಿ, 'ನನಗೆ ಗುಣಗಳ ಸಂಬಂಧವಿರುವುದಿಲ್ಲ' ಎಂಬ ಅರ್ಥವನ್ನು ಹೇಳುವ ಪದವಿಲ್ಲದಿರುವಾಗಲೂ, ಹೀಗೆ ಹೇಳುವುದು ಸಂಪ್ರದಾಯ ದೋಷವೇ ಸರಿ. 'ನನಗೆ ಕರ್ಮಸಂಬಂಧವಿಲ್ಲ, ಅರ್ಥಾತ್ ಗುಣಸಂಬಂಧವೂ ಇಲ್ಲ' ಎಂದು ತಿಲಕರವರು ಬರೆಯುತ್ತಾರೆ. ಕರ್ಮಗಳಿಗೂ ಗುಣಗಳಿಗೂ ಕಾರ್ಯಕಾರಣಭಾವ ಸಂಬಂಧವಿದ್ದರೆ, ಕರ್ಮಗಳನ್ನು ಹೇಳುವುದರಿಂದಲೇ ಗುಣಗಳನ್ನು ಹೇಳಿದಂತಾಗುತ್ತಿತ್ತು. ಕಾರ್ಯಕಾರಣಭಾವ ಸಂಬಂಧವಿದ್ದಲ್ಲಿ ಕಾರ್ಯಗ್ರಹಣದಿಂದ ಕಾರಣಗ್ರಹಣವು ಆಗುವುದುಂಟು. ಹೇಗೆಂದರೆ:—

'ಈ ವರ್ಷ ಬೆಳೆ ಚೆನ್ನಾಗಿದೆ' ಎನ್ನುವ ಮಾತ್ರದಿಂದಲೇ ಮಳೆಯು ಚೆನ್ನಾಗಿ ಆಗಿರುವುದೆಂದು ಹೇಳಿದಂತಾಗುವುದು. ಅದರಂತೆ ಕರ್ಮಲೇಪಕ್ಕೂ ಫಲದ ಇಚ್ಛೆಗೂ ಕಾರ್ಯಕಾರಣಭಾವವಿರೋಣದರಿಂದ 'ಕರ್ಮಲೇಪವಿಲ್ಲ' ಎಂಬುವುದರಿಂದ ಅರ್ಥಾತ್ 'ಕರ್ಮಫಲದ ಇಚ್ಛೆಯೂ ಇಲ್ಲ' ಎಂದು ಸಿದ್ಧಿಸಬಹುದು. ಆದರೆ ಕರ್ಮಲೇಪಕ್ಕೂ ಗುಣಗಳಿಗೂ ಕಾರ್ಯಕಾರಣಭಾವವು ಇಲ್ಲದೆ ಇರೋಣದರಿಂದ 'ಕರ್ಮಲೇಪವಿಲ್ಲ' ಎಂದು ಹೇಳುವುದರಿಂದ 'ಗುಣಗಳೂ ಇಲ್ಲ' ಎಂದು ಹೇಳುವುದಕ್ಕಾಗುವುದಿಲ್ಲ. ಹೀಗಿರಲು, ರಾ॥ ತಿಲಕರವರು 'ನಮಾಂ ಕರ್ಮಾಣಿಲಿಂಪಂತಿ' ಎಂಬ ಶ್ಲೋಕಕ್ಕೆ ಅರ್ಥವನ್ನು ಹೇಳುವಾಗ 'ನನಗೆ ಕರ್ಮಲೇಪವಿಲ್ಲ, ಅರ್ಥಾತ್ ಗುಣಗಳ ಸಂಬಂಧವೂ ಇಲ್ಲ' ಎಂದು ಬರೆಯುವುದು ಅಜ್ಞಾನಮೂಲಕವೆ ಅಲ್ಲವೆ?

(೩) ಗೀ. ಪುಟ ೩೦೩. ಪಂಕ್ತಿ ೩೧ರಲ್ಲಿ 'ಭಗವಂತನು ಯಾವ ಮಾಯೆಯಿಂದ ವ್ಯಕ್ತ ಎಂದರೆ ಸಗುಣರೂಪವನ್ನು ಧರಿಸುವನೋ (ಗೀತ ಅ. ೭. ಶ್ಲೋಕ ೨೫.)' ಎಂದು ಬರೆದಿರುವುದು.

ಆ ಶ್ಲೋಕವು, “ನಾಹಂಪ್ರಕಾಶಸ್ಸರ್ವಸ್ಯಯೋಗಮಾಯಾಸಮಾವೃತಃ। ಮೂಢೋಽಯಂನಾಭಿಜಾನಾತಿಲೋಕೋಮಾಮಜಮವ್ಯಯಂ॥” ಎಂಬಿರುವುದು. ಅದರ ಅರ್ಥವು ‘ನಾನು ಯೋಗರೂಪವಾದ ಮಾಯೆಯಿಂದ ಆಚ್ಛಾದಿತನಾಗಿರುವುದರಿಂದ ಯಾರಿಂದಲೂ ಕಾಣಲ್ಪಡುವನಲ್ಲ; ನಾನು ಅಜನು ಮತ್ತು ಅವ್ಯಯನೆಂಬುದನ್ನು ಮೂಢರು ತಿಳಿಯಲಾರರು’ ಎಂಬಿರುವುದು. ಹೀಗಿರಲು ‘ಭಗವಂತನು ತನ್ನ ಮಾಯೆಯಿಂದ ಸಗುಣರೂಪವನ್ನು ಧರಿಸುವನು’ ಎಂಬರ್ಥವು ಹೇಗೆ ಬಂದಿತು? ಈ ಶ್ಲೋಕದಲ್ಲಿ ತಿಲಕರ ಅರ್ಥವನ್ನು ತಿಳಿಸುವ ಶಬ್ದವು ಒಂದುಮಾತ್ರವೂ ಇಲ್ಲ.

(೮) ಗೀ. ಪು. ೨೧೨ ಪ. ೭ ರಲ್ಲಿ “ಅವಿಭಕ್ತಂವಿಭಕ್ತೇಷು” ಎಂಬ ಗೀತಾ ಶ್ಲೋಕದಲ್ಲಿ “ವಿಭಕ್ತ” ಎಂದರೆ ‘ಭಿನ್ನಭಿನ್ನವಾಗಿರುವ ಪದಾರ್ಥಗಳ ಅವಿಭಕ್ತತ್ವ ಅಂದರೆ ಏಕತ್ವ ಯಾವುದರಿಂದ ತಿಳಿಯುವುದೋ ಅದೇ ನಿಜವಾದ ಜ್ಞಾನವು ಎಂದು ಜ್ಞಾನಕ್ಕೆ ಲಕ್ಷಣವನ್ನು ಹೇಳಿರುವರು.’ (ಗೀ. ಅ ೧೮ ಶ್ಲೋ ೨೦) ಎಂದು ತಿಲಕರವರು ಬರೆದಿರುವರು. ೧೮ನೇ ಅ. ೨೦ನೆಯ ಶ್ಲೋಕವು, “ಸರ್ವಭೂತೇಷು ಯೇನೈಕಂಭಾವಮವ್ಯಯಮೀಕ್ಷತೇ। ಅವಿಭಕ್ತಂವಿಭಕ್ತೇಷುತಜ್ಜ್ಞಾನಂ ವಿದ್ಧಿಸಾತ್ವಿಕಂ॥” ಎಂಬುದು. ಈ ಶ್ಲೋಕಕ್ಕೆ ತಿಲಕರವರು ಬರೆದರ್ಥವು ‘ವಿಭಕ್ತವೆಂದರೆ ಭಿನ್ನಭಿನ್ನವಾಗಿರುವ ಸರ್ವಭೂತಗಳಲ್ಲಿ ಅವಿಭಕ್ತ ಅಂದರೆ ಒಂದಾದ ಮತ್ತು ಅವ್ಯಯವಾದ ತತ್ವವಿರುವುದೆಂದು ಯಾವುದರಿಂದ ತಿಳಿಯುವುದೋ ಅದೇ ಸಾತ್ವಿಕವಾದ ಜ್ಞಾನವು’ ಎಂದಿದೆ. ‘ಭಿನ್ನಭಿನ್ನವಾದ ಸರ್ವಭೂತಗಳಲ್ಲಿ ಒಬ್ಬನೇ ಪರಮಾತ್ಮನಿರುವನು. ವಸ್ತುಗಳನೇಕಗಳಿದ್ದಾಗ್ಯೂ ಅವುಗಳಲ್ಲಿರುವ ಪರಮಾತ್ಮನು ಒಬ್ಬನೇ’ ಎಂದು ಈ ಶ್ಲೋಕದ ತಾತ್ಪರ್ಯವು. ಹೀಗಿರುವುದರಿಂದ ‘ವಿಭಕ್ತವೆಂದರೆ ಭಿನ್ನಭಿನ್ನವಾಗಿರುವ ಪದಾರ್ಥಗಳ ಏಕತ್ವವು ಅಂದರೆ ಅನೇಕ ಪದಾರ್ಥಗಳ ಐಕ್ಯವು ಯಾವುದರಿಂದ ತಿಳಿಯುವುದೋ ಅದು ನಿಜವಾದ ಜ್ಞಾನವು’ ಎಂದು ತಿಲಕರವರಿಂದ ಬರೆಯಲ್ಪಟ್ಟ ಅರ್ಥವು ಅದ್ವೈತಮತದ ಆಗ್ರಹಮೂಲಕವಲ್ಲವೆಂದು ಯಾರೂ ಹೇಳಲಾರರು.

(೯) ಗೀ. ರ. ಪ್ರ. ೨೯೬ ಪ. ೧೯ ರಲ್ಲಿ, "ಇಹೈವತೈರ್ಜಿತಸ್ಸರ್ಗೋಯೇಷಾಂಸಾಮ್ಯೇಸ್ಥಿತಂಮನಃ। (ಗೀ. ಅ. ೫. ಶ್ಲೋ. ೧೯) ಯಾವ ಪುರುಷನ ಮನಸ್ಸಿನಲ್ಲಿ ಸರ್ವಭೂತಾಂತರ್ಗತನಾಗಿರುವ ಬ್ರಹ್ಮ ಮತ್ತು ಜೀವರುಗಳಿಗೆ ಐಕ್ಯವೆಂಬುವ ಸಾಮ್ಯವು ಸ್ಥಿರವಾಗಿರುವುದೋ ಅವನು ಜನ್ಮಮರಣಾದಿಗಳನ್ನು ದಾಟಿರುವನು" ಎಂದು ತಿಲಕರವರು ಅರ್ಥವನ್ನು ಬರೆಯುತ್ತಾರೆ 'ಸಾಮ್ಯ' ಎಂಬ ಪದಕ್ಕೆ ಬ್ರಹ್ಮಾತ್ಮೈಕ್ಯವೆಂಬ ಅರ್ಥವನ್ನು ಯಾವಕೋಶದಲ್ಲಿಯೂ ಹೇಳಿರುವುದಿಲ್ಲ. ರಾ॥ ತಿಲಕರವರು ಬರೆವ ಅದ್ವೈತಮತಕ್ಕೆ ಅನುಕೂಲವಾದ ಕಾಲ್ಪನಿಕ ನಿಘಂಟಿನಲ್ಲಿ ಸಾಮ್ಯಶಬ್ದಕ್ಕೆ ಅವರು ಹೇಳಿದ ಅರ್ಥವು ಇದ್ದರೂ ಇರಬಹುದು.

(೧೦) ಗೀ. ಪುಟ ೨೯೬ ಪ. ೨೦ ರಲ್ಲಿ "ಭೂತಪೃಥಗ್ಭಾವಮೇಕಸ್ಥಮನುಪಶ್ಯತಿ" ಸರ್ವಭೂತಗಳಲ್ಲಿರುವ ಭೇದವು ನಷ್ಟವಾಗಿ ಅವುಗಳೆಲ್ಲವೂ ಯಾವ ಪುರುಷನಿಗೆ ಏಕಸ್ಥ ಎಂದರೆ ಪರಮೇಶ್ವರ ಸ್ವರೂಪವಾಗಿ ಕಾಣುವವೋ ಆ ಪುರುಷನು ಬ್ರಹ್ಮನನ್ನು ಹೊಂದುವನು (ಗೀ. ಅ ೧೩ ಶ್ಲೋ ೩.)" ಎಂದು ಬರೆಯಲ್ಪಟ್ಟಿರುವುದು; ಮತ್ತು ಪು ೭೯೨ ಪ. ೨೪ ರಲ್ಲಿ 'ಯಾವಕಾಲಕ್ಕೆ ಸರ್ವಭೂತಗಳಲ್ಲಿರುವ ಪೃಥಕ್ತ್ವ' ಎಂದರೆ ಭೇದವು ಏಕಸ್ಥ ಎಂದರೆ ಏಕರೂಪದಿಂದ ಕಾಣುವದೋ "ತತಏವಚ ವಿಸ್ತಾರಂಬ್ರಹ್ಮಸಂಪದ್ಯತೇತದಾ" ಆ ಏಕತ್ವದಿಂದಲೇ ವಿಶ್ವವಿಸ್ತಾರವು ಉಂಟಾಗಿರುವುದು" ಎಂದು ಬರೆಯಲ್ಪಟ್ಟಿದೆ. ಅದು ಸರಿಯಾದುದಲ್ಲ. ಏಕೆಂದರೆ, "ಯದಾಭೂತಪೃಥಗ್ಭಾವಮೇಕಸ್ಥಮನುಪಶ್ಯತಿ। ತತಏವಚ ವಿಸ್ತಾರಂಬ್ರಹ್ಮಸಂಪದ್ಯತೇತದಾ॥" ಈ ಶ್ಲೋಕಕ್ಕೆ ಸರಳವಾದ ಅರ್ಥವು 'ಯಾವಕಾಲಕ್ಕೆ ಸರ್ವಭೂತಗಳ ಪೃಥಕ್ತ್ವವು ಎಂದರೆ ಭೇದವು ಅರ್ಥಾತ್ ಭಿನ್ನಭೂತಗಳು ಏಕಸ್ಥ ಅಂದರೆ ಒಬ್ಬ ಪರಮಾತ್ಮನಲ್ಲಿರುವುದು ಎಂದುತೋರುವುದೋ; 'ತತಏವ' ಆ ಪರಮಾತ್ಮನಿಂದಲೇ ಸಮಸ್ತ ಪ್ರಪಂಚವೂ ಉಂಟಾಗಿರುವುದೆಂದು ತೋರುವುದೋ ಆಗ ಆ ಪುರುಷನಿಗೆ ಬ್ರಹ್ಮಪ್ರಾಪ್ತಿಯಾಗುವುದು' ಎಂದು ಆಗುವುದು. ಇದರಲ್ಲಿ 'ಭೂತಗಳ ನಾನಾತ್ವವು ನಷ್ಟ

ವಾಗಿ' ಎಂಬರ್ಥವೂ 'ಏಕಸ್ಥಂ' ಎಂಬ ಈ ಪದಕ್ಕೆ 'ಏಕರೂಪೇಣ' ಎಂಬರ್ಥವೂ ಅಯುಕ್ತವಾದವುಗಳು. 'ಏಕಸ್ಥಂ' ಎಂಬ ಪದದಲ್ಲಿ 'ಏಕ' ಎಂಬುವುದು ಉಪಪದವಾಗಿದ್ದು ಅಪರಮುಂದೆ ಷ್ಠಾಧಾತುವಿರುವುದು. ಈ ವಿಭಾಗವನ್ನು ನೋಡದೆ 'ಏಕಸ್ಥಂ' ಎಂಬುವ ಪದಕ್ಕೆ 'ಪರಮೇಶ್ವರ ಸ್ವರೂಪವಾಗಿ' ಎಂತಲೂ, 'ಏಕರೂಪದಿಂದ' ಎಂತಲೂ ಅರ್ಥಬರೆಯುವುದು ಶಾಸ್ತ್ರವಿರುದ್ಧವಾದುದು. ಆದರೆ ಅನಂತಭೇದಯುಕ್ತವಾದ ಪ್ರಪಂಚವನ್ನೇ ಏಕರೂಪವನ್ನಾಗಿ ನೋಡುವ ತಿಲಕರವರಿಗೆ 'ಏಕಸ್ಥಂ' ಎಂಬ ಪದದಲ್ಲಿರುವ ಸೂಕ್ಷ್ಮವಿಭಾಗವು 'ಗೃಹಂ ಭಕ್ಷಯಿತುಃ ಪುಂಸಃ ಕವಾಟಂ ದುರ್ಜರಾಯತೇ' ಎಂಬುವ ನ್ಯಾಯದಿಂದ ತೋರದೆ ಇರುವುದು ಆಶ್ಚರ್ಯಕರವಾದುದಲ್ಲ.

(೧೧) ಗೀ. ಪು. ೪೦೪. ಪ. ೧೦ ರಲ್ಲಿ 'ಬ್ರಹ್ಮಾತ್ಮೈಕ್ಯಜ್ಞಾನವೆಂಬುವುದು ಮಾತ್ರ ವಾಸ್ತವವಾಗಿ ಸತ್ಯವಾಗಿಯೂ ಸಾಧ್ಯವಾಗಿಯೂ ಇದ್ದು ಇದಕ್ಕೆ ಸಮಾನವಾದ ಪವಿತ್ರವಾದ ವಸ್ತುವು ಈ ಪ್ರಪಂಚದಲ್ಲಿ ಬೇರೆ ಯಾವುದೂ ಇಲ್ಲ. (ಗೀ. ಅ. ೪. ಶ್ಲೋ. ೩೮.)' ಎಂದು ಬರೆಯಲ್ಪಟ್ಟಿರುವುದು. ಈ ಶ್ಲೋಕಾರ್ಥವು 'ನಹಿಜ್ಞಾನೇನಸದೃಶಂ ಪವಿತ್ರಮಿಹವಿದ್ಯತೇ' ಇದರ ಅರ್ಥವು 'ಜ್ಞಾನಕ್ಕೆ ಸಮಾನವಾದ ಪವಿತ್ರಪದಾರ್ಥವು ಈ ಪ್ರಪಂಚದಲ್ಲಿ ಇನ್ನಾವುದೂ ಇರುವುದಿಲ್ಲ' ಎಂತಾಗುತ್ತದೆ. 'ಜ್ಞಾನ' ಎಂಬ ಶಬ್ದಕ್ಕೆ ಬ್ರಹ್ಮಾತ್ಮೈಕ್ಯಜ್ಞಾನವೆಂಬ ಅರ್ಥವು ತಿಲಕರವರಿಗೆ ತೋರಲು ಕಾರಣವಾವುದೋ ತಿಳಿಯದೇಇರತಕ್ಕುದಾಗಿದೆ. ಅಲ್ಲದೆ 'ಬ್ರಹ್ಮಾತ್ಮೈಕ್ಯಜ್ಞಾನವು ವಾಸ್ತವಸತ್ಯವಾದುದು' ಎಂದು ಬರೆಯುತ್ತಾರೆ. ಅದರೆ ಅದ್ವೈತ ಮತದಲ್ಲಿ ಬ್ರಹ್ಮಭಿನ್ನವಾದ ಸಮಸ್ತವೂ ಮಿಥ್ಯಾಭೂತವಾದುದರಿಂದ ಜ್ಞಾನವು ಸತ್ಯವಾಗಲಾರದು. ಹೀಗಿರಲು 'ಜ್ಞಾನವು ಸತ್ಯವಾದುದು' ಎಂದು ಬರೆಯುವದು ಅದ್ವೈತಸಿದ್ಧಾಂತಕ್ಕೆ ವಿರುದ್ಧವಾಗಿರುವುದು.

(೧೨) ಗೀ. ಪು. ೪೨೪. ಪ. ೨೮ ರಲ್ಲಿ 'ಶ್ರದ್ಧಾವಾನ್ ಲಭತೇ ಜ್ಞಾನಂ' ಎಂಬ ಶ್ಲೋಕಕ್ಕೆ ಅರ್ಥ ಬರೆಯುವಾಗ, ಶ್ರದ್ಧಾವಿಶಿಷ್ಟ

ನಾದ ಪುರುಷನಿಗೆ ಇಂದ್ರಿಯನಿಗ್ರಹದಿಂದ ಬ್ರಹ್ಮಾತ್ಮೈಕ್ಯಜ್ಞಾನವುಂಟಾಗುವುದೆಂದು ಬರೆದಿರುವರು. ಇಲ್ಲಿಯೂ ಸಹ ಜ್ಞಾನಪದಕ್ಕೆ ಬ್ರಹ್ಮಾತ್ಮೈಕ್ಯಜ್ಞಾನವೆಂದು ಅರ್ಥಬರೆಯುವುದು ಸಂಪ್ರದಾಯಮೂಲಕವಾದುದೇ ಸರಿ.

(೧೩) ಗೀ. ರ. ಪು. ೩೧೬. ಪ. ೨೩ ರಲ್ಲಿ 'ಪರಮೇಶ್ವರನು ಮಾಯೆಯಿಂದ ಜಡಪ್ರಕೃತಿಯನ್ನು ಸೃಜಿಸಿದನಂತರದಲ್ಲಿ' (ಗೀ. ೩, ಶ್ಲೋ. ೧೪.) ಎಂದು ಬರೆದಿರುವರು. ಆ ಶ್ಲೋಕವು "ದೈವೀಹ್ಯೇಷಾಗುಣಮಯೀಮಮಮಾಯಾದುರತ್ಯಯಾ । ಮಾಮೇವಯೇಪ್ರಪದ್ಯಂತೇಮಾಯಾಮೇತಾಂತರಂತಿತೇ ॥" ಎಂಬುದು. ಇದರ ಅರ್ಥವು 'ಗುಣಾತ್ಮಕವಾದ ಈ ನನ್ನ ದಿವ್ಯಮಾಯೆಯು ದುಸ್ತರವಾದುದು; ಆದುದರಿಂದ ಯಾವ ಪುರುಷರು ನನ್ನನ್ನೇ ಶರಣುಹೊಂದುವರೋ ಅವರು ಈ ಮಾಯೆಯನ್ನು ದಾಟುವರು' ಹೀಗೆಂಬುದಾಗಿ ರಾ॥ ತಿಲಕರವರು ಬರೆದಿದಾರೆ. ಇವರಲ್ಲಿ 'ಪರಮೇಶ್ವರನು ಮಾಯೆಯಿಂದ ಜಡಪ್ರಕೃತಿಯನ್ನು ಸೃಜಿಸಿದನಂತರ' ಎಂಬ ಅರ್ಥವು ಸರ್ವಥಾ ಇಲ್ಲ; ಅವರೂ ಅದ್ವೈತವನ್ನು ಸಾಧಿಸಲು ಗೀತಾಶ್ಲೋಕಕ್ಕೆ ಅಸಂಬದ್ಧವಾದ ಅರ್ಥವನ್ನು ಬರೆದು ಲೋಕಕ್ಕೆ ಭ್ರಮೆಯನ್ನುಂಟುಮಾಡುವುದು ಯುಕ್ತವಾದುದಲ್ಲ.

(೧೪) ಗೀ. ರ. ಪು. ೧೪೫. ಪ. ೨೬ ರಲ್ಲಿ 'ನಾನು ಎಂಬ ಅಹಂಕಾರವಿಶಿಷ್ಟವಾದ ಸಗುಣರೂಪದಿಂದ, ದೇಹದಲ್ಲಿ ತನಗೇನೆ ವ್ಯಕ್ತವಾಗಿ ತೋರುವ ಆತ್ಮನ ಎಂದರೆ ಕ್ಷೇತ್ರಜ್ಞನ ಗುಣರಹಿತವಾದ, ಶುದ್ಧವಾದ ಮೂಲಸ್ವರೂಪವು ಯಾವುದು ಎಂಬುವದನ್ನು ನಿರ್ಣಯ ಮಾಡುವುದಕ್ಕಾಗಿ ವೇದಾಂತಶಾಸ್ತ್ರವು ಪ್ರವೃತ್ತವಾಗಿರುವುದು' (ಗೀ. ಅ. ೧೩. ಶ್ಲೋ. ೪.) ಎಂದು ಬರೆಯಲ್ಪಟ್ಟಿರುವುದು. ಅ. ೧೩. ನಾಲ್ಕನೆಯ ಶ್ಲೋಕವು "ಋಷಿಭಿರ್ಬಹುಧಾಗೀತಂ ಛಂದೋಭಿರ್ವಿವಿಧೈಃಪೃಥಕ್ । ಬ್ರಹ್ಮಸೂತ್ರಪದೈಶ್ಚೈವಹೇತುಮದ್ಭಿರ್ವಿನಿಶ್ಚಿತೈಃ ॥ ಎಂಬುದು. ಇದರ ಅರ್ಥವನ್ನು 'ಅನೇಕವಿಧವಾಗಿ ಅನೇಕ ಛಂದಸ್ಸುಗಳಿಂದ, ಅನೇಕ ಋಷಿಗಳಿಂದಲೂ ಹೇತುಬೋಧಕ

ವಾಗಿಯೂ, ನಿಶ್ಚಿತಸ್ವರೂಪವಾಗಿಯೂ ಇರುವ ಬ್ರಹ್ಮಸೂತ್ರಗಳಿಂದಲೂ ಸಹ ಈ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು' ಹೀಗೆಂಬುದಾಗಿ ತಿಲಕರವರು ಬರೆಯುತ್ತಾರೆ. ಶ್ಲೋಕದಲ್ಲಿ 'ನಾನು ಎಂಬ ಅಹಂಕಾರಯುಕ್ತವಾದ ಸಗುಣರೂಪದಿಂದ ದೇಹದಲ್ಲಿ ತನಗೇ ವ್ಯಕ್ತವಾಗುವ ಕ್ಷೇತ್ರಜ್ಞನ ಗುಣಶೂನ್ಯವಾದ ಮೂಲಸ್ವರೂಪವು ಯಾವುದು' ಇತ್ಯಾದಿ ಅಪಾರ್ಥಗಳು ಎಲ್ಲಿಂದಬಂದಿರುತ್ತವೆ? 'ಬ್ರಹ್ಮನು ನಿರ್ಗುಣನೆಂಬ ತಮ್ಮ ಸಿದ್ಧಾಂತವು ಗೀತೆಯಲ್ಲಿ ಹೇಳಿರುವುದು' ಎಂದು ತಿಳಿಸುವುದಕ್ಕೋಸ್ಕರ ಗೀತಾಶ್ಲೋಕವನ್ನು ಪ್ರಮಾಣದಂತೆ ಹೇಳಿರುತ್ತಾರೆಯೆ ಹೊರತು, ಗೀತಾಶ್ಲೋಕಗಳು ಈ ಮೇಲಿನ ಅರ್ಥವನ್ನು ತಿಳಿಸುವುದಿಲ್ಲ.

(೧೫) ಗೀ. ರ. ಪ್ರ. ೯. ಪ. ೫ ರಲ್ಲಿ. 'ಸಂಸ್ಕೃತ ತಿಳಿಯದ ಜನರಿಗೆ ಗ್ರಂಥ ಓದುವಾಗ ವ್ಯತ್ಯಯಬಾರದೆಂಬ ಉದ್ದೇಶದಿಂದ ಸಂಸ್ಕೃತ ಶ್ಲೋಕಗಳಿಗೆ ಶಬ್ದಶಃ ಅರ್ಥವನ್ನು ಬರೆಯದೆ ತಾತ್ಪರ್ಯಾರ್ಥವನ್ನುಮಾತ್ರ ಬರೆಯುವೆವು. ಹಾಗೂ ಅಧ್ಯಾಯ ಮತ್ತು ಶ್ಲೋಕ ಸಂಖ್ಯೆಗಳನ್ನು ಬರೆದಿರುವುದರಿಂದ ನಾವು ಹೇಳುವ ಅರ್ಥವು ಅಪ್ರಮಾಣಕವೆಂಬ ಭ್ರಮೆಯು ಬರಲಾರದು' ಎಂದು ಬರೆದಿರುವರು. ಆದರೆ ತಿಲಕರವರು ಸಂಸ್ಕೃತಶ್ಲೋಕಗಳಿಗೆ ಶಬ್ದಶಃ ಅರ್ಥವನ್ನು ಬರೆಯದಿರುವುದಕ್ಕೆ ಬೇರೆಕಾರಣವಿರುವುದು. ಅದು ಯಾವದೆಂದರೆ, ಗೀತಾರಹಸ್ಯದಲ್ಲಿ ಅನೇಕ ಸ್ಥಳಗಳಲ್ಲಿ ತಾವು ಹೇಳುವ ಅದ್ವೈತಸಿದ್ಧಾಂತಕ್ಕೆ ಗೀತಾಶ್ಲೋಕವನ್ನು ಪ್ರಮಾಣವನ್ನಾಗಿ ಹೇಳುವರು. ಆ ಶ್ಲೋಕಕ್ಕೆ ಶಬ್ದಶಃ ಅರ್ಥಬರೆದಲ್ಲಿ ಇವರು ಹೇಳುವ ಸಿದ್ಧಾಂತಕ್ಕೂ ಗೀತಾಶ್ಲೋಕಾರ್ಥಕ್ಕೂ ಸಂಬಂಧವಿಲ್ಲದಿರುವುದರಿಂದ ಇವರು ಹೇಳುವ ಸಿದ್ಧಾಂತವು ಗೀತಾಪ್ರತಿಪಾದ್ಯವಲ್ಲವೆಂದು ವಾಚಕರಿಗೆ ಸ್ಪಷ್ಟವಾಗಿ ಕಂಡುಬರುವುದು. ಈ ಕಾರಣದಿಂದ ತಿಲಕರವರು ಗೀತಾಶ್ಲೋಕಗಳಿಗೆ ಶಬ್ದಶಃ ಅರ್ಥವನ್ನು ಬರೆಯದೇ, ಕೆಲವುಕಡೆ ಅಧ್ಯಾಯ ಮತ್ತು ಶ್ಲೋಕಸಂಖ್ಯೆಗಳನ್ನೂ, ಕೆಲವುಕಡೆ ತಾತ್ಪರ್ಯಾರ್ಥವನ್ನು ಮಾತ್ರ ಬರೆದಿದಾರೆ. ಈ ರೀತಿಯಾಗಿ ತಾವು ಹೇಳುವ ಅದ್ವೈತಸಿದ್ಧಾಂತವು

ಗೀತಾಪ್ರತಿಪಾದ್ಯವೆಂದು ಅಜ್ಞಜನರಿಗೆ ಭ್ರಮವನ್ನುಂಟುಮಾಡುವುದೇ ತಿಲಕರವರಿಗೆ ಮುಖ್ಯೋದ್ದೇಶ್ಯವಾಗಿರುವುದು.

(೧೭) ಗೀ. ರ. ಪು. ೯. ಪ. ೯ ಗಲ್ಲಿ, 'ಕೋಹಿನೂರು ಎಂಬುವ ರತ್ನವನ್ನು ಈ ಭರತಖಂಡದಿಂದ ಇಂಗ್ಲೆಂಡು ದೇಶಕ್ಕೆ ತೆಗೆದುಕೊಂಡುಹೋದನಂತರದಲ್ಲಿ ಅದಕ್ಕೆ ಹೊಸ ಆಕೃತಿಯು (ಕಮಲವ) ಯೋರ್ಪಡಿಸಲ್ಪಟ್ಟಿತು. ಅದರಿಂದ ಅದರ ಪ್ರಕಾಶವು ಹೆಚ್ಚಾಯಿತು. ಇದರಂತೆ ಸತ್ಯವೆಂಬುವ ರತ್ನಕ್ಕೂ ಹೊಸ ಆಕೃತಿಯನ್ನು ಮಾಡುವುದರಿಂದ ಅಧಿಕ ತೇಜಸ್ಸನ್ನೈದುವುದು. ಗೀತೆಯಲ್ಲಿ ಹೇಳಿರುವ ಧರ್ಮವು ಸತ್ಯವಾದುದು ಮತ್ತು ನಿರ್ಭಯವಾದುದು ಎಂಬುದು ನಿಜವೇ ಸರಿ. ಆದರೆ ಅದು ಯಾವದೇಶಕಾಲಗಳಲ್ಲಿ ಯಾವರೂಪದಿಂದ ಹೇಳಲ್ಪಟ್ಟಿತೋ ಆದೇಶಕಾಲಕ್ಕೂ ಸದ್ಯಸ್ಥಿತಿಗೂ ಬಹಳ ವ್ಯತ್ಯಾಸವಿರುವುದರಿಂದ ಗೀತಾರ್ಥವು ಎಷ್ಟು ತೇಜಸ್ವಿಯಾಗಿರಬೇಕೋ ಅಷ್ಟು ತೇಜಸ್ವಿಯಾಗಿ ಕೆಲವರಿಗೆ ಕಂಡುಬರುವುದಿಲ್ಲ' ಎಂದು ರಾ|| ತಿಲಕರವರು ಬರೆದಿರುತ್ತಾರೆ. ಕೋಹಿನೂರೆಂಬುವ ರತ್ನಕ್ಕೆ ಹೊಸದಾಗಿ ಆಕೃತಿಯನ್ನು ಮಾಡಿದಂತೆ ನಾವುಗೀತೆಗೆ ಹೊಸದಾಗಿ ಆಕೃತಿಯನ್ನು ಮಾಡುವೆವೆಂದು ತಿಲಕರವರ ಅಭಿಪ್ರಾಯವಿದ್ದಂತೆ ತೋರುತ್ತದೆ. ಆದರೆ ಇವರುಮಾಡಿದ ಆಕೃತಿಯು ಎಂಥಾದ್ದು? ಗೀತೆಯಲ್ಲಿರುವ ಕೆಲವಾಂಶಗಳನ್ನು ತೆಗೆದುಹಾಕಿ ಇಲ್ಲದಿರುವ ಕೆಲವು ಅಂಶಗಳನ್ನು ಹೇಳುವುದೇ ಆಕೃತಿಯಾಗಿದ್ದರೆ ಅದು ವಾಸ್ತವವೇ ಸರಿ. ಗೀತೆಯಲ್ಲಿ ಹೇಳಿರುವ ಧರ್ಮವು ಸತ್ಯ ಮತ್ತು ಅಭಯವಾದಾಗ್ಯೂ ಗೀತಾರ್ಥವನ್ನು ಹೇಳಿರುವ ದೇಶಕಾಲಕ್ಕೂ ಸದ್ಯಸ್ಥಿತಿಗೂ ಬಹಳ ವ್ಯತ್ಯಾಸವಿರುವುದರಿಂದ ಗೀತಾರ್ಥವು ಅಷ್ಟು ತೇಜಸ್ವಿಯಾಗಿ ಕಂಡುಬರುವುದಿಲ್ಲ' ಎಂದು ರಾ|| ತಿಲಕರವರು ಬರೆಯುವುದು ನೋಡಿದರೆ ಪ್ರಾಚೀನರು ಹೇಳಿದ ಗೀತಾರ್ಥವನ್ನು ವ್ಯತ್ಯಸ್ತಮಾಡಿ ಹೇಳುವೆವೆಂದು ಅವರೇ ಒಪ್ಪಿದಂತಾಗುತ್ತದೆ. ಪುಣಾದಲ್ಲಿ ಶ್ರೀ ಶ್ರೀಗಳವರಿಗೂ ರಾ|| ತಿಲಕರವರಿಗೂ ನಡೆದ ಸಂವಾದದಲ್ಲಿ 'ಗೀತಾರ್ಥವನ್ನು ದೇಶಕಾಲಾನುಗುಣವಾಗಿ ಬದಲಾವಣೆ ಮಾಡುವೆವು' ಎಂದು ತಿಲಕರವರು ಹೇಳಿರುತ್ತಾರೆ. ಆದರೆ

ದೇಶಕಾಲಕ್ಕೆ ಅನುಗುಣವಾಗಿಯೇ ಆಗಲಿ, ಅಥವಾ ಇನ್ನು ಯಾವ ವಿಧದಿಂದಲೇ ಆಗಲಿ ರಾ॥ ತಿಲಕರವರು ಹೇಳಿರುವ ಗೀತಾರ್ಥವು ಶ್ರೀ ಕೃಷ್ಣನು ಹೇಳಿದ ಗೀತಾರ್ಥವಲ್ಲವೆಂಬುವುದು ನಿಶ್ಚಿತವಾಗುವುದು. ತಿಲಕರವರು ಹೇಳಿದ ಗಿತಾರ್ಥವೂ, ಶ್ರೀ ಕೃಷ್ಣನು ಹೇಳಿದ ಗೀತಾರ್ಥವೂ ಭಿನ್ನ ಭಿನ್ನವಾಗಿರುವುದೆಂದು ಲೋಕಕ್ಕೆ ತಿಳಿಸುವುದು ನಮ್ಮ ಕರ್ತವ್ಯವಾಗಿರುವುದರಿಂದ ನಾವು ಈ ವಿಷಯವನ್ನು ಬರೆದಿರುವೆವು.

(೧೭) ಗೀ. ರ. ಪು. ೧೧. ಪಂ. ೨೨ರಲ್ಲಿ, ‘ಬ್ರಹ್ಮಜ್ಞಾನದಿಂದ ಬುದ್ಧಿಯು ಸಮವಾದನಂತರ ಆ ಪುರುಷನು ಪಾಪಾಚರಣವನ್ನು ಮಾಡುವುದು ಶಕ್ಯವಲ್ಲವೆಂತ ಗೀತೆಯಲ್ಲಿ ಹೇಳಿರುವುದು’ ಎಂದು ಬರೆಯಲ್ಪಟ್ಟಿದೆ. ರಾ॥ ತಿಲಕರವರು ‘ಸಮಬುದ್ಧಿ ಯೆಂದರೆ’ ಬ್ರಹ್ಮಾತ್ಮೈಕ್ಯಬುದ್ಧಿಯೆಂದು ಅರ್ಥವನ್ನು ಹೇಳಿರುವರು. ಆದರೆ ಈ ಬ್ರಹ್ಮಾತ್ಮೈಕ್ಯಬುದ್ಧಿಯು ಗೀತೆಯ ಯಾವ ಶ್ಲೋಕದಲ್ಲಿಯೂ ಹೇಳಿರುವುದಿಲ್ಲ. ‘ಸಮಬುದ್ಧಿ’ ಯೆಂದರೆ ಸರ್ವಭೂತಗಳಲ್ಲಿಯೂ ನಿರ್ದೋಷನಾದ ಪರಮಾತ್ಮನು ಒಬ್ಬನೇ ಇರುವನು ಎಂತಲೂ, ಸಮಸ್ತ ಪ್ರಾಣಿಗಳಲ್ಲಿ ಅವುಗಳ ಯೋಗ್ಯತಾನುಗುಣವಾಗಿ ಆಚರಿಸುವುದು ಎಂತಲೂ ಅರ್ಥವಾಗುವುದು. ಗೀತೆಯಲ್ಲಿ ಈ ಅರ್ಥವೇ ಹೇಳಲ್ಪಟ್ಟಿರುವುದು.

(೧೮) ಗೀ. ರ. ಪು. ೧೨ ಪಂ. ೧೧ರಲ್ಲಿ, ‘ನಾನು ಒಂದು ಸಂಪ್ರದಾಯವನ್ನನುಸರಿಸಿಟ್ಟುಕೊಂಡು ಅದಕ್ಕೆ ಅನುಗುಣವಾಗಿಯೇ ಗೀತೆಯ ಅರ್ಥವನ್ನು ಬರೆಯುವೆನೆಂದು ಕೆಲವರು ತಿಳಿದಿರಬಹುದು. ಆದರೆ ಈ ಗ್ರಂಥವು ಒಬ್ಬನಿಗೋಸ್ಕರವಾಗಲೀ ಅಥವಾ ಒಂದು ಸಂಪ್ರದಾಯ ಸಿದ್ಧಿಗೋಸ್ಕರವಾಗಲೀ ಬರೆಯಲ್ಪಟ್ಟುದಲ್ಲ. ನಮ್ಮ ಬುದ್ಧಿಗೆ, ಗೀತಾ ಶ್ಲೋಕಗಳಿಗೆ ಸರಳವಾದ ಅರ್ಥವು ಯಾವುದು ತೋರಿರುವುದೋ ಅದನ್ನು ಬರೆದಿರುವೆನು’ ಹೀಗೆಂದು ತಿಲಕರವರು ಬರೆಯುತ್ತಾರೆ. ಆದರೆ ‘ಏಕಸ್ಥ’ ಎಂಬುವ ಪದಕ್ಕೆ ‘ಏಕರೂಪದಿಂದ’ ಎಂಬರ್ಥವೂ ‘ಜ್ಞಾನ’ ಎಂಬುದಕ್ಕೆ ‘ಬ್ರಹ್ಮಾತ್ಮೈಕ್ಯಜ್ಞಾನ’ ಎಂದರ್ಥವೂ ‘ದೈವೀಹ್ಯೇಷಾಗುಣಮಯೀ’ ಎಂಬ ಶ್ಲೋಕಕ್ಕೆ ‘ಪರಮಾತ್ಮನು ತನ್ನ ಮಾಯೆಯಿಂದ ಜಡಪ್ರಕೃತಿಯನ್ನುಂಟುಮಾಡುವನು’ ಇತ್ಯಾದ್ಯರ್ಥಗಳು ಸ

ರಳಬುದ್ಧಿಯಾದ ಮನುಷ್ಯನಿಗೆ ಯಾವಕಾಲಕ್ಕೂ ತೋರಲಾರವು. ಆದರೂ ಈ ಅರ್ಥಗಳು ನಮ್ಮ ಬುದ್ಧಿಗೆ ಸರಳವಾಗಿಯೇ ತೋರುವುವೆಂದು ರಾ॥ ತಿಲಕರವರು ಹೇಳುವುದಾದರೆ ಉತ್ತರವೇನಿದೆ? ಯಾವ ಅರ್ಥವನ್ನು ಪ್ರಮಾಣದಿಂದ ಸಿದ್ಧಮಾಡಬೇಕಾದರೆ ತಮ್ಮ ಬುದ್ಧಿಯಲ್ಲಿಮಾತ್ರ ವಿಶ್ವಾಸವಿಡದೆ ತಾವು ಹೇಳುವ ಅರ್ಥಕ್ಕೆ ಇತರರು ಮಾಡುವ ಆಕ್ಷೇಪಣೆಗಳನ್ನು ನಿವಾರಣೆಮಾಡುವುದು ಉತ್ತಮವೆಂದು ನಮಗೆ ತೋರುತ್ತದೆ.

(೧೯) ಗೀ. ರ. ಪು. ೧೨ ಪಂ. ೧೮ರಲ್ಲಿ, "ಇದರಲ್ಲಿ ಯಾವದಾದರೂ ಸಂಪ್ರದಾಯವು ಕಂಡುಬಂದರೆ ಅದು ಗೀತೆಯ ಸಂಪ್ರದಾಯವೇ ಹೊರತು ನಮ್ಮದಲ್ಲ." ಎಂದು ರಾ॥ ತಿಲಕರವರು ಬರೆದಿರುತ್ತಾರೆ. ಆದರೆ ಗೀತೆಯ ಪೂರ್ವೋತ್ತರವಾಕ್ಯಗಳನ್ನು ಚೆನ್ನಾಗಿ ವಿಮರ್ಶೆಮಾಡಿ ಗೀತೆಯ ಉದ್ದೇಶವು ಯಾವದೆಂಬುವನ್ನು ವಿಚಾರಮಾಡಲು ಯಾವ ಅರ್ಥವು ನಿಷ್ಪನ್ನವಾಗುವುದೋ ಅದೇ ವಾಸ್ತವವಾದ ಗೀತಾರ್ಥವು. ರಾ॥ ತಿಲಕರವರು ಆಯಾ ಸ್ಥಳಗಳಲ್ಲಿ ಬರೆದಿರುವ ಕ್ಲಿಷ್ಟಾರ್ಥಗಳನ್ನು ಪೂರ್ವೋತ್ತರ-ವಾಕ್ಯವಿಮರ್ಶೆ ಇಲ್ಲದೆ ಗೀತಾರ್ಥವೆನ್ನುವುದು ಯುಕ್ತವಲ್ಲ.

(೨೦) ಗೀ. ರ. ಪು. ೧೩ ಪಂ. ೯ರಲ್ಲಿ, 'ಸರ್ವಕಾಲದಲ್ಲಿಯೂ ಏಕರೂಪವಾದ' ಎಂದರೆ ತ್ರಿಕಾಲಾಬಾಧಿತವಾದ ಜ್ಞಾನವನ್ನು ಹೇಳುವ ಗೀತೆಯಂತಹ ಗ್ರಂಥಗಳಿಂದ ಕಾಲಭೇದಾನುಸಾರವಾಗಿ ಮನುಷ್ಯನಿಗೆ ಹೊಸದಾಗಿ ಸ್ಫೂರ್ತಿಯುಂಟಾಗುವುದು ಆಶ್ಚರ್ಯಕರವಾದುದಲ್ಲ. ಏಕೆಂದರೆ, ಆ ಪ್ರಕಾರ ಸ್ಫೂರ್ತಿಯನ್ನುಂಟುಮಾಡುವುದು ಆ ಗ್ರಂಥದ ಸ್ವಭಾವವಾಗಿರುವುದು' ಎಂದು ಬರೆದಿರುವರು. ಆದರೆ, ಜ್ಞಾನವು ತ್ರಿಕಾಲಾಬಾಧಿತವೆಂದು ಹೇಳುವುದು ರಾ॥ ತಿಲಕರವರಿಂದ ಅಂಗೀಕೃತವಾದ ಅದ್ವೈತಸಿದ್ಧಾಂತಕ್ಕೆ ವಿರುದ್ಧವಾಗಿರುವುದು. ಅದ್ವೈತಸಿದ್ಧಾಂತಾನುಸಾರ ಜ್ಞಾನವು ಬ್ರಹ್ಮಭಿನ್ನವಾದುದರಿಂದ, ಮಿಥ್ಯಾಭೂತವೆಂದು ಪೂರ್ವದಲ್ಲಿಯೇ ಹೇಳಿರುವೆವು. ಆದುದರಿಂದ 'ಜ್ಞಾನವು ತ್ರಿಕಾಲಾಬಾಧಿತವು' ಎಂದು ಹೇಳುವುದು ಅದ್ವೈತಿಗಳಿಗೆ ಯುಕ್ತವಾದುದಲ್ಲ. ಮತ್ತು 'ಕಾಲಭೇದಾನುಸಾರ ಹೊಸಸ್ಫೂರ್ತಿಯುಂಟಾಗುವುದು' ಎಂದು ಬರೆದಿರುತ್ತಾರೆ. ಇದರಿಂದ ಪ್ರಾಚೀನ ಟೀಕಾ

ಕಾರರಿಗೆ ಕಾಲಭೇದಾನುಸಾರ ತೋರಿರುವ ಅರ್ಥಗಳು ಗೀತಾರ್ಥಗಳೆಂದು ಸಿದ್ಧವಾಗುವುವು. ಹೀಗಿರಲು ಅವರು ಹೇಳಿದ ಅರ್ಥಗಳಿಗೆ ದೂಷಣವನ್ನು ಹೇಳುವುದು ಎಷ್ಟುಮಾತ್ರಕ್ಕೂ ಸರಿಯಾದುದಲ್ಲ.

ರಾ|| ತಿಲಕರವರು ಗೀತಾರಹಸ್ಯದ ಪ್ರಾರಂಭದಲ್ಲಿ 'ನಾವು ಹೇಳುವ ಗೀತಾರ್ಥವು ಈಗಿನ ದೇಶಕಾಲಗಳಿಗೆಮಾತ್ರ ಅನುರೂಪವಾಗಿರುವುದು' ಎಂದು ಬರೆದಿದ್ದರೆ ಉತ್ತಮವಾಗಿರುತಿತ್ತು.

ಇದುವರಿಗೂ ಗೀತಾರಹಸ್ಯಗ್ರಂಥದ ಪ್ರಸ್ತಾವನೆಯ ವಿಮರ್ಶೆ ಮಾಡಿದಹಾಗಾಯಿತು. ಮುಂದಿನ ವಿಷಯಗಳನ್ನು ಕ್ರಮವಾಗಿ ವಿಚಾರ ಮಾಡುವೆವು.

ಗೀತಾರಹಸ್ಯದ ವಿಷಯಪ್ರವೇಶ ಎಂಬುವ ಮೊದಲನೆಯ ಪ್ರಕರಣದ ವಿಚಾರ.

ಗೀ. ರ. ಪು. ೧೧ ಪಂ. ೨೪ರಲ್ಲಿ, 'ಶಂಕರಾಚಾರ್ಯರಕ್ಕಿಂತಲೂ ಪ್ರಾಚೀನರಾದ ಟೀಕಾಕಾರರು ಗೀತಾರ್ಥವನ್ನು ಮಹಾಭಾರತಕಾರರಂತೆ ಜ್ಞಾನಕರ್ಮ ಸಮುಚ್ಚಯಾತ್ಮಕ (ಎಂದರೆ ಜ್ಞಾನಿಯಾದ ಪುರುಷನು ಜ್ಞಾನದಿಂದ ಕೂಡಿ ಯಾವಜ್ಜನ್ಮವೂ ತನಗೆ ಉಚಿತವಾದ ವರ್ಣಾಶ್ರಮಧರ್ಮವನ್ನು ಮಾಡುವುದು) ಎಂದು ಪ್ರವೃತ್ತಿಕರ್ಮಪರವಾಗಿ ಹೇಳಿರುವರು ಎಂಬುದು ಶಾಂಕರಭಾಷ್ಯದ ಉಪೋದ್ಘಾತವಾಕ್ಯಗಳಿಂದ ಸಿದ್ಧವಾಗುವುದು.' ಹೀಗೆಂದು ರಾ|| ತಿಲಕರವರು ಬರೆಯುತ್ತಾರೆ. ಆದರೆ ಇದು ಸರಿಯಾದುದಲ್ಲ. ಏಕೆಂದರೆ ಮಹಾಭಾರತಕಾರರು ಹೇಳಿರುವ ಧರ್ಮವು ನಿಷ್ಕಾಮವಾದುದೇ ಹೊರತು ಪ್ರವೃತ್ತಿಧರ್ಮವಲ್ಲವೆಂದು ಪ್ರಸ್ತಾವನೆಯ ವಿಚಾರದಲ್ಲಿ ನಾವು ನಿರೂಪಿಸಿರುವೆವು. ಅಲ್ಲದೆ ಜ್ಞಾನಿಯಾದ ಮನುಷ್ಯನು ಯಾವಜ್ಜನ್ಮವೂ ತನಗೆ ವಿಹಿತವಾದ ಕರ್ಮಗಳನ್ನು ಜ್ಞಾನದಿಂದ ಕೂಡಿ ಮಾಡಬೇಕು ಎಂದು ಹೇಳುವುದು ಅನುಚಿತವಾದುದು. ಏಕೆಂದರೆ ಭೋಜನಮಾಡುವಾಗ ಗೋವಿಂದನಾಮಸ್ಮರಣೆ ಮಾಡಬೇಕೆಂದು ಹೇಳಿದರೆ ಆ ಎರಡೂ ಕ್ರಿ

ಯೆಗಳು ಒಂದೇ ಕಾಲದಲ್ಲಿ ಉಂಟಾಗುವುದರಿಂದ ಹಾಗೆ ಹೇಳುವುದು ಯುಕ್ತವಾಗಬಹುದು. ಆದರೆ ಜ್ಞಾನವು ಉಂಟಾದನಂತರ ಅದಕ್ಕೋಸ್ಕರ ಯತ್ನಮಾಡಬೇಕಾದುದಿಲ್ಲವಾದುದರಿಂದ ‹ ಜ್ಞಾನದಿಂದ ಕೂಡಿ ಕರ್ಮವನ್ನು ಮಾಡಬೇಕು › ಎಂದು ಹೇಳುವುದು ಸರಿಯಾದುದಲ್ಲ. ‹ ಜ್ಞಾನದಿಂದ ಕೂಡಿ ಕರ್ಮವನ್ನು ಮಾಡಬೇಕು › ಎಂದರೆ ಜ್ಞಾನಉಂಟಾದನಂತರವೂ ಕರ್ಮ ಮಾಡಬೇಕು ಎಂದು ತಿಲಕರವರ ಅಭಿಪ್ರಾಯವಿದ್ದಲ್ಲಿ ಅದು ಯುಕ್ತವಾದುದೆ. ಆದರೆ, ಆ ಅಭಿಪ್ರಾಯವು ಅವರ ಬರಹದಿಂದ ವ್ಯಕ್ತವಾಗುವುದಿಲ್ಲ. ಜ್ಞಾನ ಉಂಟಾದನಂತರ ಜ್ಞಾನಿಯಾದ ಪುರುಷನು ತನಗೆ ಉಚಿತವಾದ ಕರ್ಮಗಳನ್ನು ಮಾಡಬೇಕು ಎಂದು ಹೇಳುವುದು ಜ್ಞಾನಕರ್ಮ ಸಮುಚ್ಚಯವಾದವೆಂದು ಯಾವ ಗ್ರಂಥಕಾರರೂ ಹೇಳಲಿಲ್ಲ. ಪ್ರಾಚೀನ ಟೀಕಾಕಾರರು ‹ ಜ್ಞಾನಕರ್ಮಸಮುಚ್ಚಯವಾದವು › ಎಂದರೆ ಅಂಕುರ ಹುಟ್ಟುವುದಕ್ಕೆ ಬೀಜ-ಜಲ-ಪೃಥಿವೀ ಇತ್ಯಾದಿ ಪದಾರ್ಥಗಳು ಪರಸ್ಪರಸಾಪೇಕ್ಷವಾಗಿ ಹೇಗೆ ಕಾರಣಗಳಾಗುವುವೋ ಅದರಂತೆ ಜ್ಞಾನ ಮತ್ತು ಕರ್ಮ ಇವೆರಡೂ ಪರಸ್ಪರಸಾಪೇಕ್ಷವಾಗಿ ಮೋಕ್ಷಕ್ಕೆ ಕಾರಣಗಳಾಗಿರುವುವು ಎಂದು ಹೇಳುವರು. ‹ ಕೇವಲ ಜ್ಞಾನದಿಂದಲೇ ಆಗಲಿ, ಅಥವಾ ಕೇವಲ ಕರ್ಮದಿಂದಲೇ ಆಗಲಿ ಮೋಕ್ಷಪ್ರಾಪ್ತಿಯಾಗಲಾರದು › ಎಂದು ಹೇಳುವುದೇ ಜ್ಞಾನಕರ್ಮ ಸಮುಚ್ಚಯವಾದವು. ಇದೇ ವಾದವನ್ನು ಶಂಕರಾಚಾರ್ಯರು ಶಾಂಕರ ಗೀತಾಭಾಷ್ಯದ ಮೊದಲನೆಯ ಮತ್ತು ಮೂರನೆಯ ಅಧ್ಯಾಯಗಳಲ್ಲಿ ಅನುವಾದಮಾಡಿ ಖಂಡನಮಾಡಿರುವರು. ರಾ|| ತಿಲಕರವರಿಂದ ಹೇಳಲ್ಪಟ್ಟ ಜ್ಞಾನಕರ್ಮ ಸಮುಚ್ಚಯವಾದವು (ಜ್ಞಾನಿಯಾದ ಪುರುಷನು ಜ್ಞಾನದಿಂದ ಕೂಡಿ ಕರ್ಮವನ್ನು ಮಾಡಬೇಕೆಂಬುದು) ಪ್ರಾಚೀನವಾದ ಯಾವ ಗ್ರಂಥದಲ್ಲಿಯೂ ಹೇಳಲ್ಪಟ್ಟಿಲ್ಲ. ಶಾಂಕರಭಾಷ್ಯದ ಮೊದಲನೆಯ ಅಧ್ಯಾಯದ ಪ್ರಾರಂಭದಲ್ಲಿ ‹‹ ತತ್ರ ಕೇಚಿದಾಹುಃ ಸರ್ವಕರ್ಮಸಂನ್ಯಾಸಪೂರ್ವಕಾದಾತ್ಮಜ್ಞಾನನಿಷ್ಠಾಮಾತ್ರಾದೇವ ಕೇವಲಾತ್ಕೈವಲ್ಯಂನಪ್ರಾಪ್ಯತಏವ ಕಿಂತರ್ಹಿ ಅಗ್ನಿಹೋತ್ರಾದಿಶ್ರೌತಸ್ಮಾರ್ತಕರ್ಮಸಹಿತಾತ್ಜ್ಞಾನಾತ್ಕೈವಲ್ಯಪ್ರಾಪ್ತಿರಿತಿಸರ್ವಾಸುಗೀ

ತಾಸುನಿಶ್ಚಿತೋಽರ್ಥಃಇತಿ ’ ಎಂಬುದರ ತಾತ್ಪರ್ಯವು ‘ ಕೇವಲ ಸರ್ವಕರ್ಮತ್ಯಾಗಪೂರ್ವಕಜ್ಞಾನದಿಂದ ಮೋಕ್ಷವಾಗಲಾರದು. ಆದರೆ ಅಗ್ನಿಹೋತ್ರ ಮೊದಲಾದ ಶ್ರೌತಸ್ಮಾರ್ತಕರ್ಮಗಳಿಂದ ಯುಕ್ತವಾದ ಜ್ಞಾನದಿಂದಲೇ ಮೋಕ್ಷವಾಗುವುದೆಂಬ ಅರ್ಥವೇ ಗೀತೆಯಲ್ಲಿ ಹೇಳಲ್ಪಟ್ಟಿರುವುದು. ’ ಎಂಬುದಾಗಿರುವುದು. ಶಂಕರಾಚಾರ್ಯರು ಇದನ್ನೇ ಪೂರ್ವಪಕ್ಷವಾಗಿ ಮಾಡಿಕೊಂಡು ಖಂಡನಮಾಡಿಕೊನೆಯಲ್ಲಿ ‘ ತಸ್ಮಾದ್ಗೀತಾಸುಕೇವಲಾದೇವತತ್ತ್ವಜ್ಞಾನಾತ್ಮೋಕ್ಷಪ್ರಾಪ್ತಿಃ ನಕರ್ಮಸಮುಚ್ಚಿತಾತ್ಇತಿವಿನಿಶ್ಚಿತೋಽರ್ಥಃ. ಯಥಾಚಾಯಮರ್ಥಃ ತಥಾಪ್ರಕರಣಶೋವಿಭಜ್ಯತತ್ರತತ್ರದರ್ಶಯಿಷ್ಯಾಮಃ ’ ಎಂದರೆ ‘ ಕೇವಲ ಜ್ಞಾನದಿಂದಲೇ ಮೋಕ್ಷವಾಗುವುದು. ಮೋಕ್ಷಕ್ಕೆ ಕರ್ಮದ ಆವಶ್ಯಕತೆಯಿಲ್ಲ ಎಂಬುವುದೇ ಗೀತೆಯ ಸಿದ್ಧಾಂತವು. ಈ ಸಿದ್ಧಾಂತವು ಗೀತಾ ಪ್ರತಿಪಾದ್ಯವಾದುದು ಹೇಗೆಂಬುದನ್ನು ಆಯಾ ಸ್ಥಳಗಳಲ್ಲಿ ತೋರಿಸುವೆವು. ’ ಎಂದು ಶಾಂಕರಭಾಷ್ಯದ ಪ್ರಥಮಾಧ್ಯಾಯದಲ್ಲಿ ಹೇಳಲ್ಪಟ್ಟಿದೆ. ಇದರಿಂದ ಜ್ಞಾನಾನಂತರದಲ್ಲಿ ಕರ್ಮವನ್ನು ಮಾಡುವುದು ಎಂಬುವ ಜ್ಞಾನಕರ್ಮ ಸಮುಚ್ಚಯವಾದವು ಶಂಕರಾಚಾರ್ಯರ ಪೂರ್ವದಲ್ಲಿ ಇತ್ತೆಂದು ಸಿದ್ಧವಾಗುವುದಿಲ್ಲ. ಮೋಕ್ಷಕ್ಕೆ ಜ್ಞಾನ ಮತ್ತು ಕರ್ಮ ಇವೆರಡೂ ಪರಸ್ಪರ ಸಾಪೇಕ್ಷ ಕಾರಣಗಳು ಎಂಬುವ ಜ್ಞಾನಕರ್ಮ ಸಮುಚ್ಚಯವಾದವು ಉಂಟೆಂದು ಸಿದ್ಧವಾಗುವುದು. ಶಾಂಕರಭಾಷ್ಯದ ಮೂರನೆಯ ಅಧ್ಯಾಯದಲ್ಲಿ ‘ ಯಾವಜ್ಜೀವಂಶ್ರುತಿಚೋದಿತಾನಿಕರ್ಮಾಣಿಪರಿತ್ಯಜ್ಯಕೇವಲಾದೇವಜ್ಞಾನಾತ್ಮೋಕ್ಷಃ ಪ್ರಾಪ್ಯತೆಇತ್ಯೇತದೇಕಾಂತೇನೈವಪ್ರತಿಷಿದ್ಧಮಿತಿ ’ ‘ ಗೃಹಸ್ಥಾನಾಮೇವಶ್ರೌತಕರ್ಮಪರಿತ್ಯಾಗೇನಕೇವಲಾದೇವಜ್ಞಾನಾತ್ಮೋಕ್ಷಃ ಪ್ರತಿಷಿಧ್ಯತೆನತುಆಶ್ರಮಾಂತರಾಣಾಂ ’ ‘ ಸರ್ವಾಶ್ರಮಿಣಾಂಜ್ಞಾನಕರ್ಮಸಮುಚ್ಚಯೋಗೀತಾಶಾಸ್ತ್ರನಿಶ್ಚಿತೋಽರ್ಥಃ ಇತಿ ಪ್ರತಿಜ್ಞಾಯಇಹಕಥಂತದ್ವಿರುದ್ಧಂಕೇವಲಾದೇವಜ್ಞಾನಾನ್ಮೋಕ್ಷಂಬ್ರೂಯಾದಾಶ್ರಮಾಂತರಾಣಾಂ ’ ‘ ಗೃಹಸ್ಥಸ್ಯೈವಸ್ಮಾರ್ತಕರ್ಮಣಾಸಮುಚ್ಚಿತಾತ್ಜ್ಞಾನಾತ್ಮೋಕ್ಷಃ ಪ್ರತಿಷಿಧ್ಯತೆ ನತುಆಶ್ರಮಾಂತರಾಣಾಮಿತಿ ಕಥಂಪೂರ್ವೋಕ್ತಿಭಿಃಶ್ಯಕ್ಯಮವಧಾರಯಿ

ತುಂ । 'ಮೋಕ್ಷಸಾಧನತ್ವೇನ ಸಂಸ್ಕೃತಾನಿ ಕರ್ಮಾಣಿ ಊರ್ಧ್ವರೇತಸಾಂ ಸಮುಚ್ಚಿಯಂತೇ' ಇತ್ಯಾದಿ ವಾಕ್ಯಗಳಿಂದ ಶಂಕರಾಚಾರ್ಯರು ಪ್ರಾಚೀನ ಟೀಕಾಕಾರರುಗಳ ಮತವನ್ನು ಅನುವಾದ ಮಾಡಿರುವರು. ಇದರಿಂದ ಪ್ರಾಚೀನ ಟೀಕಾಕಾರರಿಗೆ ಜ್ಞಾನ ಮತ್ತು ಕರ್ಮ ಇವೆರಡೂ ಪರಸ್ಪರಸಾಪೇಕ್ಷವಾಗಿ ಕಾರಣಗಳು ಎಂಬುವ ಜ್ಞಾನಕರ್ಮ ಸಮುಚ್ಚಯವಾದವು ಅಭಿಮತವಾದುದೆಂದು ಗೊತ್ತಾಗುತ್ತದೆ. ಕೇವಲ ಜ್ಞಾನದಿಂದ ಮೋಕ್ಷಪ್ರಾಪ್ತವಾಗುವುದಾದರೂ ಜ್ಞಾನಾನಂತರದಲ್ಲಿ ಜ್ಞಾನದಿಂದ ಕೂಡಿ ಕರ್ಮ ಮಾಡಬೇಕೆಂಬುವ ರಾ॥ ತಿಲಕರವರ ಜ್ಞಾನ ಕರ್ಮ ಸಮುಚ್ಚಯವಾದವು (ಗೀ. ರ. ಪ್ರ. ೬೫೩ ಪಂ. ೨. ಪ್ರ. ೫೯೭ ಪಂ. ೮. ಪ್ರ. ೪೦೩ ಪಂ. ೧೫,) ಪ್ರಾಚೀನ ಟೀಕಾಕಾರರಿಗೆ ಸಮ್ಮತವಾದುದಲ್ಲ. ರಾ॥ ತಿಲಕರವರು ತಮಗೆ ಅಭಿಮತವಾದ ಜ್ಞಾನ ಕರ್ಮ ಸಮುಚ್ಚಯವಾದವನ್ನು ಶಾಂಕರಭಾಷ್ಯದಿಂದ ಸಿದ್ಧಮಾಡಿರುವರು. ಆದರೆ, ಅವರಿಗೆ ಶಾಂಕರಭಾಷ್ಯಕ್ಕೆ ಸರಿಯಾದ ಅರ್ಥವು ತಿಳಿಯದೇ ಇರುವುದರಿಂದ ಹಾಗೆ ಬರೆದಿರುವರೆಂದು ತೋರುತ್ತದೆ. ಜ್ಞಾನ ಜನಿಸಿದನಂತರ, ತನಗೆ ಉಚಿತವಾದ ಕರ್ಮಗಳನ್ನು ಮಾಡುವುದು ಯುಕ್ತವಾದುದೆಂದು ನಮ್ಮ ಸಿದ್ಧಾಂತದಲ್ಲಿ ಶ್ರೀಮದಾಚಾರ್ಯರು ಸಿದ್ಧಮಾಡಿರುವರು. ಆದುದರಿಂದ ಜ್ಞಾನಾನಂತರ ಕರ್ಮಮಾಡುವುದು ನಮಗೆ ಸಮ್ಮತವಾದುದೇ ಸರಿ. ಆದರೂ ಜ್ಞಾನಾನಂತರ ಕರ್ಮಮಾಡುವುದು ಎಂದರೆ ಜ್ಞಾನಕರ್ಮ ಸಮುಚ್ಚಯವಾದವು ಎಂತ ಯಾರೂ ಹೇಳಿರುವುದಿಲ್ಲ. ಮೋಕ್ಷವನ್ನು ಕುರಿತು ಜ್ಞಾನಕರ್ಮಗಳೆರಡೂ ಪರಸ್ಪರಸಾಪೇಕ್ಷವಾಗಿ ಕಾರಣಗಳು ಎಂದು ಹೇಳುವುದೇ ಜ್ಞಾನಕರ್ಮ ಸಮುಚ್ಚಯವಾದವು. ಈ ಜ್ಞಾನಕರ್ಮಸಮುಚ್ಚಯವಾದವನ್ನು ನಮ್ಮ ಆಚಾರ್ಯರು ಗೀತಾಭಾಷ್ಯದಲ್ಲಿ 'ಅತ ಏವ ಸಮುಚ್ಚಯನಿಯಮೋ ನಿರಾಕೃತಃ' ಎಂದು ಖಂಡನಮಾಡಿರುವರು. ರಾ॥ ತಿಲಕರವರು ಈ ವಾಕ್ಯದ ಪೂರ್ವೋತ್ತರ ಸಂದರ್ಭವನ್ನು ವಿಮರ್ಶೆಮಾಡದೆ ಜ್ಞಾನೋತ್ತರ ಕರ್ಮವನ್ನು ಮಾಡುವುದೇ ಜ್ಞಾನಕರ್ಮಸಮುಚ್ಚಯವೆಂದು ಭ್ರಮಿಸಿ ಶ್ರೀಮನ್ಮಧ್ವಾಚಾರ್ಯರವರು ಜ್ಞಾನಕರ್ಮ

ಸಮುಚ್ಚಯ ವಾದವನ್ನು ಖಂಡಿಸಿರುವುದರಿಂದ ಜ್ಞಾನೋತ್ತರ ಕರ್ಮ ಮಾಡುವುದು ಅವರಿಗೆ ಸಮ್ಮತವಲ್ಲವೆಂದು ಬರೆದಿರುತ್ತಾರೆ. (ಗೀ. ರ. ಪು. ೩೦೬ ಪ. ೭) ತಿಲಕರವರ ಈ ಪ್ರಮಾದವನ್ನು ತೋರಿಸುವುದಕ್ಕಾಗಿ ಇದುವರೆಗೂ ಈ ವಿಷಯವನ್ನು ವಿಚಾರಮಾಡಿದುದಾಯಿತು. ಪೂನಾವಲ್ಲಿ ನಡೆದ ಸಂವಾದದಲ್ಲಿ ಈ ವಿಷಯದ ವಿಶೇಷ ಚರ್ಚೆಯು ನಡೆದಿರುವುದು. ಸಂವಾದದ ಪುಸ್ತಕವನ್ನು ಓದುವುದರಿಂದ ವ್ಯಕ್ತವಾಗುತ್ತದೆ.

ಗೀ. ರ. ಪುಟ ೧೩. ಪ. ೧೭ ರಲ್ಲಿ 'ಈ ಸರ್ವಸಂಪ್ರದಾಯಗಳಲ್ಲಿ ಶಂಕರಾಚಾರ್ಯರ ಸಂಪ್ರದಾಯವು ಮೊದಲನೆಯದು; ಮತ್ತು ಬಹುಪ್ರಾಚೀನವಾದುದು. ಹಾಗೂ ತತ್ತ್ವಜ್ಞಾನ ಸಾಧಕವಾದ ಸಂಪ್ರದಾಯಗಳಲ್ಲಿ ಅದೇ ಸಂಪ್ರದಾಯವು ಭರತಖಂಡದಲ್ಲಿ ಬಹುಜನರಿಗೆ ಮಾನ್ಯವಾಗಿರುವುದು.' ಎಂದು ರಾ|| ತಿಲಕರವರು ಬರೆದಿರುತ್ತಾರೆ. ಶಂಕರಾಚಾರ್ಯರ ಮತದಲ್ಲಿ ಅವರಿಗಿಂತಲೂ ಪ್ರಾಚೀನರಾದ ಬೌದ್ಧಾದಿಗಳ ಮತವು ಎಷ್ಟು ಪ್ರವಿಷ್ಟವಾಗಿರುವುದು, "ಮಾಯಾವಾದಮಸಚ್ಛಾಸ್ತ್ರಂ ಪ್ರಚ್ಛನ್ನಂ ಬೌದ್ಧಮುಚ್ಯತೇ" ಎಂಬುವ ವಚನಾನುಸಾರ ಶಂಕರಾಚಾರ್ಯರು ಬೌದ್ಧಸಿದ್ಧಾಂತವನ್ನು ಎಷ್ಟು ಗ್ರಹಣ ಮಾಡಿರುವರು ಎಂಬುವುದನ್ನು ಪ್ರಮಾಣಪುರಸ್ಸರವಾಗಿ ಮುಂದೆ ವಿವೇಚನೆ ಮಾಡುವೆವು. ಅದನ್ನು ಓದಿದನಂತರ ಆ ಸಂಪ್ರದಾಯ ಸ್ಥಾಪಕರು ಶಂಕರಾಚಾರ್ಯರೋ ಅಥವಾ ಬುದ್ಧರೋ ಎಂಬುದು ವ್ಯಕ್ತವಾಗುವುದು. 'ತತ್ತ್ವಜ್ಞಾನ ಸಾಧಕಸಂಪ್ರದಾಯಗಳಲ್ಲಿ ಶಂಕರಾಚಾರ್ಯರ ಸಂಪ್ರದಾಯವೇ ಭರತಖಂಡದಲ್ಲಿ ಬಹುಜನರಿಗೆ ಮಾನ್ಯವಾಗಿರುವುದು' ಎಂದು ತಿಲಕರವರು ಬರೆದಿದ್ದಾರೆ. ಆದರೆ ಭರತಖಂಡದಲ್ಲಿ ಶಾಂಕರಮತಾನುಯಾಯಿಗಳೆಷ್ಟು ಜನರು, ಅನ್ಯಮತಾನುಯಾಯಿಗಳು ಎಷ್ಟು ಜನರು ಎಂಬುದನ್ನು ವಿಚಾರಮಾಡದೆ ತಮ್ಮ ಸಂಪ್ರದಾಯವೇ ಬಹುಮಾನ್ಯವೆಂದು ಹೇಳುವುದು 'ನನ್ನ ಮಗನು ಸರ್ವಾಂಗಸುಂದರನು' ಎಂದು ಹೇಳುವ ಅಜ್ಞಾನಿಯಾದ ಜನನಿಯ ವಾಕ್ಯದಂತೆ ಹಾಸ್ಯಾಸ್ಪದವಾಗಿರುವುದು. 'ಗೀತಾರಹಸ್ಯ ಗ್ರಂಥವನ್ನು ಒಬ್ಬನಿಗೋ,

ಸ್ಮರವಾಗಲೀ, ಒಂದು ಸಂಪ್ರದಾಯಸಿದ್ಧಿಗೋಸ್ಕರವಾಗಲಿ ಬರೆದಿರುವುದಿಲ್ಲ' ಎಂದು ಹೇಳುವುದು, ಮತ್ತು 'ಅನೇಕ ಸ್ಥಳಗಳಲ್ಲಿ ಶಂಕರಾಚಾರ್ಯರು ಆಗ್ರಹಾವಿಷ್ಟರಾಗಿ ಬರೆದಿರುವುದರಿಂದ ಈ ಅರ್ಥವು ನಮಗೆ ಸಮ್ಮತವಲ್ಲ' ಎಂದು ಕೈಯೆತ್ತಿ ಹೇಳುವ ತಿಲಕರವರು 'ಶಂಕರಾಚಾರ್ಯರ ಸಂಪ್ರದಾಯವೇ ಬಹುಮಾನ್ಯವು' ಎಂದು ಹೇಳುವುದು ಸರ್ವಥಾ ಯುಕ್ತವಲ್ಲ. ಶಂಕರಾಚಾರ್ಯರ ಸಂಪ್ರದಾಯವು ಬಹುಮಾನ್ಯವೆಂದು ಹೇಳುವುದು ಮತ್ತು ಅದನ್ನು ತಾವೇ ಖಂಡನಮಾಡುವುದು ಪರಸ್ಪರ ವಿರುದ್ಧವಾದುದು. ಈ ವಿರೋಧವು ರಾ|| ತಿಲಕರವರಿಗೆ ತಿಳಿಯದೆ ಇರುವುದಕ್ಕೆ ಅವರ ದುರಾಗ್ರಹವೇ ಕಾರಣವಾಗಿರುವುದು.

ಮ|| ರಾ|| ತಿಲಕರವರು ಗೀತಾರಹಸ್ಯದಲ್ಲಿ ಯಾವಯಾವ ಶಾಂಕರಸಂಪ್ರದಾಯಗಳನ್ನು ಸ್ವೀಕಾರ ಮಾಡಿರುವರೋ ಅವುಗಳಲ್ಲಿ ಯಾವ ದೋಷಗಳು ಇರುವುವೆಂಬುದನ್ನು ವಿಚಾರ ಮಾಡುವೆವು. (೧) ನಾನು ನೀನು ಎಂದು ಮನುಷ್ಯದೃಷ್ಟಿಗೆ ತೋರುವ ಭಿನ್ನಭಿನ್ನ ಪದಾರ್ಥಗಳು ಸತ್ಯವಾದುವುಗಳಲ್ಲ. ಈ ಪದಾರ್ಥಗಳಲ್ಲಿ ಒಬ್ಬನಾದ ಶುದ್ಧಪರಬ್ರಹ್ಮನು ತುಂಬಿರುವನು. ಅವನ ಮಾಯೆಯಿಂದಲೇ ಮನುಷ್ಯನ ಇಂದ್ರಿಯಗಳಿಗೆ ಭೇದವು ತೋರುವುದು. (೨) ಜೀವನು ಬ್ರಹ್ಮಸ್ವರೂಪನಾಗಿರುವನು. (೩) ಆತ್ಮ ಎಂದರೆ ಪರಬ್ರಹ್ಮನ ಅನುಭವಾತ್ಮಕವಾದ ಐಕ್ಯಜ್ಞಾನವು ಉಂಟಾದ ಹೊರತು ಮೋಕ್ಷವಾಗಲಾರದು ಎಂದು ಹೇಳುವುದೇ ಅದ್ವೈತವಾದವು. ಏಕ, ಶುದ್ಧ, ಬುದ್ಧ, ಮತ್ತು ಮುಕ್ತನಾದ ಪರಬ್ರಹ್ಮನ ಹೊರತು ಇನ್ನಾವವಸ್ತುವೂ ಸತ್ಯವಾದುದಲ್ಲ. ಮನುಷ್ಯನ ಇಂದ್ರಿಯಕ್ಕೆ ತೋರುವ ಭೇದವು ಮಾಯೆ ಯೆಂಬ ಉಪಾಧಿಯಿಂದ ತೋರುವುದರಿಂದ ಅದು ಭ್ರಮವಾಗಿರುವುದು. ಮಾಯೆಯಾದರೋ ಸತ್ಯವಾದ ಎರಡನೆಯ ಪದಾರ್ಥವಲ್ಲ. ಹೀಗೆ ಅದ್ವೈತಸಿದ್ಧಾಂತವಿರುವುದು, ಎಂದು ರಾ|| ತಿಲಕರವರು ಬರೆಯುತ್ತಾರೆ. ಹಾಗೂ ಇದೇ ಮತವನ್ನು ಅವರು ಸ್ವೀಕಾರ ಮಾಡಿದ್ದರಿಂದ ಈ ಮತವು ಶಾಸ್ತ್ರಕ್ಕೂ, ಯುಕ್ತಿಗೂ ವಿರುದ್ಧವಾದುದು ಎಂಬುವನ್ನು ಇಲ್ಲಿ ನಿರೂಪಿಸುವೆವು.

ಅದ್ವೈತ ಮತದಲ್ಲಿ ಪರಬ್ರಹ್ಮನೆಂಬ ವಸ್ತುವು ಒಂದೇ ಇರು ವುದರಿಂದ ಭ್ರಮಕ್ಕೆ ಕಾರಣವಿಲ್ಲದಿದ್ದರೂ ಭ್ರಮವುಂಟಾಗುವುದೆಂದು ಹೇಳಿದರೆ ಅಕಾರಣಕಾರ್ಯೋತ್ಪತ್ತಿಯನ್ನು ಒಪ್ಪಿದಂತಾಗುವುದು. ಆದುದರಿಂದ ಮಾಯೆಯು ಮಿಥ್ಯಾಭೂತವಾದುದೆಂದು ಹೇಳುವುದು ಅಯುಕ್ತವೆಂದು ಅಧ್ಯಾಸವಾದನಿರಾಸದಲ್ಲಿ ನಾವು ಹೇಳಿರುವೆವು. ಮಾಯೆಯಿಂದ ಮನುಷ್ಯರ ಇಂದ್ರಿಯಗಳಿಗೆ ಭೇದಭ್ರಮವು ಬರು ವುದು ಎಂದು ಹೇಳಿದರೆ ಭ್ರಮಕ್ಕೆ ಪೂರ್ವದಲ್ಲಿ ಮನುಷ್ಯರು ಮತ್ತು ಇಂದ್ರಿಯಗಳೂ ಉಂಟೆಂದು ಒಪ್ಪಿದಂತಾಗುವುದು. ಅವು ಸತ್ಯವೆಂದು ಹೇಳಿದರೆ ಅದ್ವೈತಸಿದ್ಧಾಂತಕ್ಕೆ ಭಂಗ ಬರುವುದು. ಆದ್ದರಿಂದ ಅವು ಸತ್ಯವೆಂದು ಹೇಳಕೂಡದು. ಆರೋಪಿತವೆಂದು ಹೇಳಿದರೆ ಆ ಆರೋಪ ಕ್ಕೆ ಕಾರಣವಾದ ಇಂದ್ರಿಯಾದಿಗಳನ್ನು ಬೇರೆ ಒಪ್ಪಬೇಕಾಗುವುದು. ಆ ಇಂದ್ರಿಯಾದಿಗಳು ಆರೋಪಿತವೆಂದು ಹೇಳಬೇಕಾಗುವುದು. ಹೀಗೆ ಅನವಸ್ಥೆಯುಂಟಾಗುವುದು.

ಜೀವನು ಸ್ವರೂಪದಿಂದ ಪರಬ್ರಹ್ಮಭೂತನಾಗಿದ್ದರೆ ಅವನಿಗೆ ಜೀವಭಾವವು ಬರಲು ಕಾರಣವಿಲ್ಲ. ಅದ್ವೈತಿಗಳು ಅವಿದ್ಯೆ ಅಥವಾ ಅಂತಃಕರಣ ಎಂಬ ಉಪಾಧಿಯಿಂದ ವಿಶಿಷ್ಟವಾದ ಬ್ರಹ್ಮಚೈತನ್ಯವೇ ಜೀವನೆಂದು ಹೇಳುವರು. ಬ್ರಹ್ಮನೆಂಬುದೊಂದೇ ಪದಾರ್ಥ ಉಂಟೆಂಬ ಅದ್ವೈತಿಗಳಿಗೆ ಉಪಾಧಿಯು ಎಲ್ಲಿಂದ ಬಂದಿತು? ಆ ಉಪಾಧಿಯು ಸತ್ಯವಾದುದೆಂದು ಹೇಳಿದರೆ ಅದ್ವೈತಮತಕ್ಕೆ ಭಂಗ ಬರುವುದು. ಅಧ್ಯಸ್ತವೆಂದು ಹೇಳುವುದಾದರೆ ಅಧ್ಯಾಸಕ್ಕೆ ಕಾರಣವೇ ಇಲ್ಲದಿರುವುದ ರಿಂದ ಅಧ್ಯಸ್ತವೆಂದು ಹೇಳಲಾಗುವುದಿಲ್ಲ. ಈ ರೀತಿಯಾಗಿ ಉಪಾ ಧಿಯೇ ಅಸಿದ್ಧವಾಗಿರಲು ಉಪಾಧಿಯಿಂದ ಬ್ರಹ್ಮಚೈತನ್ಯಕ್ಕೆ ಜೀವ ಭಾವವು ಬರುವುದು ಎಂದು ಹೇಳುವುದು 'ಮೂಲಂನಾಸ್ತಿ ಕುತಃಶಾಖಾ' ಎಂಬಂತೆ ಆಗುವುದು. ಅಲ್ಲದೆ ಉಪಾಧಿಯು ಬ್ರಹ್ಮನಿಗೆ ಸಂ ಬಂಧಪಟ್ಟು ಜೀವಭಾವವನ್ನುಂಟು ಮಾಡುವುದಾದರೆ ಆ ಉಪಾಧಿಯು ವ್ಯಾಪ್ತನಾದ ಸಂಪೂರ್ಣ ಬ್ರಹ್ಮನಿಗೆ ಸಂಬಂಧಪಡುವುದಾದರೆ ಸಂಪೂ ರ್ಣಬ್ರಹ್ಮನೂ ಜೀವನಾಗುವನು. ಉದಾಹರಣೆ— ಒಂದು ಮಹಾ

ಪ್ರದೇಶದಲ್ಲಿ ಸುತ್ತಲೂ ಒಂದೇ ಗೋಡೆಯನ್ನು ಹಾಕಿದರೆ ಬೇರೆಬೇರೆ ಕೊಠಡಿಗಳಿರಲಾರವು. ಅದೇ ಪ್ರದೇಶದಲ್ಲಿ ಅನೇಕ ಗೋಡೆಗಳನ್ನು ಹಾಕುವುದರಿಂದ ಪಾಕಗೃಹಾದ್ಯನೇಕ ಭಾಗಗಳಾಗುವುವು. ಇದರಂತೆ ಉಪಾಧಿಯು ಸಂಪೂರ್ಣ ಬ್ರಹ್ಮನಿಗೆ ಸಂಬಂಧಪಟ್ಟರೆ ಅನೇಕ ಜೀವಗಳಾಗಲಾರವು. ಅನೇಕ ಉಪಾಧಿಗಳು ಪರಬ್ರಹ್ಮನ ಆಯಾ ಭಾಗಗಳಲ್ಲಿ ಸಂಬಂಧಪಟ್ಟರೆ ಅನೇಕ ಜೀವಗಳಾಗುವುವು. ಆದರೆ ಅಖಂಡನಾದ ಪರಬ್ರಹ್ಮನಲ್ಲಿ ಭಾಗವೆಂಬುವಿಲ್ಲದೆ ಇರುವುದರಿಂದ ಹಾಗೆ ಹೇಳುವುದಕ್ಕಾಗುವುದಿಲ್ಲ. ಬ್ರಹ್ಮನಲ್ಲಿ ಭಾಗವೆಂಬುವುದು ಸ್ವಾಭಾವಿಕವಾಗಿಲ್ಲದಿದ್ದರೂ ಉಪಾಧಿಯಿಂದುಂಟಾಗುವುದು ಎಂದು ಹೇಳಿದರೆ ಆ ಉಪಾಧಿಯು ಸಂಪೂರ್ಣಬ್ರಹ್ಮನಿಗೆ ಸಂಬಂಧಪಡುವುದೋ ಅಥವಾ ಏಕದೇಶದಲ್ಲಿ ಸಂಬಂಧಪಡುವುದೋ ? ಸಂಪೂರ್ಣಬ್ರಹ್ಮನಿಗೆ ಸಂಬಂಧಪಟ್ಟರೆ ಅದರಿಂದ ಭಾಗವುಂಟಾಗಲಾರದು. ಏಕದೇಶದಲ್ಲಿ ಸಂಬಂಧಪಟ್ಟರೆ ಆ ಏಕದೇಶವು ಉಪಾಧಿಯಿಂದಲೇ ಉಂಟಾಗುವುದೆಂದು ಹೇಳಬೇಕಾಗುವುದರಿಂದ ಅನವಸ್ಥೆಯುಂಟಾಗುವುದು. ಅಲ್ಲದೆ, ‘ಅಸಂಗೋಹ್ಯಯಂಪುರುಷಃ’ ಎಂಬುವ ಶ್ರುತಿಗೆ ‘ಪರಬ್ರಹ್ಮನಿಗೆ ಯಾವ ಸಂಬಂಧವೂ ಇಲ್ಲವೆಂದು ಅರ್ಥಹೇಳುವ ಅದ್ವೈತಿಗಳು ಪರಬ್ರಹ್ಮನಿಗೆ ಉಪಾಧಿಸಂಬಂಧವು ಉಂಟೆಂದು ಹೇಳುವುದು ಅಯುಕ್ತವಾದುದು. ಇವೇ ಮೊದಲಾದ ಕಾರಣಗಳಿಂದ ಪರಬ್ರಹ್ಮನಿಗೆ ಜೀವಭಾವ ಬರುವುದು ಅನೇಕ ಶ್ರುತಿಸ್ಮೃತಿಗಳಿಗೂ ಯುಕ್ತಿಗೂ ವಿರುದ್ಧವಾದುದರಿಂದ ಜೀವನು ಬ್ರಹ್ಮಸ್ವರೂಪನೆಂದು ಹೇಳಕೂಡದು.

ಇನ್ನು ಜೀವನು ಬ್ರಹ್ಮಸ್ವರೂಪನಲ್ಲ ಎಂಬುವ ವಿಷಯದಲ್ಲಿ ಪ್ರಮಾಣಗಳಾವವು, ಮತ್ತು ಅದ್ವೈತವಾದಿಗಳು ಜೀವನು ಬ್ರಹ್ಮಸ್ವರೂಪನೆಂಬುವ ವಿಷಯದಲ್ಲಿ ಯಾವ ಪ್ರಮಾಣಗಳನ್ನು ಹೇಳುವರೋ ಅವುಗಳನ್ನು ಖಂಡನ ಮಾಡುವ ಕ್ರಮವು ಹೇಗೆಂಬುದನ್ನು ತಿಳಿಸುವೆವು.

ಜೀವನಿಗೂ ಬ್ರಹ್ಮನಿಗೂ ಇರುವ ಐಕ್ಯವು ಮಿಥ್ಯಾಭೂತವಾದುದರಿಂದ ಐಕ್ಯಜ್ಞಾನವು ಯಥಾರ್ಥವಾಗಲಾರದು. ಐಕ್ಯಜ್ಞಾನವು

ಅಯಥಾರ್ಥ ಎಂದರೆ ಭ್ರಮರೂಪವಾದರೆ ಅದರಿಂದ ಮೋಕ್ಷ ಉಂಟಾಗಲಾರದು. ಅಲ್ಲದೆ ಜೀವಬ್ರಹ್ಮರುಗಳ ಐಕ್ಯಜ್ಞಾನದಿಂದ ಮೋಕ್ಷಪ್ರಾಪ್ತಿಯಾಗುವುದೆಂದು ಎಲ್ಲಿಯೂ ಹೇಳಲಿಲ್ಲ. 'ಜುಷ್ಟಂಯದಾ ಪಶ್ಯತ್ಯನ್ಯಮೀಶಮಸ್ಯ ಮಹಿಮಾನಮಿತಿವೀತಶೋಕಃ' ಈ ಶ್ರುತಿಯಲ್ಲಿ ಸರ್ವರಿಂದ ಸೇವ್ಯನಾದ ಜೀವಭಿನ್ನನಾದ ಸರ್ವಸ್ವಾಮಿಯಾದ ಈಶ್ವರನನ್ನು ಯಾವ ಪುರುಷನು ನೋಡುವನೋ ಮತ್ತು ಅವನ ಗುಣಗಳನ್ನು ತಿಳಿಯುವನೋ ಅವನು ವೀತಶೋಕನಾಗುವನು ಎಂದರೆ ಮುಕ್ತನಾಗುವನು. 'ದ್ವಾವಿಮೌಪುರುಷೌಲೋಕೇ ಕ್ಷರಶ್ಚಾಕ್ಷರ ಏವಚ । ಕ್ಷರಸ್ಸರ್ವಾಣಿಭೂತಾನಿ ಕೂಟಸ್ಥೋಽಕ್ಷರಉಚ್ಯತೇ ॥ ಉತ್ತಮಃಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ । ಯೋಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯಈಶ್ವರಃ । ಯಸ್ಮಾತ್‌ಕ್ಷರಮತೀತೋಹಮಕ್ಷರಾದಪಿಚೋತ್ತಮಃ । ಅತೋಽಸ್ಮಿಲೋಕೇವೇದೇಚ ಪ್ರಥಿತಃ ಪುರುಷೋತ್ತಮಃ । ಯೋಮಾಮೇವಮಸಮ್ಮೂಢೋ ಜಾನಾತಿಪುರುಷೋತ್ತಮಂ । ಸಸರ್ವವಿದ್ಭಜತಿಮಾಂ ಸರ್ವಭಾವೇನಭಾರತ । ಇತಿಗುಹ್ಯತಮಂಶಾಸ್ತ್ರಮಿದಮುಕ್ತಂಮಯಾನಘ । ಏತದ್ಬುದ್ಧ್ವಾಬುದ್ಧಿಮಾನ್ಸ್ಯಾತ್ ಕೃತಕೃತ್ಯಶ್ಚಭಾರತ ॥ (ಗೀ. ಅ. ೧೫.)

ಈ ಗೀತೆಯ ಶ್ಲೋಕಗಳಲ್ಲಿ ಪರಮಾತ್ಮನು ಕ್ಷರಾಕ್ಷರ ಚೇತನಗಳಿಗಿಂತಲೂ ಉತ್ತಮನು ಭಿನ್ನನು ಎಂಬುವ ಜ್ಞಾನ ಉಂಟಾದನಂತರ ಜೀವನು ಅಪರೋಕ್ಷಜ್ಞಾನಿಯಾಗಿ ಮುಕ್ತನಾಗುವನು ಇತ್ಯಾದ್ಯರ್ಥಗಳು ಹೇಳಲ್ಪಟ್ಟವೆ. 'ತಮೇವಂವಿದ್ವಾನಮೃತಇಹಭವತಿ' ಎಂಬ ಶ್ರುತಿಯಲ್ಲಿ 'ಏವಂ' ಎಂದರೆ ಪೂರ್ವೋಕ್ತಗುಣವಿಶಿಷ್ಟನಾದ ಪರಮಾತ್ಮನನ್ನು ಯಾವನು ತಿಳಿಯುವನೋ ಅವನು ಮುಕ್ತನಾಗುವನೆಂದು, ಇತರ ಶ್ರುತಿಗಳಲ್ಲಿ ಜೀವಬ್ರಹ್ಮರುಗಳಿಗೆ ಭೇದಜ್ಞಾನದಿಂದಲೂ, ಪರಮಾತ್ಮನು ಗುಣಪೂರ್ಣನೆಂಬುವ ಜ್ಞಾನದಿಂದಲೂ ಮೋಕ್ಷಪ್ರಾಪ್ತಿಯಾಗುವುದೆಂದು ಹೇಳಿರುವುದು. ಅಲ್ಲದೆ 'ಈಶ್ವರೋಽಹಮಹಂಭೋಗೀ' (ಗೀ. ಅ. ೧೬. ಶ್ಲೋ. ೧೪.) ಇದರಲ್ಲಿ ಹೇಳಿದಂತೆ 'ನಾನೇ ಈಶ್ವರನು' ಎಂಬ ಜ್ಞಾನ ಉಳ್ಳವನು 'ಆಸುರೀಂಯೋನಿಮಾಪ

ನ್ಯಾಮೂಢಾ ಜನ್ಮನಿ ಜನ್ಮನಿ । ಮಾಮಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂ ಗತಿಂ । ” ಅನೇಕ ಜನ್ಮಗಳಲ್ಲಿ ಅಸುರಯೋನಿಯನ್ನು ಹೊಂದಿ ನನ್ನನ್ನು (ಈಶ್ವರನನ್ನು) ಯಾವಾಗಲೂ ಹೊಂದದೆ ಅನಂತರ ಅಧೋಗತಿಯನ್ನು ಹೊಂದುವನು’ ಎಂದು ಐಕ್ಯಜ್ಞಾನವನ್ನು ನಿಂದಿಸಿರುವರು. ಆದುದರಿಂದ ‘ಪರಬ್ರಹ್ಮನೊಬ್ಬನೇ ಸತ್ಯವಾದ ಪದಾರ್ಥವು, ಪ್ರಪಂಚವು ಆರೋಪಿತವಾದುದು, ಜೀವನು ಬ್ರಹ್ಮಸ್ವರೂಪನು. ಜೀವಬ್ರಹ್ಮರ ಐಕ್ಯಜ್ಞಾನದಿಂದ ಮೋಕ್ಷವುಂಟಾಗುವುದು’ ಇವೇ ಮುಂತಾದ ರಾ|| ತಿಲಕರವರಿಂದ ಅಂಗೀಕಾರ ಮಾಡಲ್ಪಟ್ಟ ಶಂಕರಾಚಾರ್ಯರ ಸಿದ್ಧಾಂತವು ಶಾಸ್ತ್ರವಿರುದ್ಧವಾದುದು. ಈ ವಿಷಯಗಳನ್ನು ಆಯಾ ಪ್ರಕರಣಗಳಲ್ಲಿ ವಿಸ್ತಾರವಾಗಿ ನಿರೂಪಿಸುವೆವು.

ಗೀ. ತ. ಪು. ೧೪. ಪಂ. ೧೫ ರಲ್ಲಿ ‘ಉಪನಿಷತ್ತುಗಳಲ್ಲಿಯೂ ಮತ್ತು ಬ್ರಹ್ಮಸೂತ್ರಗಳಲ್ಲಿಯೂ ಅದ್ವೈತಜ್ಞಾನ ಮಾತ್ರ ಹೇಳಿರುವುದಿಲ್ಲ. ಸಂನ್ಯಾಸಮಾರ್ಗವೂ ಹೇಳಿರುವುದು ಎಂದರೆ ಶಂಕರಾಚಾರ್ಯರ ಸಂಪ್ರದಾಯದ ಎರಡು ಅಂಶಗಳು (ಅದ್ವೈತಜ್ಞಾನ ಮತ್ತು ಸಂನ್ಯಾಸಮಾರ್ಗ) ಹೇಳಲ್ಪಟ್ಟಿರುವುವು’ ಎಂದು ಬರೆಯಲ್ಪಟ್ಟಿದೆ. ಇದು ಸರಿಯಾದುದಲ್ಲ. ಬ್ರಹ್ಮಸೂತ್ರಗಳಲ್ಲಿ ಜೀವಬ್ರಹ್ಮರುಗಳಿಗೆ ಭೇದವೇ ಹೇಳಿರುವುದು. ಅದ್ವೈತವನ್ನು ಹೇಳಲಿಲ್ಲ. ಎಂಬಂಶವು ಈ ಕೆಳಗಿನ ಉದಾಹರಣೆಗಳಿಂದ ವ್ಯಕ್ತವಾಗುವುದು. ‘ನೇತರೋಽನುಪಪತ್ತೇಃ’ (೧. ೧. ೧೬.) ಈ ಸೂತ್ರದ ಶಾಂಕರಭಾಷ್ಯ “ಇತಶ್ಚಾನಂದಮಯಃ ಪರಮಾತ್ಮಾ ನೇತರಃ ಇತರಃ ಈಶ್ವರಾದನ್ಯಃ ಸಂಸಾರೀ ಜೀವ ಇತ್ಯರ್ಥಃ” ಎಂದಿದೆ. ಇದರ ಅರ್ಥವು—‘ಈ ಕಾರಣದಿಂದಲೂ ಆನಂದಪೂರ್ಣನು ಪರಮಾತ್ಮನೇ ಆಗಿರುವನು. ಪರಮಾತ್ಮನಿಂದ ಭಿನ್ನವಾದ ಸಂಸಾರಿಯಾದ ಜೀವನು ಆನಂದಪೂರ್ಣನಲ್ಲ’ ಎಂದು.

‘ಭೇದವ್ಯಪದೇಶಾಚ್ಚ’ (೧. ೧. ೧೭.) ಈ ಸೂತ್ರದ ಶಾಂಕರಭಾಷ್ಯ “ಇತಶ್ಚ ನಾನಂದಮಯಃ ಸಂಸಾರೀ । ಯಸ್ಮಾದಾನಂದಮಯಾಧಿಕಾರೇ—‘ರಸೋ ವೈ ಸಃ’ ‘ರಸಂ ಹ್ಯೇವಾಯಂ ಲಬ್ಧ್ವಾನಂದೀ ಭವತಿ’ (ತೈ. ೨-೭) ಇತಿ ಜೀವಾನಂದಮಯಯೋರ್ಭೇದೇನ ವ್ಯಪದಿಶತಿ”

ಎಂದಿದೆ. ಇದರ ಅರ್ಥವು--“ಈ ಕಾರಣದಿಂದಲೂ ಆನಂದಪೂರ್ಣನಾದ ಬ್ರಹ್ಮನು ಜೀವನಲ್ಲ. ತೈತ್ತಿರೀಯ ಶ್ರುತಿಯಲ್ಲಿ ಆನಂದಪೂರ್ಣನಾದ ಬ್ರಹ್ಮನೂ ಜೀವನೂ ಪರಸ್ಪರ ಭಿನ್ನರೆಂದು ಹೇಳಲ್ಪಟ್ಟಿದೆ” ಎಂದು.

“ಭೇದವ್ಯಪದೇಶಾಚ್ಚಾನ್ಯಃ” (೧. ೧. ೨೧) ಈ ಸೂತ್ರದ ಶಾಂಕರಭಾಷ್ಯವು “ಅಸ್ತಿಚಾದಿತ್ಯಾದಿ ಶರೀರಾಭಿಮಾನಿಭ್ಯೋಜೀವೇಭ್ಯೋನ್ಯ ಈಶ್ವರೋಽನ್ತರ್ಯಾಮೀ” ಹೀಗೆಇದೆ. ಇದರ ಅರ್ಥವು “ಸೂರ್ಯನೇ ಮೊದಲಾದ ಶರೀರಾಭಿಮಾನಿ ಜೀವರುಗಳಿಂದ ಈಶ್ವರನು ಭಿನ್ನನೂ ಅಂತರ್ಯಾಮಿಯೂ ಆಗಿರುವನು” ಎಂದಿರುವುದು.

“ಜೀವಮುಖ್ಯಪ್ರಾಣಲಿಂಗಾನ್ನೇತಿ ಚೇನ್ನೋಪಾಸಾತ್ರೈವಿಧ್ಯಾದಾಶ್ರಿತತ್ವಾದಿಹತದ್ಯೋಗಾತ್” (೧. ೧. ೩೧) ಈ ಸೂತ್ರದಲ್ಲಿ ಜೀವ, ವಾಯು ಮತ್ತು ಪರಬ್ರಹ್ಮ ಇವರುಗಳಲ್ಲಿ ಪ್ರಾಣಶಬ್ದಕ್ಕೆ ವಾಚ್ಯರು ಯಾರು ಎಂದು ಶಂಕಿಸಿ ಪರಬ್ರಹ್ಮನೇ ಪ್ರಾಣಶಬ್ದಕ್ಕೆ ವಾಚ್ಯನು ಜೀವಾದಿಗಳು ಅಲ್ಲವೆಂದು ಭೇದವನ್ನೇ ಹೇಳಿರುವರು.

“ಅನುಪಪತ್ತೇಸ್ತು ನಶಾರೀರಃ” (೧. ೨. ೩.) ಈ ಸೂತ್ರದ ಶಾಂಕರಭಾಷ್ಯ--“ಬ್ರಹ್ಮೈವಪ್ರೋಕ್ತೇನ ನ್ಯಾಯೇನ ಮನೋಮಯತ್ವಾದಿಗುಣಂ ನತು ಶಾರೀರೋ ಜೀವೋ ಮನೋಮಯತ್ವಾದಿಗುಣಃ” ಎಂದಿದೆ. ಇದರ ಅರ್ಥವು—ಪೂರ್ವದಲ್ಲಿ ಹೇಳಿರುವ ನ್ಯಾಯದನುಸಾರವಾಗಿ ಮನೋಮಯತ್ವಾದಿ ಗುಣವಿಶಿಷ್ಟನು ಬ್ರಹ್ಮನೇ ಆಗಿರುವನು. ಜೀವನು ಮನೋಮಯತ್ವಾದಿ ಗುಣವಿಶಿಷ್ಟನಲ್ಲವೆಂದು. ಹೀಗೆ ಭೇದವೇ ಉಕ್ತವಾಗಿರುವುದು.

“ಕರ್ಮಕರ್ತೃವ್ಯಪದೇಶಾಚ್ಚ” (೧. ೨. ೪.) ಈ ಸೂತ್ರದ ಶಾಂಕರಭಾಷ್ಯವು—“ನಚ ಸತ್ಯಾಂಗತಾವೇಕಸ್ಯ ಕರ್ಮಕರ್ತೃವ್ಯಪದೇಶೋಯುಕ್ತಃ । ತಥೋಪಾಸ್ಯೋಪಾಸಕ ಭಾವೋಽಪಿ ಭೇದಾಧಿಷ್ಠಾನಏವ । ತಸ್ಮಾದಪಿನಶಾರೀರೋ ಮನೋಮಯತ್ವಾದಿವಿಶಿಷ್ಟಃ” ಹೀಗೆಇದೆ. ಇದರ ಅರ್ಥವು—ಪ್ರಾಪ್ತಿಯೆಂಬುವ ಕ್ರಿಯೆಗೆ ಜೀವನು ಕರ್ತೃವೆಂದು ಪ್ರಾಪ್ತನಾದ ಬ್ರಹ್ಮನು ಕರ್ಮವೆಂದೂ, ಹಾಗೆ ಉಪಾಸನಾ ಎಂಬುವ ಕ್ರಿಯೆಗೆ ಜೀವನು ಕರ್ತೃವು, ಬ್ರಹ್ಮನು ಕರ್ಮ

ಎಂತಲೂ ಶ್ರುತಿಯಲ್ಲಿ ಹೇಳಲ್ಪಟ್ಟಿರುವುದು. ಒಂದು ಕ್ರಿಯೆಯಲ್ಲಿ ಯಾವದು ಕರ್ತೃವಾಗಿರುವುದೋ ಅದು ಅದೇ ಕ್ರಿಯೆಯಲ್ಲಿ ಕರ್ಮವಾಗಲಾರದು. ಆದುದರಿಂದ ಒಂದೇ ಕ್ರಿಯೆಯಲ್ಲಿ (ಉಪಾಸನಾ ಅಥವಾ ಪ್ರಾಪ್ತಿಯಲ್ಲಿ) ಕರ್ತೃಕರ್ಮಭಾವವನ್ನು ಹೊಂದಿರುವ ಜೀವೇಶ್ವರರು ಭಿನ್ನರಾಗಿಯೇ ಇರುವರು. ಇದೇಕಾರಣದಿಂದಲೇ ಜೀವನು ಮನೋಮಯತ್ವಾದಿ ಗುಣವಿಶಿಷ್ಟನಲ್ಲ ಎಂದು.

'ಶಬ್ದವಿಶೇಷಾತ್' (೧. ೨. ೫.) ಈ ಸೂತ್ರದ ಶಾಂಕರಭಾಷ್ಯವು— 'ತಸ್ಮಾತ್ತಯೋರ್ಭೇದೋಽಧಿಗಮ್ಯತೇ' ಎಂದಿದೆ. ಇದರ ಅರ್ಥವು 'ಆ ಕಾರಣದಿಂದ ಜೀವೇಶ್ವರರಿಗೆ ಭೇದವು ವ್ಯಕ್ತವಾಗುತ್ತದೆ' ಎಂಬುದಾಗಿದೆ.

'ಸ್ಮೃತೇಶ್ಚ' (೧. ೨. ೬.) ಈ ಸೂತ್ರದ ಶಾಂಕರಭಾಷ್ಯವು 'ಸ್ಮೃತಿಶ್ಚ ಶಾರೀರಪರಮಾತ್ಮನೋರ್ಭೇದಂ ದರ್ಶಯತಿ "ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ । ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ ।" (ಗೀ. ಅ. ೧೮, ಶ್ಲೋ. ೬೧.) ಇತ್ಯಾದ್ಯಾ' ಹೀಗೆಇದೆ. ಇದರ ಅರ್ಥವು— 'ಈಶ್ವರಸ್ಸರ್ವಭೂತಾನಾಂ' ಇವೇ ಮೊದಲಾದ ಸ್ಮೃತಿಗಳೂ ಕೂಡ 'ಶಾರೀರ' ಎಂವರೆ ಜೀವನಿಗೂ ಮತ್ತು ಪರಮಾತ್ಮನಿಗೂ ಭೇದವನ್ನೇ ಹೇಳುವುವೆಂದು.

'ಶಾರೀರಶ್ಚೋಭಯೇಪಿಹಿ ಭೇದೇನೈನಮಧೀಯತೇ' (೧. ೨. ೨೦.) ಈ ಸೂತ್ರದ ಶಾಂಕರಭಾಷ್ಯವು— 'ತಸ್ಮಾಚ್ಛಾರೀರಾದನ್ಯ ಈಶ್ವರೋಽನ್ತರ್ಯಾಮೀತಿ ಸಿದ್ಧಮ್' ಹೀಗೆಇದೆ. ಇದರ ಅರ್ಥವು— 'ಆ ಕಾರಣದಿಂದ 'ಶಾರೀರ' ಎಂದರೆ ಜೀವನ ದೆಸೆಯಿಂದ ಪರಮೇಶ್ವರನು ಭಿನ್ನನೆಂದು ಸಿದ್ಧವಾಗುವುದು.' ಹೀಗೆಂದು ಭೇದವೇ ಹೇಳಲ್ಪಟ್ಟಿರುತ್ತದೆ.

'ಸುಷುಪ್ತ್ಯುತ್ಕ್ರಾನ್ತ್ಯೋರ್ಭೇದೇನ' (೧. ೩. ೪೨.) ಈ ಸೂತ್ರದ ಶಾಂಕರಭಾಷ್ಯವು 'ಸುಷುಪ್ತಾವುತ್ಕ್ರಾನ್ತೌ ಚ ಶಾರೀರಾದ್ಭೇದೇನ ಪರಮೇಶ್ವರಸ್ಯ ವ್ಯಪದೇಶಾತ್ । ಸುಷುಪ್ತೌ ತಾವತ್ 'ಅಯಂ ಪುರುಷಃ ಪ್ರಾಜ್ಞೇನಾತ್ಮನಾ ಸಂಪರಿಷ್ವಕ್ತೋ ನ ಬಾಹ್ಯಂ

ಕಿಂಚನವೇದನಾನ್ತರಮ್' (ಬೃ. ೪. ೩. ೨೧.) ಇತಿ ಶಾರೀರಾದ್ಭೇದೇನ ಪರಮೇಶ್ವರಂ ವ್ಯಪದಿಶತಿ. ತಥೋತ್ಕ್ರಾನ್ತಾವಪಿ 'ಅಯಂ ಶಾರೀರ ಆತ್ಮಾ ಪ್ರಾಜ್ಞೇನಾತ್ಮನಾನ್ವಾರೂಢ ಉತ್ಸರ್ಜನ್ಯಾತಿ' (ಬೃಹ. ೪. ೩೫.) ಇತಿ ಜೀವಾದ್ಭೇದೇನ ಪರಮೇಶ್ವರಂ ವ್ಯಪದಿಶತಿ' ಎಂತ ಇದೆ. ಇದರ ಅರ್ಥವು 'ಉಪನಿಷತ್ತುಗಳು ಸುಷುಪ್ತಿಯಲ್ಲಿಯೂ ಮರಣಕಾಲದಲ್ಲಿಯೂ ಜೀವಬ್ರಹ್ಮರುಗಳಿಗೆ ಭೇದವನ್ನು ಹೇಳುವುವು' ಎಂದು ಇರುವುದು. ಈ ಪ್ರಕಾರ ಜೀವಬ್ರಹ್ಮರುಗಳಿಗೆ ಭೇದಪರವಾಗಿ ಶಂಕರಾಚಾರ್ಯರು ವ್ಯಾಖ್ಯಾನ ಮಾಡಿರುವ ಮತ್ತು ವಸ್ತುಗತಿಯಿಂದ ಭೇದಪ್ರತಿಪಾದಕವಾದ ಕೆಲವು ಸೂತ್ರಗಳನ್ನು ಮಾತ್ರ ನಾವು ಇಲ್ಲಿ ಹೇಳಿ ತೋರಿಸಿರುವೆವು. ಇವರಂತೆ ಯಾವತ್ತು ಸೂತ್ರಗಳೂ ಜೀವಬ್ರಹ್ಮರುಗಳ ಭೇದವನ್ನೇ ಅಥವಾ ಅದಕ್ಕೆ ಜ್ಞಾಪಕವಾದ ಧರ್ಮಗಳನ್ನೇ ಆಗಲಿ ಹೇಳುವುವು. ಜೀವಬ್ರಹ್ಮರುಗಳ ಐಕ್ಯವು ಯಾವ ಸೂತ್ರದಲ್ಲಿಯೂ ಹೇಳಲ್ಪಟ್ಟಿರುವುದಿಲ್ಲ.

"ಉತ್ತರಾಚ್ಚೇದಾವಿರ್ಭೂತಸ್ವರೂಪಸ್ತು" (೧. ೩. ೧೯.) ಈ ಸೂತ್ರಕ್ಕೆ ಅರ್ಥವನ್ನು ಬರೆಯುವಾಗ ಶಂಕರಾಚಾರ್ಯರು 'ಜೀವನು ಬ್ರಹ್ಮನಿಂದ ಅಭಿನ್ನನಾಗಿರಲು ಸೂತ್ರಕಾರರು ಜೀವಬ್ರಹ್ಮರುಗಳಿಗೆ ಭೇದವನ್ನು ಹೇಳುವುದಕ್ಕೆ ಕಾರಣವೇನು?' ಎಂತು ಶಂಕಿಸಿ, 'ತತ್ರಾಯಮಭಿಪ್ರಾಯಃ-ನಿತ್ಯಶುದ್ಧಮುಕ್ತಸ್ವಭಾವೇ ಕೂಟಸ್ಥನಿತ್ಯೇ ಏಕಸ್ಮಿನ್ನಸಂಗೇ ಪರಮಾತ್ಮನಿ ತದ್ವಿಪರೀತಂ ಜೈವಂ ರೂಪಂ ವ್ಯೋಮ್ನೀವ ತಲಮಲಾದಿ ಪರಿಕಲ್ಪಿತಮ್. ತದಾತ್ಮೈಕತ್ವ ಪ್ರತಿಪಾದನಪರೈರ್ವಾಕ್ಯೈರ್ನ್ಯಾಯೋಪೇತೈ ರ್ದ್ವೈತವಾದಪ್ರತಿಷೇಧೈಶ್ಚಾಪನೇಷ್ಯಾಮೀತಿ ಪರಮಾತ್ಮನೋ ಜೀವಾದನ್ಯತ್ವಂ ದೃಢಯತಿ. ಜೀವಸ್ಯತು ನ ಪರಸ್ಮಾದನ್ಯತ್ವಂ ಪ್ರತಿಪಿಪಾದಯಿಷತಿ, ಕಿಂತ್ವನುವದತ್ಯೇವಾವಿದ್ಯಾಕಲ್ಪಿತಂ ಲೋಕಪ್ರಸಿದ್ಧಂ ಜೀವಭೇದಮ್।' ಎಂದು ಹೇಳಿರುವರು. ಈ ಭಾಷ್ಯಕ್ಕೆ ಅರ್ಥವು 'ನಿತ್ಯನೂ ಶುದ್ಧನೂ, ಜ್ಞಾನಸ್ವರೂಪಿಯೂ, ಮುಕ್ತನೂ, ಕೂಟಸ್ಥನೂ (ನಿರ್ವಿಕಾರನು), ಅಸಂಗನೂ ಆದ ಪರಬ್ರಹ್ಮನಲ್ಲಿ ಅವನಿಗೆ ವಿರುದ್ಧವಾದ (ಅಂದರೆ ಅಶುದ್ಧೇತ್ಯಾದಿ)

ಜೀವಭಾವವು ಆಕಾಶದಲ್ಲಿ ಕೃಷ್ಣವರ್ಣದಂತೆ ಅಧ್ಯಸ್ತವಾಗಿರುವುದು. ಆ ಅಧ್ಯಾಸವನ್ನು ಜೀವಬ್ರಹ್ಮರುಗಳಿಗೆ ಐಕ್ಯವನ್ನು ಹೇಳುವ ವಾಕ್ಯಗಳಿಂದಲೂ, ಯುಕ್ತಿಸಿದ್ಧವಾದ ದ್ವೈತನಿಷೇಧದಿಂದಲೂ ದೂರಮಾಡಬೇಕೆಂಬ ಉದ್ದೇಶದಿಂದ ಸೂತ್ರಕಾರರು ಜೀವಬ್ರಹ್ಮರುಗಳ ಭೇದವನ್ನು ದೃಢಮಾಡುವರು. ಸೂತ್ರಕಾರರಿಗೆ ಜೀವಬ್ರಹ್ಮರುಗಳ ಭೇದಗಳನ್ನು ಹೇಳುವುದರಲ್ಲಿ 'ತಾತ್ಪರ್ಯವಿಲ್ಲ. ಆದರೆ, ಅವಿದ್ಯೆಯಿಂದ ಕಲ್ಪಿತವಾದ ಮತ್ತು ಲೋಕಸಿದ್ಧವಾದ ಜೀವಬ್ರಹ್ಮರುಗಳ ಭೇದವನ್ನು ಅನುವಾದ ಮಾಡುವರು' ಎಂಬುದಾಗಿರುವುದು. ಆದರೆ ಸೂತ್ರಕಾರರು ಯಾವ ಸೂತ್ರದಲ್ಲಿಯೂ ಜೀವಬ್ರಹ್ಮರ ಐಕ್ಯವನ್ನು ಹೇಳುವುದಿಲ್ಲ. ಸರ್ವಸೂತ್ರಗಳಲ್ಲಿಯೂ ಭೇದವನ್ನೇ ಹೇಳುವರು. ಇದರಿಂದ ಜೀವಬ್ರಹ್ಮರ ಐಕ್ಯವು ಸೂತ್ರಕಾರರಿಗೆ ಇಷ್ಟವಲ್ಲವೆಂದು ಸಿದ್ಧವಾಗುವುದು. ಹೀಗಿರಲು 'ಸೂತ್ರಕಾರರು ಭೇದವನ್ನು ಅನುವಾದ ಮಾಡುವರೇ ಹೊರತು ಭೇದವನ್ನು ವಿಧಾನ ಮಾಡುವವರಲ್ಲ. ಅವರಿಗೆ ಭೇದದಲ್ಲಿ ತಾತ್ಪರ್ಯವಿಲ್ಲನೆಂದು ಹೇಗೆ ಹೇಳಬೇಕು' ಎಂದು ಶಂಕಿಸಿ, 'ಪ್ರತಿಪಾದ್ಯಂತು ಶಾಸ್ತ್ರಾರ್ಥಮಾತ್ಮೈಕತ್ವಮೇವ ದರ್ಶಯತಿ "ಶಾಸ್ತ್ರದೃಷ್ಟ್ಯಾತೂಪದೇಶೋ ವಾಮದೇವವತ್" (ಬ್ರ. ೧. ೧. ೩೦) ಇತ್ಯಾದಿನಾ' ಎಂದು 'ಸೂತ್ರದಲ್ಲಿ ಜೀವಬ್ರಹ್ಮರುಗಳ ಐಕ್ಯವು ಪ್ರತಿಪಾದಿಸಲ್ಪಟ್ಟಿರುವುದು' ಎಂದು ಶಂಕರಾಚಾರ್ಯರು ಬರೆಯುತ್ತಾರೆ. ಇದರಿಂದ ಸೂತ್ರಕಾರರು ಅನೇಕ ಸೂತ್ರಗಳಲ್ಲಿ ಜೀವಬ್ರಹ್ಮರುಗಳ ಭೇದವನ್ನೇ ಹೇಳುವರೆಂಬುದು ಶಂಕರಾಚಾರ್ಯರಿಗೂ ಸಮ್ಮತವೆಂದು ಸಿದ್ಧವಾಗುವುದು. ಆ ಸೂತ್ರಗಳಿಗೆ ಬೇರೆ ಅರ್ಥವನ್ನು ಬರೆಯುವುದು ಅಶಕ್ಯವಾದುದರಿಂದ ಭೇದಪರವಾಗಿ ಅರ್ಥವನ್ನು ಬರೆದು ತಮ್ಮಗೆ ಅಭೇದಮತವಾದ ಅದ್ವೈತಸಿದ್ಧಾಂತಕ್ಕೆ ಆ ಸೂತ್ರಗಳು ವಿರುದ್ಧವಾದುವರಿಂದ 'ಭೇದವು ಮಿಥ್ಯಾ' ಎಂದು ಹೇಳುವ ಪದವು ಸೂತ್ರದಲ್ಲಿಲ್ಲದಿದ್ದರೂ ಸೂತ್ರಕಾರರು ಹೇಳುವ ಭೇದವು ಮಿಥ್ಯಾಭೂತವಾದುದೆಂದು ಹೇಳುವುದು ಯುಕ್ತವಲ್ಲ. ಹೀಗಿರಲು ಈ ಮತವನ್ನು ಅನುವಾದ ಮಾಡಿ ಮ॥ ರಾ॥ ತಿಲಕರವರು ಅದನ್ನು ಅನುಮೋದಿಸುವುದು ಯುಕ್ತವಲ್ಲ.

“ ಅಯಂ ಪುರುಷಃ ಪ್ರಾಜ್ಞೇನಾತ್ಮನಾ ಸಂಪರಿಷ್ವಕ್ತಃ. ಶಾರೀರಆತ್ಮಾ ಪ್ರಾಜ್ಞೇನಾತ್ಮನಾ ಅನ್ವಾರೂಢಃ ಉತ್ಸರ್ಜನ್ಯಾತಿ ” (ಬ್ರ.೧.೩.೪೨.) ಈ ಸೂತ್ರದ ಶಾಂಕರಭಾಷ್ಯದಲ್ಲಿ ಉದಾಹರಿಸಿರುವ ಈ ಎರಡು ಉಪನಿಷದ್ವಾಕ್ಯಗಳು ಮತ್ತು ವೇದಾಂತಸೂತ್ರ(೧.೨.೨೦) ಭಾಷ್ಯದಲ್ಲಿ ಉದಾಹರಿಸಿದ “ ಯೋವಿಜ್ಞಾನೇತಿಷ್ಠನ್ವಿಜ್ಞಾನಾದಂತರೋಯಂ ವಿಜ್ಞಾನಂ ನವೇದ ಯಸ್ಯ ವಿಜ್ಞಾನಂಶರೀರಂ ಯೋವಿಜ್ಞಾನಮಂತರೋಯಮಯತಿ ಏಷತ ಆತ್ಮಾ ಅಂತರ್ಯಾಮ್ಯಮೃತಃ ” (ಬೃ. ಕಾಣ್ವಪಾಠಾನುಸಾರ ೩.೭.೨೨.) ಯಾವ ಪರಮಾತ್ಮನುಜ್ಞಾನಸ್ವರೂಪಿಯಾವ ಜೀವನಲ್ಲಿದ್ದು ಆ ಜೀವನಿಂದ ಭಿನ್ನನಾಗಿಯೂ ಆ ಜೀವನಿಂದ ಅಜ್ಞೇಯನಾಗಿಯು ಇರುವನೋ ಯಾವ ಪರಮಾತ್ಮನಿಗೆ ಆ ಜೀವನು ಶರೀರದಂತೆ ನಿಯಮ್ಯನಾಗಿ ಇರುವನೋ ಯಾವ ಪರಮಾತ್ಮನು ಅಂತಃಕರಣದಲ್ಲಿ ಇದ್ದು ನಿಯಮನ ಮಾಡುವನೋ ಅಂತಹ ನಾಶರಹಿತನಾದ ಪರಮಾತ್ಮನೇ ನಿನಗೆ ಅಂತರ್ಯಾಮಿಯಾಗಿರುವನೆಂದರ್ಥವುಳ್ಳ ವಾಕ್ಯವು, “ ಯ ಆತ್ಮನಿತಿಷ್ಠನ್ ಆತ್ಮನೋಂತರಃ ಯಮಾತ್ಮಾ ನವೇದ. ಬೃ. ” ಇವೇ ಮೊದಲಾದ ಉಪನಿಷದ್ವಾಕ್ಯಗಳು, ಮತ್ತು ಆಯಾ ಸೂತ್ರದಲ್ಲಿ ಉದಾಹರಿಸಿರುವ ಉಪನಿಷದ್ವಾಕ್ಯಗಳು ಮತ್ತು (೩. ೨. ೨೩.) ಈ ಸೂತ್ರದ ಶಾಂಕರ ಭಾಷ್ಯದಲ್ಲಿ ಉದಾಹರಿಸಿರುವ “ ತತಸ್ತುತಂ ಪಶ್ಯತೇನಿಷ್ಕಲಂಧ್ಯಾಯಮಾನಃ. ಮುಂ” ಈ ಉಪನಿಷದ್ವಾಕ್ಯವು ಜೀವೇಶ್ವರರಿಗೆ ಧ್ಯಾತೃಧ್ಯೇಯಭಾವ ಸಂಬಂಧಮೂಲಕವಾಗಿಯು, ದ್ರಷ್ಟೃದೃಶ್ಯಭಾವ ಸಂಬಂಧ ಮೂಲಕವಾಗಿಯೂ ಭೇದವನ್ನೆ ಹೇಳುವುವು. “ ಪರಾತ್ಪರಂಪುರುಷ ಮುಪೈತಿದಿವ್ಯಂ ” ಮುಂಡಕದಲ್ಲಿ ಗಂತೃಗಂತವ್ಯಭಾವಸಂಬಂಧವು, “ ಯಸ್ಸರ್ವಾಣಿಭೂತಾನಿ ಅಂತರೋಯಮಯತಿ ” ಇಲ್ಲಿ ನಿಯಮ್ಯನಿಯಾಮಕ ಭಾವಸಂಬಂಧವೂ ಹೇಳಿರುವುದರಿಂದ ಭೇದವೇ ಹೇಳಲ್ಪಟ್ಟಿರುವುದು. “ ಅಜೋಹ್ಯೇಕೋಜುಷಮಾಣೋನುಶೇತೇಜಹಾತ್ಯೇನಾಂ ಭುಕ್ತಭೋಗಾಮಜೋನ್ಯಃ। ತಯೋರನ್ಯಃ ಪಿಪ್ಪಲಂಸ್ವಾದ್ವತ್ತಿ ಅನಶ್ನನ್ನನ್ಯೋ ಅಭಿಚಾಕಶೀತಿ ” ಇವೇ ಮೊದಲಾದ ಉಪನಿಷದ್ವಾಕ್ಯಗಳಲ್ಲಿ ಭೇದವೇ ಹೇಳಲ್ಪಟ್ಟಿ

ರುವದೆಂದು ಅದ್ವೈತವಾದಿಗಳಾದ ಶಂಕರಾಚಾರ್ಯರೇ ಒಪ್ಪಿರುವರು.

ಹೀಗಿರಲು ಉಪನಿಷತ್ತುಗಳು ದ್ವೈತವನ್ನೇ ಪ್ರತಿಪಾದನಮಾಡುವುವು ಯೆಂದು ಹೇಳುವುದು ಅಯುಕ್ತವಲ್ಲ.

ಮೇಲೆ ಹೇಳಿರುವ ವಾಕ್ಯಗಳಲ್ಲದೆ ಭೇದಪ್ರತಿಪಾದಕವೆಂದು ಶಂಕರಾಚಾರ್ಯರು ಒಪ್ಪಿ ಇರುವ ಮತ್ತು ಅನೇಕವಾದ ಉಪನಿಷದ್ವಾಕ್ಯಗಳನ್ನು ಹೇಳಬಹುದು. ಆದರೆ ಗ್ರಂಥವಿಸ್ತಾರ ಭಯದಿಂದ ನಾವು ಅದನ್ನು ಹೇಳುವುದಿಲ್ಲ. ಹಾಗೆ ಹೇಳುವುದು ಅವಶ್ಯವಾಗಿ ಕಂಡು ಬಂದರೆ ಹೇಳುವೆವು.

ಶಂಕರಾಚಾರ್ಯರು ಅದ್ವೈತ ಪ್ರತಿಪಾದಕವೆಂದು ಹೇಳುವ "ತತ್ತ್ವಮಸಿ" "ಸರ್ವಂಖಲ್ವಿದಂಬ್ರಹ್ಮ" "ಅಹಂಬ್ರಹ್ಮಾಸ್ಮಿ" "ಯಸ್ಮಿನ್ ಸರ್ವಾಣಿಭೂತಾನಿ ಆತ್ಮೈವಾಭೂದ್ವಿಜಾನತಃ" ಇವೇ ಮೊದಲಾದ ವಾಕ್ಯಗಳು ಅದ್ವೈತಪ್ರತಿಪಾದಕಗಳಲ್ಲವೆಂದು ಶ್ರುತ್ಯರ್ಥವಿಚಾರವೆಂಬುವ ಪ್ರಕರಣದಲ್ಲಿ ಹೇಳುವೆವು. ಅದನ್ನು ನೋಡಬಹುದು.

ಈ ರೀತಿಯಾಗಿ ಮೇಲೆ ಹೇಳಿರುವ ಉಪನಿಷದ್ವಚನಗಳು ದ್ವೈತವನ್ನು ಪ್ರತಿಪಾದನ ಮಾಡುತ್ತಲಿರಲು ಉಪನಿಷತ್ತುಗಳು ಅದ್ವೈತವನ್ನು ಪ್ರತಿಪಾದನ ಮಾಡುವುವು ಎಂದು ಹೇಳೋಣವು, ಸಮಂಜಸರೂ, ಸಂಪ್ರದಾಯ ದೋಷರಹಿತರು, ಮತ್ತು ನಿಷ್ಪಕ್ಷಪಾತದಿಂದ ವಿಚಾರ ಮಾಡತಕ್ಕವರು ಆದ ಲೌಕಿಕರುಗಳಿಗೆ ಸರಿಯಾಗುವುದಲ್ಲ. ಸೂತ್ರ (೧. ೨. ೭.) ಇದರ ಶಾಂಕರಭಾಷ್ಯದಲ್ಲಿ "ಈಶ್ವರಃಸರ್ವಭೂತಾನಾಂ ಹೃದ್ದೇಶೇಽರ್ಜುನತಿಷ್ಠತಿ । ಭ್ರಾಮಯನ್ ಸರ್ವಭೂತಾನಿಯಂತ್ರಾರೂಢಾನಿಮಾಯಯಾ ॥ ಇತ್ಯಾದ್ಯಾಸ್ಮೃತಿಶ್ಚ ಶಾರೀರಪರಮಾತ್ಮನೋರ್ಭೇದಂದರ್ಶಯತಿ" ಹೀಗೆಂದು ಗೀತೆಯಲ್ಲಿ ಜೀವೇಶ್ವರರ ಭೇದವೇ ಪ್ರತಿಪಾದಿತವಾಗಿರುವುದೆಂದು ಶಂಕರಾಚಾರ್ಯರು ಸ್ಪಷ್ಟವಾಗಿಯೇ ಹೇಳಿರುವರು. ಮತ್ತು ಗೀತೆಯಲ್ಲಿ ಐಕ್ಯವನ್ನು ಹೇಳುವ ಶ್ಲೋಕ ಒಂದಾದರೂ ಇಲ್ಲ. ಅಲ್ಲದೆ "ಉತ್ತಮಃಪುರುಷಸ್ತ್ವನ್ಯಃ" ಇವೇ ಮೊದಲಾದ ಭೇದಪ್ರತಿಪಾದಕ ಶ್ಲೋಕಗಳು ಅನೇಕವಿರುವುವು. ಹಾಗೂ "ಈಶ್ವರೋಽಹಂ" ಎಂಬ ಶ್ಲೋಕದಲ್ಲಿ ನಾನು ಈಶ್ವರಸ್ವರೂ

ಢಿಯು ಯೆಂದು ತಿಳಿಯುವ ಜನರು “ ಆಸುರೀಂಯೋನಿಮಾಪನ್ನಾಮೂಢಾಜನ್ಮನಿಜನ್ಮನಿ। ಮಾಮಪ್ರಾಪ್ಯೈವಕೌಂತೇಯ ತತೋಯಾಂತ್ಯಧಮಾಂಗತಿಂ ” ಎಂಬ ಶ್ಲೋಕದಲ್ಲಿ ವರ್ಣಿಸುವಂತೆ ಆಸುರ ಯೋನಿಯನ್ನು ಹೊಂದಿ ಎಂದಿಗೂ ಪರಮಾತ್ಮನ ಸಾನ್ನಿಧ್ಯವನ್ನು ಸೇರದೆ ಅಧೋಗತಿಯನ್ನು ಹೊಂದುವರೆಂದು ಜೀವೇಶ್ವರರ ಐಕ್ಯವಾದಿಗಳ ನಿಂದೆಯನ್ನು ಮಾಡಿರುವುದರಿಂದ ಗೀತೆಯು ಐಕ್ಯಪ್ರತಿಪಾದಕವೆಂದು ಹೇಳುವುದು ಸರ್ವಥಾ ಯುಕ್ತವಲ್ಲ.

“ ಭಾಗವತ ಧರ್ಮದಲ್ಲಿ ವಿಶಿಷ್ಟಾದ್ವೈತ ಮತವು ಸೇರುವುದಕ್ಕೆ ಇವರ (ರಾಮಾನುಜಾಚಾರ್ಯರ) ಗ್ರಂಥಗಳೇ ಕಾರಣವೆಂದು ಹೇಳಬಹುದು. ಏಕೆಂದರೆ—ಇದಕ್ಕೂ ಪೂರ್ವದಲ್ಲಿ ಮಹಾಭಾರತದಲ್ಲಿಯೂ ಗೀತೆಯಲ್ಲಿಯೂ ನಿರೂಪಿಸಲ್ಪಟ್ಟಿರುವ ಭಾಗವತಧರ್ಮವು ಅದ್ವೈತ ಮತವನ್ನು ಸ್ವೀಕರಿಸಿ ನಿರೂಪಿಸಲ್ಪಟ್ಟಿರುವುದು ” (ಗೀ.ರ. ಪು. ೫೫೩. ಪ. ೨೮.) ಎಂದು ತಿಲಕರವರು ಬರೆಯುತ್ತಾರೆ. ಆದರೆ ಅದು ಸರಿಯಾದುದಲ್ಲ. ಏಕೆಂದರೆ ಗೀತೆಯಲ್ಲಿರುವ ಒಂದು ಶ್ಲೋಕವಾದರೂ ಮೇಲೆ ಹೇಳಿರುವ ಪ್ರಕಾರ ಅದ್ವೈತ ಪ್ರತಿಪಾದಕವಲ್ಲವೆಂದು ಸಿದ್ಧವಾಗುವುದರಿಂದ ಗೀತೆಯಲ್ಲಿ ಅದ್ವೈತಮತವನ್ನು ಸ್ವೀಕರಿಸಿ ಭಾಗವತಧರ್ಮವು ನಿರೂಪಿಸಲ್ಪಟ್ಟಿರುವುದು ಎಂದು ಹೇಳುವುದು ಸಂಪ್ರದಾಯ ಮೂಲಕವಾದ ದೃಷ್ಟಿದೋಷದ ಫಲವು. ಮಹಾಭಾರತದಲ್ಲಿಯೂ ರುದ್ರದೇವರಿಗೆ ಚತುರ್ಮುಖ ಬ್ರಹ್ಮದೇವರು ಹೇಳುವುದೇನೆಂದರೆ—“ ಮಮಾಂತರಾತ್ಮಾತವಚಯೇಚಾನ್ಯೇದೇಹಿಸಂಜ್ಞಿತಾಃ ॥ ಸರ್ವೇಷಾಂಸಾಕ್ಷಿಭೂತೋಽಸೌನಗ್ರಾಹ್ಯಃ ಕೇನಚಿತ್ಕ್ವಚಿತ್ ” ॥ (ಮ. ಭಾ. ಶಾಂ. ೩೫೧-೪.) ‘ ನನ್ನ ಶರೀರದಲ್ಲಿರುವ ಆತ್ಮನು (ಪರಮಾತ್ಮನು) ನಿನ್ನ (ರುದ್ರದೇವರ) ಮತ್ತು ಇತರ ದೇಹಿಗಳ ನಿಯಾಮಕನು, ಸಾಕ್ಷಿಭೂತನು ಆಗಿರುವನು ’ ಹೀಗೆಂದು ಜೀವನಿಗೂ ಪರಮಾತ್ಮನಿಗೂ ಭೇದವನ್ನೇ ಹೇಳಿರುವುದು. ಅಲ್ಲದೆ ಮಹಾಭಾರತದಲ್ಲಿ ಭೇದ ಪ್ರತಿಪಾದಕ ಶ್ಲೋಕಗಳು ಅನೇಕ ಇರುವುದರಿಂದ ಭಾರತವು ಅದ್ವೈತ ಪ್ರತಿಪಾದಕವೆಂದು ಹೇಳುವುದು ಯುಕ್ತವಾದುದಲ್ಲ.

(ಗೀ. ರ. ಪು. ೧೩. ಪ. ೧.) "ಭಕ್ತಿಯು ಶುದ್ಧವಾದ ನಂತರ ಕರ್ಮ ಮಾಡಿದರೇನು, ಮಾಡದೇ ಹೋದರೇನು. ಅದರಲ್ಲಿ ಏನೂ ವಿಶೇಷವಿಲ್ಲ ವೆಂದು ಮಧ್ವಾಚಾರ್ಯರು ಹೇಳುವರು. ಆದರೆ ಇವರ ಸಿದ್ಧಾಂತಕ್ಕೆ "ಧ್ಯಾನಾತ್ ಕರ್ಮಫಲತ್ಯಾಗಃ" ಇವೇ ಮೊದಲಾದ ಗೀತಾವಚನ ಗಳು ವಿರುದ್ಧವಾಗಿರುವುವು" ಎಂದು ತಿಲಕರವರು ಬರೆದಿರುತ್ತಾರೆ. ಇದರ ಖಂಡನವು ಚಿಕ್ಕೋಡಿಯಲ್ಲಿ ನಡೆದ ಸಂವಾದವನ್ನು ನೋಡಿದರೆ ವ್ಯಕ್ತವಾಗುವುದು. ಈ ಸಂವಾದವು ಪ್ರಕಾಶಿನಿಯಲ್ಲೇ ಪ್ರಚುರ ವಾಗಿರುವುದು.

(ಗೀ. ರ. ಪು. ೧೪. ಪ. ೩.) "ಭಕ್ತಿಯು ಯುಕ್ತವಾಗಬೇ ಕಾದರೆ ಅದ್ವೈತವನ್ನು ಮಾಯಾವಾದವನ್ನು ತ್ಯಾಗಮಾಡಬೇಕೆಂಬುದಕ್ಕೆ ಕಾರಣವಿಲ್ಲ. ಏಕೆಯೆಂದರೆ— ಮಹಾರಾಷ್ಟ್ರದಲ್ಲಿರುವ ಸಾಧುವ ರ್ಯರು ಮಾಯಾವಾದವೆನ್ನುವ ಅದ್ವೈತವನ್ನು ಸ್ವೀಕಾರ ಮಾಡಿಯೇ ಭಕ್ತಿಯ ಸಮರ್ಥನವನ್ನು ಮಾಡಿರುವರು" ಎಂದು ತಿಲಕರವರು ಬರೆ ದಿರುತ್ತಾರೆ. ಆದರೆ ಅದು ಸರಿಯಾದುದಲ್ಲ. ಒಂದು ಪದಾರ್ಥವು ಉಂಟು ಅಥವಾ ಇಲ್ಲ ಎಂದು ಸಂಶಯ ಬಂದರೆ ಕೆಲವು ಪ್ರಮಾಣ ಗಳನ್ನು ತೋರಿಸಿ, ಆ ವಸ್ತು ಉಂಟು ಎಂತ ಸಿದ್ಧಮಾಡುವುದೇ ಸಮರ್ಥನವು. 'ಬ್ರಹ್ಮಸತ್ಯಂ ಜಗನ್ಮಿಥ್ಯಾ' ಎಂಬ ಅದ್ವೈತಸಿ ದ್ಧಾಂತಾನುಸಾರ ಭಕ್ತಿಯೆಂಬ ಪದಾರ್ಥವೇ ಮಿಥ್ಯಾಭೂತವಾದುದ ರಿಂದ ಅದನ್ನು ಪ್ರಮಾಣದಿಂದ ಸಿದ್ಧಮಾಡುವುದು ಅದ್ವೈತಸಿದ್ಧಾಂ ತಕ್ಕೆ ವಿರುದ್ಧವಾದುದು. ಭಕ್ತಿಯೆಂದರೆ, ಉಪಾಸನೆ ಯೆಂದು ತಿಲಕ ರವರು ಹೇಳಿರುವರು. ಉಪಾಸನೆಯು ಒಂದು ಕ್ರಿಯೆಯಾಗಿರುವುದು. ಈ ಕ್ರಿಯೆಗೂ ಕ್ರಿಯೆಗೆ ಕರ್ತನಾದ ಜೀವನಿಗೂ ಮತ್ತು ಕರ್ಮನಾದ ಬ್ರಹ್ಮನಿಗೂ ಭೇದವಿಲ್ಲದೇ ಇರುವುದರಿಂದ ಒಂದೇ ವಸ್ತುವು ಕ್ರಿಯೆ ಯೂ ಕರ್ತೃವೂ ಕರ್ಮವು ಹೇಗೆ ಆಗುವುದು? ಶಂಕರಾಚಾರ್ಯರು ಕೂಡ "ಕರ್ಮಕರ್ತೃವ್ಯಪದೇಶಾಚ್ಚ" ಎಂಬ ಈ ಸೂತ್ರದ ಭಾಷ್ಯದಲ್ಲಿ ಉಪಾಸ್ಯ ಮತ್ತು ಉಪಾಸಕ ಇವರುಗಳಿಗೆ ಐಕ್ಯವು ಅಯುಕ್ತವಾದು ದರಿಂದ ಉಪಾಸಕನಾದ ಜೀವನಿಗೂ ಉಪಾಸ್ಯನಾದ ಪರಬ್ರಹ್ಮನಿಗೂ

ಭೇದವನ್ನು ಹೇಳಿರುವರು. ಆದುದರಿಂದ ಜೀವನಿಗೂ ಬ್ರಹ್ಮನಿಗೂ ಭೇದವನ್ನು ಹೇಳುವ ಅದ್ವೈತ ಮತದಲ್ಲಿ ಭಕ್ತಿಯು ಅಯುಕ್ತವಾಗುವುದು. ‘ಮಹಾರಾಷ್ಟ್ರದಲ್ಲಿರುವ ಸಾಧುವರ್ಯರು ಅದ್ವೈತ ಸಿದ್ಧಾಂತವನ್ನು ಸ್ವೀಕಾರ ಮಾಡಿ ಭಕ್ತಿಯ ಸಮರ್ಥನವನ್ನು ಮಾಡಿರುವರು’ ಎಂದು ಮ॥ರಾ॥ ತಿಲಕರವರು ಹೇಳಿರುವರು. ಮಿಥ್ಯಾಭೂತವಾದ ಪದಾರ್ಥದ ಸಮರ್ಥನವು ಅಯುಕ್ತವಾದುದೆಂದು ಮೇಲೆ ಹೇಳಿಯೇ ಇದೇವೆ. ಅಲ್ಲದೆ ಮ॥ರಾ॥ ತಿಲಕರವರು ಈ ಸಾಧುಗಳು ಯಾವ ವಾಕ್ಯದಿಂದ ಭಕ್ತಿಯ ಸಮರ್ಥನವನ್ನು ಮಾಡಿರುವರೋ ಆ ವಾಕ್ಯವನ್ನು ಹೇಳಿರುವುದಿಲ್ಲ. ಆ ವಾಕ್ಯಗಳನ್ನು ಹೇಳಿದ್ದರೆ ಶಾಸ್ತ್ರಚರ್ಚೆಯಲ್ಲಿ ‘ಈ ವಾಕ್ಯಗಳ ಯೋಗ್ಯತೆಯು ಎಷ್ಟಿರುವುದು. ಈ ವಾಕ್ಯಗಳು ಯುಕ್ತಿಯುಕ್ತವಾಗಿರುವುವೋ ಅಥವಾ ಯುಕ್ತಿರಹಿತವಾದುವೋ ಇವೇ ಮೊದಲಾದ ವಿಚಾರ ಮಾಡಿದಲ್ಲಿ ಆ ಸಾಧುಗಳ ಉಕ್ತಿಯಲ್ಲಿರುವ ರಹಸ್ಯವು ಸ್ಪಷ್ಟವಾಗುವುದಾಗಿತ್ತು.

ಆದರೆ ಮ॥ ರಾ॥ ತಿಲಕರವರು ಆ ಸಾಧುಗಳ ಉಕ್ತಿಗಳನ್ನು ಹೇಳದೆ ಸಮರ್ಥನ ಮಾಡಿರುವರು ಎಂದು ಸಾಮಾನ್ಯವಾಗಿ ಹೇಳಿರುವರು. ಇವರಿಂದ ಸಾಧುಗಳು ಬೃಹನ್ನಡೆಯಂತೆ ಮಾಡುವ ನರ್ತನವೇ ಭಕ್ತಿಯೆಂದು ತಿಳಿಯುವರೋ ಏನೋ ಎಂದು ಸಂಶಯವುಂಟಾಗುವುದು. (ಗೀ. ರ. ಪು. ೨೦.) ರಲ್ಲಿ ಮ॥ ರಾ॥ ತಿಲಕರವರು—

೧. ಪರಸ್ಪರ ವಿರುದ್ಧವಾದ ಅನೇಕ ತಾತ್ಪರ್ಯಗಳು ಒಂದೇ ಗ್ರಂಥದಲ್ಲಿ ಎಂದರೆ ಗೀತೆಯಲ್ಲಿ ಇರೋಣವು ಸಾಧ್ಯವೋ?

೨. ಹಾಗೆ ಇರೋಣವು ಸಾಧ್ಯವು ಹಾಗು ಇಷ್ಟವೂ ಆಗಿರುವುದು ಎಂದು ಹೇಳುವುದಾದರೆ ಹಾಗೆ ಇರುವುದಕ್ಕೆ ಕಾರಣವೇನು?

೩. ಆಯಾ ಭಾಷ್ಯಕರ್ತೃಗಳಾದ ಆಚಾರ್ಯರು ವಿದ್ವಾಂಸರೂ, ಧರ್ಮನಿಷ್ಠರೂ, ಅತ್ಯಂತ ಸತ್ಯಶೀಲರೂ ಇರುವರೆಂಬ ವಿಷಯದಲ್ಲಿ ಯಾರಿಗೂ ಸಂಶಯವಿಲ್ಲ. ಅಲ್ಲದೆ ಶಂಕರಾಚಾರ್ಯರಂತಹ ಮಹಾ ತತ್ತ್ವಜ್ಞಾನಿಗಳು ಇನ್ನುವರೆಗೂ ಈ ಜಗತ್ತಿನಲ್ಲಿ ಯಾರೂ

ಉತ್ಪನ್ನವಾಗಿಲ್ಲವೆಂತಲೂ ಹೇಳಬಹುದು. ಹೀಗಿರಲು, ಯಾವತ್ತೂ ಆಚಾರ್ಯರಲ್ಲಿ ಇಷ್ಟು ಮತಭೇದವಿರುವುದಕ್ಕೆ ಕಾರಣವೇನು ?

೪. ಗೀತಾಗ್ರಂಥದಿಂದ ಬೇಕಾದವರು ತಮಗೆ ಇಷ್ಟವಾದ ತಾತ್ಪರ್ಯವನ್ನು ತೆಗೆಯುವರು ಎಂತ ಹೇಳುವುದಕ್ಕಾಗುವುದಿಲ್ಲ. ಏತಕ್ಕೆಂದರೆ—ಗೀತಾಗ್ರಂಥವು ಇಂದ್ರಜಾಲವಲ್ಲ. ಅರ್ಜುನನಿಗೆ ಉಂಟಾದ ಭ್ರಮವನ್ನು ದೂರಮಾಡುವುದಕ್ಕಾಗಿಯೇ ಗೀತಾಗ್ರಂಥವು ಪ್ರವೃತ್ತವಾಗಿರುವುದೇ ಹೊರತು ಅರ್ಜುನನ ಭ್ರಮವನ್ನು ಹೆಚ್ಚಿಸುವುದಕ್ಕೋಸ್ಕರ ಗೀತೆಯು ಹುಟ್ಟಿರುವುದಿಲ್ಲ. ಹೀಗಿರಲು ಅದರ ತಾತ್ಪರ್ಯ ವಿಷಯದಲ್ಲಿ ಇಷ್ಟು ಅವ್ಯವಸ್ಥೆ ಏಕೆ ?

ಹೀಗೆ ನಾಲ್ಕು ಪ್ರಶ್ನೆಗಳನ್ನು ಮಾಡಿಕೊಂಡು "ಇದರ ಉತ್ತರವು ತತ್ಕಾಲದಲ್ಲಿ ಎಷ್ಟು ಕಠಿಣವಾಗಿ ತೋರುವುದೋ ಅಷ್ಟು ಕಠಿಣವಾಗಿರುವುದಿಲ್ಲ" ಎಂದು ಬರೆದು ಹೇಗೆ ಒಬ್ಬೊಬ್ಬ ಮನುಷ್ಯನಿಗೆ ಭಿನ್ನಭಿನ್ನವಾಗಿ ತೋರುವ ಒಂದು ಪಕ್ವಾನ್ನ ಅಂದರೆ ಒಂದು ಉತ್ತಮವಾದ ಪಕ್ವಾನ್ನವನ್ನು ನೋಡಿ ಒಬ್ಬನು ಇದು ಗೋಧೂಮ ಪ್ರಧಾನವೆಂತಲು ಇನ್ನೊಬ್ಬನು ಘೃತಪಕ್ವಾನ್ನವೆಂತಲು ಹೇಳಿದರೆ ಅದರಲ್ಲಿ ಯಾವುದೂ ಅಸತ್ಯವಾದುದಲ್ಲವೋ, ಮತ್ತು ಸಮುದ್ರಮಥನ ಮಾಡೋಣದರಿಂದ ಹುಟ್ಟಿರುವ ಅಮೃತ, ವಿಷ, ಲಕ್ಷ್ಮೀ, ಐರಾವತ, ಕೌಸ್ತುಭ, ಪಾರಿಜಾತ ಇವೇ ಮೊದಲಾದ ಪದಾರ್ಥಗಳಿಂದ ಸಮುದ್ರದ ಸ್ವರೂಪವು ನಿಶ್ಚಯಿಸಲಿಕ್ಕೆ ಸಾಧ್ಯವಲ್ಲವೋ ಅದರಂತೆ ಗೀತಾಗ್ರಂಥದಿಂದ ಅನೇಕರು ಅನೇಕ ಸಂಪ್ರದಾಯಗಳನ್ನು ತೆಗೆದಾಗ್ಯೂ ಗೀತೆಯ ವಾಸ್ತವವಾದ ಅರ್ಥವನ್ನು ಕಂಡುಹಿಡಿದಂತಾಗುವುದಿಲ್ಲ. ಕಂಸವಧೆಯ ಕಾಲದಲ್ಲಿ ರಂಗಮಂಟಪದಲ್ಲಿ ಪ್ರವಿಷ್ಟರಾದ ಕೃಷ್ಣದೇವರು,

ಮಲ್ಲಾನಾಮಶನಿರ್ನೃಣಾಂನರವರಃ ಸ್ತ್ರೀಣಾಂಸ್ಮರೋಮೂರ್ತಿಮಾನ್ | ಗೋಪಾನಾಂಸ್ವಜನೋಽಸತಾಂ ಕ್ಷಿತಿಭೃತಾಂ ಶಾಸ್ತಾಸ್ವಪಿತ್ರೋಃಶಿಶುಃ||ಮೃತ್ಯುರ್ಭೋಜಪತೇರ್ವಿರ್ಧಾತೃವಿಹಿತಸ್ತತ್ತ್ವಂ ಪರಂಯೋಗಿನಾಂ | ವೃಷ್ಣೀನಾಂಚಪತಿಃ ಸದೈವಶಶಿಭೀರಂಗೇಽಚ್ಯುತಃಸಾಗ್ರಜಃ || (ಭಾಗವತ—೧೦)

ಎಂಬ ಶ್ಲೋಕದಲ್ಲಿ ವರ್ಣಿಸಿದ ಪ್ರಕಾರ ಅನೇಕರಿಗೆ ಅನೇಕ ವಿಧವಾಗಿ ಕಾಣಿಸಿದರೋ, ಅದರಂತೆ ಗೀತೆಯು ಒಂದಾಗಿದ್ದರೂ ಅನೇಕ ಸಾಂಪ್ರದಾಯಿಕರಿಗೆ ಅನೇಕ ವಿಧವಾಗಿ ಕಾಣುವ್ರುದು" ಎಂದು ಮೂರು ದೃಷ್ಟಾಂತಗಳನ್ನು ಹೇಳಿ "ಅದರಂತೆ ಗೀತೆಯು ಒಂದಾಗಿದ್ದರೂ ಸಂಪ್ರದಾಯದಲ್ಲಭಿನಿವಿಷ್ಟರಾದ ಆಯಾ ಜನರಿಗೆ ಭಿನ್ನಭಿನ್ನವಾಗಿ ಕಂಡುಬರುವುದು" ಎಂದು ಬರೆದು ಮುಂದೆ "ಧರ್ಮಸಂಪ್ರದಾಯಗಳು ಸರ್ವರಿಗೂ ಮಾನ್ಯವಾಗಬೇಕಾದರೆ ಅವುಗಳು ಪ್ರಮಾಣವಾದ ಧರ್ಮಗ್ರಂಥಗಳನ್ನು ಅನುಸರಿಸೇ ಇರಬೇಕು. ಕೆಲವು ವಿಶೇಷ ಪ್ರಮೇಯಗಳನ್ನು ಬಿಟ್ಟರೆ ಅವಶಿಷ್ಟವಾದವುಗಳು ಸರ್ವಸಂಪ್ರದಾಯಗಳಲ್ಲೂ ಏಕರೀತಿಯಾಗಿಯೇ ಇರುವುವು. ಆದುದರಿಂದ ನಮ್ಮ ಪ್ರಮಾಣವಾದ ಧರ್ಮಗ್ರಂಥಗಳ ಮೇಲೆ ಯಾವ ಭಾಷ್ಯಗಳು ಟೀಕೆಗಳು ಇರುವುವೋ ಅವುಗಳಲ್ಲಿ ನೂರಕ್ಕೆ ತೊಂಭತ್ತಕ್ಕಿಂತಲೂ ಹೆಚ್ಚಾದ ವಚನಗಳ ಅಥವಾ ಶ್ಲೋಕಗಳ ಅರ್ಥವು ಅವಿರುದ್ಧವಾಗಿಯೇ ಇರುವುದು. ಕೆಲವು ವಚನಗಳಲ್ಲಿ ಮಾತ್ರ ವಿರೋಧಬರುವುದು. ಆ ವಚನಗಳ ಸರಿಯಾದ ಅರ್ಥಗಳನ್ನು ಗ್ರಹಣ ಮಾಡಿದರೆ ಆ ಅರ್ಥವು ಸರ್ವಸಂಪ್ರದಾಯಗಳಿಗೂ ಅನುಕೂಲವಾಗುವ ಸಂಭವವಿಲ್ಲ. ಆದುದರಿಂದ ತಮ್ಮ ಸಂಪ್ರದಾಯಕ್ಕೆ ಅನುಕೂಲವಾದ ವಚನಗಳು ಪ್ರಧಾನವು, ಪ್ರತಿಕೂಲವಾದ ವಚನಗಳು ಗೌಣವು ಎಂದಾಗಲಿ, ಅಥವಾ ಪ್ರತಿಕೂಲವಾದ ವಚನಗಳಿಗೆ ಕ್ಲಿಷ್ಟಾರ್ಥಗಳನ್ನಾಗಲಿ, ಶ್ಲೇಷಾರ್ಥಗಳನ್ನಾಗಲಿ ಕಲ್ಪಿಸಿ ಆ ವಚನಗಳು ತಮ್ಮ ಸಂಪ್ರದಾಯಕ್ಕೆ ಅನುಕೂಲವಾಗಿಯೇ ಇರುವುವೆಂದು ಆಯಾ ಭಾಷ್ಯಕಾರರು ಮತ್ತು ಟೀಕಾಕಾರರು ಪ್ರತಿಪಾದನ ಮಾಡುವರು. (ಗೀ. ಅ. ೩. ಶ್ಲೋ. ೧೨ ಮತ್ತು ೧೬), (ಅ. ೩.. ಶ್ಲೋ. ೧೯.), (ಅ. ೬. ಶ್ಲೋ. ೩.), (ಅ. ೧೮. ಶ್ಲೋ. ೨.) ಈ ಶ್ಲೋಕಗಳ ಅರ್ಥವನ್ನು ನೋಡಿದರೆ ನಾವು ಹೇಳಿರುವುದು ಸ್ಪಷ್ಟವಾಗಿ ಕಂಡುಬರುವುದು." ಎಂದು ಮ|| ರಾ|| ತಿಲಕರವರು ಬರೆಯುತ್ತಾರೆ. ಆದರೆ ಅದು ಸರಿಯಾದುದಲ್ಲ. ಏತಕ್ಕೆಂದರೆ, ಗೋಧಿ, ತುಪ್ಪ, ಮತ್ತು ಸಕ್ಕರೆ ಇವುಗಳನ್ನು ಸೇರಿಸಿ

ಇವುಗಳಿಂದ ಸಿದ್ಧಮಾಡಿರುವ ಪಕ್ವಾನ್ನವು ಗೋಧೂಮಪ್ರಧಾನವೆಂತಲೂ, ಘೃತಪ್ರಧಾನವೆಂತಲೂ, ಶರ್ಕರಾಪ್ರಧಾನವೆಂತಲೂ ಅನೇಕರು ಅನೇಕ ವಿಧವಾಗಿ ಹೇಳಿದರೂ ಅದರಲ್ಲಿ ಯಾವುದೂ ಅಸತ್ಯವಾಗುವುದಿಲ್ಲ. ಏತಕ್ಕೆಂದರೆ—ಆ ಪಕ್ವಾನ್ನದಲ್ಲಿ ಗೋಧೂಮ, ಘೃತ ಮತ್ತು ಶರ್ಕರೆ, ಈ ಮೂರು ಪದಾರ್ಥ ಸಂಬಂಧವೂ ಇರುವುದು. ಆದರೆ ಗೋಧೂಮದಿಂದ ಮಾಡಿರುವುದೆಂದು ಹೇಳಿದ ಪಕ್ವಾನ್ನವನ್ನು ಒಬ್ಬನು ಚಣಕ ಪ್ರಧಾನವೆಂತಲೂ, ಮತ್ತೊಬ್ಬನು ತಂಡುಲ ಪ್ರಧಾನವೆಂತಲೂ, ಇನ್ನೊಬ್ಬನು ಮಾಷಪ್ರಧಾನವೆಂತಲೂ ಹೇಳಿದರೆ ಆ ವಾಕ್ಯಗಳಲ್ಲಿ ಒಂದು ವಾಕ್ಯವನ್ನು ಬಿಟ್ಟು ಅವಶಿಷ್ಟವಾಕ್ಯಗಳು ಹೇಗೆ ಅಪ್ರಮಾಣವೆಂದು ಹೇಳಬೇಕೋ, ಅದರಂತೆಯೇ ಗೀತೆಯು ಪ್ರವೃತ್ತಿಪರವೆಂದು ಹೇಳುವವನೊಬ್ಬನು; ನಿವೃತ್ತಿಪರವೆಂದು ಹೇಳುವವನು ಇನ್ನೊಬ್ಬನು. ಹೀಗೆಯೇ ಗೀತೆಯು ಅದ್ವೈತ ಪರವೆಂದು ಹೇಳುವನೊಬ್ಬನು; ಗೀತೆಯು ದ್ವೈತಪರವೆಂದು ಹೇಳುವನು ಇನ್ನೊಬ್ಬನು. ಈ ಉಭಯರಲ್ಲಿ ಒಬ್ಬನ ವಾಕ್ಯವು ಪ್ರಮಾಣವು, ಇನ್ನೊಬ್ಬನ ವಾಕ್ಯವು ಅಪ್ರಮಾಣವು ಎಂದು ಹೇಳಬೇಕಾಗುವುದರಿಂದ ರಾ॥ ಶ್ರೀ॥ ತಿಲಕರವರು ಮಾಡಿರುವ ವಿಷಯವಿಚಾರವು ಸರಿಯಾದುದಲ್ಲ. ಗೀತೆಯು ಪ್ರವೃತ್ತಿಪರವೆಂತಲೂ, ಮತ್ತು ಗೀತೆಯಲ್ಲಿ ಅದ್ವೈತ ವಾದಿಗಳನ್ನು ನಿಂದೆ ಮಾಡಿರೋಣದರಿಂದ ಅದು ದ್ವೈತಪರ ಎಂತಲೂ ಇದಕ್ಕೆ ಪೂರ್ವದಲ್ಲಿ ನಾವು ವ್ಯವಸ್ಥೆ ಮಾಡಿರೋಣದರಿಂದ ಗೀತೆಯು ನಿವೃತ್ತಿಪರವು ಮತ್ತು ಅದ್ವೈತಪರವು ಎಂದು ಹೇಳುವುದು ಭ್ರಾಂತಿಮೂಲಕವೆಂದು ಸ್ಪಷ್ಟವಾಗಿ ವೇದ್ಯವಾಗುವುದು.

ಮ॥ ರಾ॥ ತಿಲಕರವರು ಶ್ರೀಕೃಷ್ಣನ ದೃಷ್ಟಾಂತವನ್ನು ತೋರಿಸಿ ಗೀತೆಯಿಂದ ಅನೇಕರು ಅನೇಕವಿಧ ತಾತ್ಪರ್ಯವನ್ನು ಭಾವಿಸಿರುವುದು ಯುಕ್ತವೆಂದು ಬರೆದಿರುವರು. ಆದರೆ ಆ ರಂಗಮಂಟಪದಲ್ಲಿ ಪ್ರವಿಷ್ಟರಾದ ಕೃಷ್ಣದೇವರು ಅನೇಕ ವಿಧವಾಗಿ ತೋರಿದಾಗ್ಯೂ ಆ ಧರ್ಮಗಳಿಗೆ ಪರಸ್ಪರ ವಿರೋಧವಿಲ್ಲ. ಗೀತಾ ಗ್ರಂಥಕ್ಕೆ ಅನೇಕ

ಟೀಕಾ ಕರ್ತೃಗಳು ಪರಸ್ಪರ ವಿರುದ್ಧವಾದ ಅನೇಕ ತಾತ್ಪರ್ಯಗಳನ್ನು ಹೇಳೋಣವರಿಂದ ಶ್ರೀಕೃಷ್ಣನ ದೃಷ್ಟಾಂತವನ್ನು ಹೇಳೋಣವು ಸರಿಯಾಗುವುದಿಲ್ಲ.

ರಾ॥ಶ್ರೀ॥ ತಿಲಕರವರು ಈ ವಿಷಯದಲ್ಲಿ ಸಮುದ್ರ ದೃಷ್ಟಾಂತವನ್ನೂ ಹೇಳಿರುವರು. ಆದರೆ ಅದು ಸರಿಯಾದುದಲ್ಲ. ಏತಕ್ಕೆಂದರೆ, ಸಮುದ್ರದಿಂದುಂಟಾಗಿರುವ ಅಮೃತ ವಿಷ ಮೊದಲಾದ ಪದಾರ್ಥಗಳಿಂದ ಸಮುದ್ರಸ್ವರೂಪದ ನಿರ್ಣಯವನ್ನು ಯಾರೂ ಮಾಡುವುದಿಲ್ಲ. ಆ ನಿರ್ಣಯವು ಇತರ ಸಾಧನಗಳಿಂದಲೇ ಆಗುವುದು. ಭೂಮಿಯಿಂದ ಉಂಟಾಗುವ ಧಾನ್ಯ ಮೊದಲಾದುವುಗಳಿಂದ ಭೂಮಿಯ ಸ್ವರೂಪನಿರ್ಣಯವು ಸಿಗಲಾರದು. ಭೂಮಿಯ ಸ್ವರೂಪ ನಿರ್ಣಯವನ್ನು ಮಾಡುವ ಸಾಧನವು ಬೇರೆ ಇರುವುದು. ಅಲ್ಲದೆ ಸಮುದ್ರಸ್ವರೂಪ ನಿರ್ಣಯವು ಅದರಿಂದುಂಟಾದ ಪದಾರ್ಥಗಳಿಂದಲೇ ಮಾಡಬೇಕೆಂಬುವ ನಿರ್ಬಂಧವಿಲ್ಲ. ಅದರ ನಿರ್ಣಯ ಮಾಡುವ ಸಾಧನವು ಬೇರೆ ಇರುವುದು. ಆ ನಿರ್ಣಯಕ್ಕೆ ಆ ಪದಾರ್ಥಗಳಿಂದ ಬಾಧವೂ ಬರಲಾರದು. ಆದರೆ ಗೀತಾಗ್ರಂಥಕ್ಕೆ ಅನೇಕ ಟೀಕಾಕಾರರು ಪರಸ್ಪರ ವಿರುದ್ಧವಾದ ಅನೇಕ ತಾತ್ಪರ್ಯಗಳನ್ನು ಹೇಳೋಣದರಿಂದ ಅವೆಲ್ಲವೂ ಗೀತಾಕಾರರಿಗೆ ಸಮ್ಮತವೆಂದು ಹೇಳೋಣವು ಸರಿಯಾದುದಲ್ಲ. ಈ ಪರಸ್ಪರ ವಿರುದ್ಧವಾದ ತತ್ತ್ವಗಳು ಗೀತೆಯಿಂದ ಪ್ರತಿಪಾದ್ಯವೆಂದು ಆಯಾ ಟೀಕಾಕಾರರು ಒಪ್ಪಿರುವುದರಿಂದ ಸಮುದ್ರ ದೃಷ್ಟಾಂತವು ಸರಿಯಾದುದಲ್ಲ. ಸಮುದ್ರದ ಸ್ವರೂಪವನ್ನು ನಿರ್ಣಯ ಮಾಡುವಾಗ ಸಮುದ್ರದಿಂದುಂಟಾದ ಪದಾರ್ಥಗಳು ವಿರೋಧಿಗಳಲ್ಲ. ಆದರೆ ಗೀತೆಯಿಂದುಂಟಾದ ಅನೇಕ ಪರಸ್ಪರ ವಿರುದ್ಧಗಳಾದ ತಾತ್ಪರ್ಯಗಳು ಗೀತೆಯ ಸ್ವರೂಪ ನಿರ್ಣಯ ಮಾಡುವುದಕ್ಕೆ ಪ್ರತಿಬಂಧಕವಾಗದೆ ಇರಲಾರವು. ಆದುದರಿಂದ ಗೀತಾಗ್ರಂಥವು ಒಂದಾದಾಗ್ಯೂ ಅನೇಕರಿಗೆ ಅನೇಕ ವಿಧವಾಗಿ ತೋರುವುದು ಎಂಬ ವಿಷಯದಲ್ಲಿ ಪಕ್ಷವನ್ನು ಶ್ರೀಕೃಷ್ಣ ಮತ್ತು ಸಮುದ್ರ ಈ ದೃಷ್ಟಾಂತಗಳನ್ನು ಹೇಳಿರುವುದು ಯುಕ್ತವಾಗಿಲ್ಲ.

ಈ ರೀತಿಯಾಗಿ ಪರಸ್ಪರ ವಿರುದ್ಧವಾದ ಅನೇಕ ತಾತ್ಪರ್ಯಗಳು ಒಂದೇ ಗ್ರಂಥದಲ್ಲಿ ಇರೋಣವು ಸಾಧ್ಯವು ಮತ್ತು ಇಷ್ಟವು ಆಗಿರುವುದೋ? ಎಂದು ಮ॥ರಾ॥ ತಿಲಕರವರು ಶಂಕಿಸಿರುವರು. ಆದರೆ ಸರ್ವಮಾನ್ಯವಾದ ತತ್ತ್ವಾರ್ಥ ಪ್ರತಿಪಾದಕವಾದ ಗ್ರಂಥದಲ್ಲಿ ಪರಸ್ಪರ ವಿರುದ್ಧವಾದ ಅನೇಕ ತಾತ್ಪರ್ಯಗಳಿರುವ ಸಂಭವವೇ ಇಲ್ಲ. ಆದುದರಿಂದ ಈ ರೀತಿಯಾಗಿ ಶಂಕಿಸಿ ಅದರ ಕಾರಣಗಳನ್ನು ಚರ್ಚೆ ಮಾಡುವುದು ಶಶವಿಷಾಣದ ಕಾರಣ ಚರ್ಚೆಯಂತೆ ಇರುವುದು. ಸಾರಾಂಶವೇನೆಂದರೆ—ಗೀತೆಯ ತಾತ್ಪರ್ಯಾರ್ಥವು ಒಂದೇ; ಮತ್ತು ಅದೇ ಸತ್ಯವಾಗಿಯೂ ಇರುವುದು. ಆಯಾ ಟೀಕಾ ಕರ್ತೃಗಳಿಗೆ ಸಂಪ್ರದಾಯ ಮೂಲಕವಾದ ಭ್ರಮದಿಂದ ಗೀತೆಯ ಅರ್ಥವು ವಿಪರೀತವಾಗಿ ತೋರುವುದು. ಅಥವಾ ಜನರಿಗೆ ಭ್ರಮ ಉಂಟುಮಾಡುವುದಕ್ಕಾಗಿ ಅವರು ಗೀತೆಗೆ ವಿಪರೀತಾರ್ಥಗಳನ್ನು ಹೇಳುವರು. ಪರಸ್ಪರ ವಿರುದ್ಧಗಳಾದ ಅನೇಕಾರ್ಥಗಳಲ್ಲಿ ಗೀತೆಯು ಒಂದೇ ಅರ್ಥವನ್ನು ಹೇಳುವುದು ಎಂದು ಹೇಳುವವರು ಜ್ಞಾನಿಗಳೆಂತಲೂ, ಗೀತೆಯು ಪರಸ್ಪರ ವಿರುದ್ಧವಾದ ಅನೇಕಾರ್ಥಗಳನ್ನು ಹೇಳುವುದು ಎಂದು ಹೇಳುವವರು ಅಜ್ಞಾನಿಗಳು ಅಥವಾ ವಂಚಕರೆಂತಲೂ ಹೇಳಬೇಕಾಗುವುದು.

“ಶಂಕರಾಚಾರ್ಯರಂಥಾ ಮಹಾ ತತ್ತ್ವಜ್ಞಾನಿಗಳು ಇದುವರೆಗೂ ಈ ಜಗತ್ತಿನಲ್ಲಿ ಯಾರೂ ಹುಟ್ಟಲಿಲ್ಲ” ಎಂದು ರಾ॥ಶ್ರೀ॥ ತಿಲಕರವರು ಬರೆಯುತ್ತಾರೆ. ಮತ್ತು ಇದೇ ರಾ॥ ಶ್ರೀ ॥ ತಿಲಕರವರು ಅನೇಕ ಸ್ಥಳಗಳಲ್ಲಿ ‘ಶಂಕರಾಚಾರ್ಯರು ಸಂಪ್ರದಾಯದ ಆಗ್ರಹದಿಂದ ಗೀತೆಗೆ ಕ್ಲಿಷ್ಟಾರ್ಥಗಳನ್ನು ಹೇಳುವರು’ ಎಂದು ಬರೆದು ಶಂಕರಾಚಾರ್ಯರು ಹೇಳಿದ ಅರ್ಥವನ್ನು ಖಂಡನ ಮಾಡಿರುವರು. ಇದರಿಂದಲೇ ಶಂಕರಾಚಾರ್ಯರು ತತ್ತ್ವಜ್ಞಾನಿಗಳಲ್ಲವೆಂತಲೂ ಗೀತೆಯ ವಾಸ್ತವವಾದ ಅರ್ಥವು ಅವರಿಗೆ ತಿಳಿದಿರಲಿಲ್ಲವೆಂತಲೂ ರಾ॥ ಶ್ರೀ ॥ ತಿಲಕರವರು ಒಪ್ಪಿದಂತಾಗುವುದು. ಅಥವಾ ‘ಬ್ರಹ್ಮಸತ್ಯಂ ಜಗನ್ಮಿಥ್ಯಾ’ ಎಂಬ ಅದ್ವೈತ ಮತದಲ್ಲಿ ಪರಬ್ರಹ್ಮನೊಬ್ಬನೇ ತತ್ತ್ವವು, ಇತರ ಸಕಲ ಪದಾರ್ಥಗಳು ಅತತ್ತ್ವವಾಗಿರುವುವು.

ತತ್ತ್ವಭೂತನಾದ ಬ್ರಹ್ಮನು ಅಜ್ಞೇಯನಾಗಿಯೂ ಅತತ್ತ್ವವೇ ಜ್ಞೇಯವಾಗಿಯೂ ಇರುವುದರಿಂದ ಅದ್ವೈತ ಮತದಲ್ಲಿ ತತ್ತ್ವಜ್ಞಾನವೇ ಇಲ್ಲದಂತಾಯಿತು. ಆದುದರಿಂದ 'ಮಹಾತತ್ತ್ವಜ್ಞಾನಿ' ಎಂಬುವ ಪದಕ್ಕೆ 'ಮಹಾಂಶ್ಚಾಸೌ ಅತತ್ತ್ವಜ್ಞಾನೀ ಚ' ಎಂದು ವಿಗ್ರಹವನ್ನು ಮಾಡಿ ಆ ವಿಶೇಷಣವನ್ನು ಶಂಕರಾಚಾರ್ಯರಿಗೆ ಕೊಟ್ಟಂತೆ ತೋರುತ್ತಿದೆ. ಮಹಾ ತತ್ತ್ವಜ್ಞಾನಿ ಶಬ್ದಕ್ಕೆ ದೊಡ್ಡ ತತ್ತ್ವಜ್ಞಾನಿಗಳು ಎಂಬ ಅರ್ಥವನ್ನು ಮ|| ರಾ|| ತಿಲಕರವರು ಹೇಳುವುದಾದರೆ ಶಂಕರಾಚಾರ್ಯರು ಬರೆದ ಗೀತಾರ್ಥವನ್ನು ಖಂಡನೆ ಮಾಡೋಣದರಿಂದ ವ್ಯಾಹತಭಾಷಣ ಮಾಡಿದಂತಾಗುವುದು. ಮತ್ತು ಮೇಲೆ ಹೇಳಿದ ಪ್ರಕಾರ ಅದ್ವೈತ ಮತಾನುಸಾರ ತತ್ತ್ವಜ್ಞಾನವೇ ಅಪ್ರಸಿದ್ಧವಾಗಿರುವುದರಿಂದ ಮ|| ರಾ|| ತಿಲಕರವರಿಗೆ ಅಪಸಿದ್ಧಾಂತ ದೋಷವೂ ಬರುವುದು.

ಶಂಕರಾಚಾರ್ಯರಿಂದ ಕಲ್ಪಿತವಾದ ಅದ್ವೈತವನ್ನು ಉಪನಿಷತ್ತು, ವೇದ ಮತ್ತು ಗೀತೆ ಇವುಗಳಲ್ಲಿರುವ ಒಂದು ವಾಕ್ಯವಾದರೂ ಪ್ರತಿಪಾದನ ಮಾಡುವುದಿಲ್ಲ. ಈ ಗ್ರಂಥಗಳಲ್ಲಿರುವ ಅನೇಕ ವಾಕ್ಯಗಳು ಭೇದಪ್ರತಿಪಾದಕವೇ ಎಂದು ಶಂಕರಾಚಾರ್ಯರೇ ಗತ್ಯಂತರವಿಲ್ಲದೆ ಒಪ್ಪಿರುವರು. ಅದ್ವೈತಿಗಳು ಐಕ್ಯಪ್ರತಿಪಾದಕವೆಂದು ಒಪ್ಪಿರುವ "ತತ್ತ್ವಮಸಿ, ಅಹಂಬ್ರಹ್ಮಾಸ್ಮಿ" ಇವೇ ಮೊದಲಾದ ವಾಕ್ಯಗಳಿಗೆ ಐಕ್ಯವು ಮುಖ್ಯಾರ್ಥವಾಗುವ ಸಂಭವವಿಲ್ಲ. ಆದುದರಿಂದ ಅದು ಅಮುಖ್ಯಾರ್ಥವೆಂದು ಅದ್ವೈತವಾದಿಗಳೇ ಹೇಳುವರು. ಆದರೆ ಆ ವಾಕ್ಯಗಳಿಗೆ ಐಕ್ಯವು ಅಮುಖ್ಯಾರ್ಥವೆಂತಲೂ ಹೇಳುವುದಕ್ಕಾಗುವುದಿಲ್ಲ. ಏತಕ್ಕೆಂದರೆ, ಅದ್ವೈತಸಿದ್ಧಿ ಮೊದಲಾದ ಗ್ರಂಥಗಳಲ್ಲಿರುವ "ಸಂಸರ್ಗಾಸಂಗಿಸಮ್ಯಗ್ಧೀ ಹೇತುತಾಯಾ ಗಿರಾಮಿಯಮ್ | ಉಕ್ತಾಖಂಡಾರ್ಥತಾಯದ್ವಾ ತತ್ಪ್ರಾತಿಪದಿಕಾರ್ಥತಾ ||" ಎಂಬ ಶ್ಲೋಕದಲ್ಲಿ 'ತತ್ತ್ವಮಸಿ' ಮೊದಲಾದ ವಾಕ್ಯಗಳು ಅಖಂಡಾರ್ಥ ಎಂದರೆ ವಿಶೇಷಣ, ವಿಶೇಷ್ಯ ಮತ್ತು ಅವುಗಳ ಸಂಬಂಧ ಇವುಗಳನ್ನು ಹೇಳದೆ ಕೇವಲ ಚೈತನ್ಯವನ್ನೇ ಹೇಳುವುವು, ಎಂಬ ತಾತ್ಪರ್ಯಾರ್ಥವನ್ನು

ಹೇಳಿರುವುದರಿಂದ 'ತತ್ತ್ವಮಸಿ' ಮೊದಲಾದ ವಾಕ್ಯಗಳಿಗೆ ಚೈತನ್ಯವೆಂಬ ಒಂದೇ ಅರ್ಥವು ಹೊರತು ಜೀವನಿಗೂ, ಪರಬ್ರಹ್ಮನಿಗೂ ಐಕ್ಯ ಉಂಟು ಎಂದು ಅರ್ಥವಲ್ಲ. ಹಾಗೂ ವಾಕ್ಯದ ಮುಖ್ಯಾರ್ಥವು ಬಾಧಿತವಾಗಿದ್ದರೆ ಅಮುಖ್ಯಾರ್ಥವನ್ನು ಗ್ರಹಣ ಮಾಡಬೇಕು. ಆ ಅಮುಖ್ಯಾರ್ಥವು ಅಬಾಧಿತವಾಗಿರಬೇಕು. ಅಮುಖ್ಯಾರ್ಥವು ಬಾಧಿತವಾಗಿದ್ದರೆ 'ಭಕ್ಷಿತೇಪಿ ಲಶುನೇ ನ ಶಾಂತೋವ್ಯಾಧಿಃ' ಎಂಬ ನ್ಯಾಯದಂತೆ ಅಮುಖ್ಯಾರ್ಥವನ್ನು ಸ್ವೀಕಾರಮಾಡೋಣವೇ ವ್ಯರ್ಥವಾಗುವುದು. 'ತತ್ತ್ವಮಸಿ' ಮೊದಲಾದ ವಾಕ್ಯಗಳಿಗೆ ಅದ್ವೈತಿಗಳು ಹೇಳಿದ ಐಕ್ಯವೆಂಬುವ ಅಮುಖ್ಯಾರ್ಥವು ಶಂಕರಾಚಾರ್ಯರು ಭೇದಪ್ರತಿಪಾದಕವೆಂದು ಒಪ್ಪಿರುವ ಪ್ರತ್ಯಕ್ಷ, ಅನುಮಾನ, ವೇದ, ಗೀತೆ ಮೊದಲಾದ ಅನೇಕ ಪ್ರಮಾಣಗಳಿಂದ ಬಾಧಿತವಾಗಿರೋಣದರಿಂದ ಮುಖ್ಯಾರ್ಥತ್ಯಾಗಮಾಡಿ ಅಮುಖ್ಯಾರ್ಥವನ್ನು ಸ್ವೀಕರಿಸುವುದು ಸರಿಯಾದುದಲ್ಲ. ಆದುದರಿಂದ 'ತತ್ತ್ವಮಸಿ' ಮೊದಲಾದ ವಾಕ್ಯಗಳಿಗೆ ಐಕ್ಯವು ಅಮುಖ್ಯಾರ್ಥವೆಂದು ಹೇಳದೆ, 'ಕಾಮೋಽಸ್ಮಿ ಭರತರ್ಷಭ' ಎಂಬ ಶ್ಲೋಕದಲ್ಲಿ 'ಕಾಮಃ' ಎಂಬ ಶಬ್ದಕ್ಕೆ ಕಾಮಸ್ವಾಮಿ ಎಂದು ಶಂಕರಾಚಾರ್ಯರು ಅರ್ಥವನ್ನು ಬರೆದಿರುವಂತೆ ಇಲ್ಲಿಯೂ 'ತತ್ತ್ವಮಸಿ' ಎಂಬ ವಾಕ್ಯಕ್ಕೆ ನೀನು ಅವನಿಗೆ ಸದೃಶನಾಗಿರುವಿ ಎಂತಲೂ, 'ಅಹಂ ಬ್ರಹ್ಮಾಸ್ಮಿ' ಎಂಬ ವಾಕ್ಯಕ್ಕೆ ನಾನು ಪರಬ್ರಹ್ಮನ ಅಧೀನವಾಗಿರುವೆನು ಎಂತಲೂ ಅರ್ಥ ಹೇಳಿದರೆ ಆ ಅರ್ಥವು ಯುಕ್ತವಾಗಿಯೂ ಅಬಾಧಿತವಾಗಿಯೂ ಇರುವುದು. ಈ ವಾಕ್ಯಗಳಿಗೆ ಅಬಾಧಿತವಾದ ಅನೇಕಾರ್ಥಗಳಿರುವುವು ಎಂದು ಶ್ರುತ್ಯರ್ಥವಿಚಾರ ಪ್ರಕರಣದಲ್ಲಿಯೂ, ಚಿಕ್ಕೋಡಿಯಲ್ಲಿ ನಡೆದ ಸಂವಾದದಲ್ಲಿಯೂ ನಿರೂಪಿಸಿರುವುದನ್ನು ವಾಚಕರು ನೋಡಬೇಕು. ಈ ರೀತಿಯಾಗಿ ಮೇಲೆ ಕಂಡ ವಾಕ್ಯಗಳು ಐಕ್ಯವನ್ನು ಮುಖ್ಯವೃತ್ತಿಯಿಂದ ಬೋಧನ ಮಾಡೋಣವಿಲ್ಲವೆಂದು ಹೇಳುವ ಅದ್ವೈತವಾದಿಗಳು ಐಕ್ಯವಿಷಯದಲ್ಲಿ ಮುಖ್ಯವಾದ ಪ್ರಮಾಣವು ಯಾವುದೂ ಇಲ್ಲವೆಂದು ಒಪ್ಪಿದಂತಾಗುವುದು. ಶ್ರೀಮಧ್ವಾಚಾರ್ಯರ ದ್ವೈತಸಿದ್ಧಾಂತವು ಭೇದಪ್ರತಿಪಾದಕವೆಂದು ಶಂಕರಾಚಾ-

ರ್ಯರು ಒಪ್ಪಿರುವ ಅನೇಕ ಪ್ರಮಾಣ ವಾಕ್ಯಗಳಿಂದ ಪ್ರತಿಪಾದ್ಯವಾಗಿರೋಣದರಿಂದ ಭೇದವಿಷಯದಲ್ಲಿ ಮುಖ್ಯವಾದ ಅನೇಕ ಪ್ರಮಾಣಗಳು ಉಂಟು ಎಂಬ ವಿಷಯದಲ್ಲಿ ಸಂದೇಹವಿಲ್ಲ. "ತತ್ತ್ವಮಸಿ" ಮೊದಲಾದ ವಾಕ್ಯಗಳಿಗಾದರೂ ಮುಖ್ಯಾರ್ಥವನ್ನು ಸ್ವೀಕರಿಸಿದರೆ ದ್ವೈತಸಿದ್ಧಾಂತಕ್ಕೆ ಆ ವಾಕ್ಯಗಳು ವಿರುದ್ಧವಾಗಲಾರವು. ಇವೇ ಮೊದಲಾದ ಕಾರಣಗಳಿಂದ ಶ್ರೀಮಧ್ವಾಚಾರ್ಯರ ದ್ವೈತಸಿದ್ಧಾಂತವು ಪ್ರಾಮಾಣಿಕವೂ, ಆಸ್ತಿಕರಿಂದ ಗ್ರಾಹ್ಯವಾಗಿಯೂ ಇರುವುದು. ಶಂಕರಾಚಾರ್ಯರ ಅದ್ವೈತವು ಈ ರೀತಿಯಾಗಿ ಅಪ್ರಾಮಾಣಿಕವಾಗಿರಲು ಅವರಿಗೆ ಮಹಾ ತತ್ತ್ವಜ್ಞಾನಿಗಳು ಎಂಬ ಪದವು ಉಚಿತವಲ್ಲ.

"ನತ್ವೇವಾಹಂ ಜಾತುನಾಸಂ ನತ್ವಂನೇಮೇಜನಾಧಿಪಾಃ । ನಚೈವನಭವಿಷ್ಯಾಮಃ ಸರ್ವೇವಯಮತಃಪರಮ್॥" (ಗೀ. ೨. ೧೨) ಈ ಶ್ಲೋಕಕ್ಕೆ "ನಾನು ಪೂರ್ವದಲ್ಲಿ ಇರಲಿಲ್ಲವೆಂತಲ್ಲ. ನೀನು ಮತ್ತು ಈ ರಾಜರುಗಳೂ ಪೂರ್ವದಲ್ಲಿ ಇರಲಿಲ್ಲವೆಂತಲ್ಲ. ಮತ್ತು ನಾವೆಲ್ಲರೂ ಮುಂದೆ ಇರುವುದಿಲ್ಲವೆಂತಲ್ಲ" ಹೀಗೆ ವೆ॥ ರಾ॥ ತಿಲಕರವರು ಅರ್ಥವನ್ನು ಬರೆದಿರುವರು. ಈ ಶ್ಲೋಕದಲ್ಲಿ 'ನಾನು, ನೀನು ಮತ್ತು ಸಮಸ್ತ ರಾಜರು ಪೂರ್ವದಲ್ಲಿ ಇದ್ದವರು, ಮುಂದಾದರೂ ಇರತಕ್ಕವರು' ಎಂದು ಶ್ರೀಕೃಷ್ಣನು ಹೇಳಿರುವುದರಿಂದ ಜೀವನಿಗೂ ಪರಮಾತ್ಮನಿಗೂ ಮತ್ತು ಜೀವರುಗಳಿಗೆ ಪರಸ್ಪರವಾಗಿಯೂ ಭೇದವು ಸಿದ್ಧವಾಗಿರುವುದೆಂದು ರಾಮಾನುಜ ಭಾಷ್ಯದಲ್ಲಿ ಹೇಳಲ್ಪಟ್ಟಿದೆ. ಅದು ಯುಕ್ತವಾದುದೇ ಸರಿ. ಶಂಕರಾಚಾರ್ಯರು ಕೂಡ ಈ ಶ್ಲೋಕಕ್ಕೆ ಅರ್ಥ ಬರೆಯುವಾಗ 'ಇಮೇಜನಾಧಿಪಾಃಸರ್ವೇವಯಂ' ಎಂಬ ಈ ಬಹುವಚನಗಳಿಂದ ಆತ್ಮರುಗಳಿಗೆ ಪರಸ್ಪರ ಭೇದ ಸಿದ್ಧಿಸುವುದು ಎಂದು ಶಂಕಿಸಿ 'ದೇಹಭೇದಾನುವೃತ್ತ್ಯಾ ಬಹುವಚನಂನಾತ್ಮಭೇದಾಭಿಪ್ರಾಯೇಣ' ಎಂದರೆ ಆತ್ಮಭೇದವಿಲ್ಲದಿದ್ದರೂ ದೇಹಗಳು ಅನೇಕ ಇರೋಣದರಿಂದ ಬಹುವಚನವು ಯುಕ್ತವಾಗಿರುವುದು ಎಂದು ಹೇಳಿರುವರು. ಮೇಲೆ ಹೇಳಿದ ಬಹುವಚನಗಳಿಂದ ಜೀವರುಗಳಿಗೂ ಜೀವಪರಮಾತ್ಮರಿಗೂ ಭೇದವು ಸಿದ್ಧವಾದರೂ ತಮ್ಮ ಮತಕ್ಕೆ ವಿರೋಧ

ಬರಬಾರದೆಂದು ಶಂಕರಾಚಾರ್ಯರು ಕ್ಲಿಷ್ಟಾರ್ಥಗಳನ್ನು ಕಲ್ಪಿಸಿರುವರು. ಈ ರೀತಿ ಕ್ಲಿಷ್ಟಾರ್ಥಗಳನ್ನು ನೋಡಿದರೆ ಈ ಭೇದವಾಕ್ಯಗಳು ಶಂಕರಾಚಾರ್ಯರಿಗೆ ಅಸಹ್ಯವಾಗಿರುವುವೆಂದು ತೋರುತ್ತದೆ. ‘ ಅಹಂತ್ವಾಂ ಅನೇಜನಾಧಿಪಾಃ’ ಇತ್ಯಾದಿ ಶಬ್ದಗಳಿಂದ ಭೇದವು ತೋರುವುದೆಂದು ಯಾರಾದರೂ ಹೇಳಬಹುದು. ಹೀಗಿರಲು ಮ|| ರಾ|| ತಿಲಕರವರು ರಾಮಾನುಜಾಚಾರ್ಯರು ಬರೆದ ಅರ್ಥವು ಸಂಪ್ರದಾಯ ದೋಷಮೂಲಕವೆಂದು ಬರೆದಿರುತ್ತಾರೆ. ಆದರೆ ಈ ಬರಹವು ತಿಲಕರವರ ಅದ್ವೈತ ಮತದ ದುರಾಗ್ರಹದ ಫಲವೆಂದು ಹೇಳಬೇಕಾಗುವುದು.

ಗೀ. ರ. ಪು. ೬೧೭ರಲ್ಲಿ ‘ ಅದನ್ನು (ಜೀವೇಶ್ವರ ಸಂಬಂಧವನ್ನು) ಹೇಳುವ ಸಂದರ್ಭದಲ್ಲಿ ‘ ಸರ್ವಪ್ರಾಣಿಗಳ ಹೃದಯದಲ್ಲೂ ಆತ್ಮನು ನಾನೊಬ್ಬನೇ ಇರುವೆನು’ ಎಂದು ಅದ್ವೈತಸಿದ್ಧಾಂತವು ಅಧ್ಯಾಯ ೮. ಶ್ಲೋ. ೪, ಅ. ೧೩. ಶ್ಲೋ. ೩೧. ಈ ವಾಕ್ಯಗಳಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟದೆ’ ಎಂದು ಮ|| ರಾ|| ತಿಲಕರವರು ಬರೆಯುತ್ತಾರೆ. ಆದರೆ ಅದು ಸರಿಯಾದುದಲ್ಲ. ಏತಕ್ಕೆಂದರೆ—ಗೀತಾ. ಅ. ೮. ಶ್ಲೋ. ೪. “ ಅಧಿಯಜ್ಞೋಽಹಮೇವಾತ್ರ ದೇಹೇ ದೇಹಭೃತಾಂವರ|| ” ಎಂದು ಇದೆ. ಇದರ ಅರ್ಥವು ದೇಹಧಾರಿಗಳಲ್ಲಿ ಉತ್ತಮನಾದ ಅರ್ಜುನನೇ ಈ ದೇಹದಲ್ಲಿ ‘ ಅಧಿಯಜ್ಞಃ’ ಎಂದರೆ, ಯಜ್ಞಸ್ವಾಮಿಯಾದವನು ನಾನೇ ಇರುವೆನು ಎಂದಾಗುತ್ತದೆ. ಈ ಶ್ಲೋಕದ ಅರ್ಥವನ್ನು ಎಷ್ಟು ಸೂಕ್ಷ್ಮರೀತಿಯಿಂದ ನಿರೀಕ್ಷಣ ಮಾಡಿದರೂ ಅದ್ವೈತವು ಅಸ್ಪಷ್ಟವಾಗಿಯಾದರೂ ತೋರುವುದಿಲ್ಲ. ಸ್ಪಷ್ಟವೆಂಬುದಂತೂ ದೂರಾವಾಸ್ತವೆ. “ ಅನಾದಿತ್ವಾನ್ನಿರ್ಗುಣತ್ವಾತ್ಪರಮಾತ್ಮಾಯಮವ್ಯಯಃ| ಶರೀರಸ್ಥೋಽಪಿ ಕೌಂತೇಯ ನಕರೋತಿ ನಲಿಪ್ಯತೇ || ಎಂದು ಗೀ. ಅ. ೧೩. ಶ್ಲೋ. ೩೧. ಇದೆ. ಇದರ ಅರ್ಥವು “ ಪರಮಾತ್ಮನು ಅನಾದಿ ಮತ್ತು ನಿರ್ಗುಣನಾಗಿರುವುದರಿಂದ ಆ ಅವ್ಯಯನಾದ ಪರಮಾತ್ಮನು ಶರೀರದಲ್ಲಿದ್ದರೂ ಯಾವ ಕರ್ಮವನ್ನೂ ಮಾಡುವುದಿಲ್ಲ. ಮತ್ತು ಅವನಿಗೆ ಯಾವ ಕರ್ಮದ ಲೇಪವನ್ನೂ ಇಲ್ಲ” ಎಂದಾಗುವುದು. ಇವರಲ್ಲಿ ಅದ್ವೈತ ಪ್ರತಿಪಾದಕವಾದ ಶಬ್ದವೇ ಇಲ್ಲ.

ಆದರೂ ಈ ಶ್ಲೋಕವು ಅದ್ವೈತಪ್ರತಿಪಾದಕವೆಂದು ಹೇಳುವುದು ಅದ್ವೈತಮತದ ಆಗ್ರಹಮೂಲಕವು. ಅಲ್ಲದೆ ಈ ಶ್ಲೋಕವು ಅದ್ವೈತಪ್ರತಿಪಾದಕವೆಂದು ಹೇಳಿದರೆ "ಪರದೋಷಂ ಪಶ್ಯಸಿ ತ್ವಂ ಆತ್ಮದೋಷಂ ನಪಶ್ಯಸಿ" ಎಂಬ ನ್ಯಾಯವನ್ನು ಅನುಸರಿಸಿದಂತಾಗುವುದು. ಆದರೆ ಆಧುನಿಕ ವಿದ್ಯಾವಿಭೂಷಿತರಾದ ಮ॥ ರಾ॥ ತಿಲಕರವರಿಗೆ ಹೀಗೆ ಬರೆಯುವಿಕೆಯು ಸರ್ವಥಾ ಯುಕ್ತವಲ್ಲ. "ಈಶ್ವರಸ್ಸರ್ವಭೂತಾನಾಂ ಹೃದ್ದೇಶೇರ್ಜುನತಿಷ್ಠತಿ" ಎಂಬ ಶ್ಲೋಕದಲ್ಲಿ "ಹೃದ್ದೇಶೇ" ಎಂಬ ಪದದಿಂದ ಭೇದವು ಸಿದ್ಧಿಸುವುದು ಎಂದು ಶಂಕರಾಚಾರ್ಯರು ಒಪ್ಪಿರುವ ರೀತಿಯಿಂದ ಮೇಲ್ಕಂಡ ಶ್ಲೋಕಗಳಲ್ಲಿಯೂ "ದೇಹೇ, ಶರೀರಸ್ಥಃ" ಈ ಪದಗಳಿಂದ ಭೇದವೇ ಸಿದ್ಧಿಸುವುದಾದುದರಿಂದ ಈ ಪದಗಳಿಂದ ಅಭೇದವು ಸಿದ್ಧಿಸುವುದೆಂದು ಶಂಕರಾಚಾರ್ಯರ ಅನುಯಾಯಿಗಳು ಹೇಳುವುದು ಯುಕ್ತವಲ್ಲ. "ನಾಸತೋವಿದ್ಯತೇಭಾವೋನಾಭಾವೋ ವಿದ್ಯತೇಸತಃ। ಉಭಯೋರಪಿದೃಷ್ಟೋಽನ್ತಸ್ತ್ವನಯೋಸ್ತತ್ವದರ್ಶಿಭಿಃ॥" (ಗೀ. ಅ. ೨. ಶ್ಲೋ. ೧೬.) ಎಂಬ ಶ್ಲೋಕಕ್ಕೆ ಶ್ರೀಮನ್ಮಧ್ವಾಚಾರ್ಯರು ಕ್ಲಿಷ್ಟಾರ್ಥವನ್ನು ಬರೆದಿದ್ದಾರೆಂದು ಮ॥ ರಾ॥ ತಿಲಕರವರು ಹೇಳುತ್ತಾರೆ. ಇದರ ಖಂಡನವು ಚಕ್ರೋದಿ ಸಂವಾದ ಪುಸ್ತಕದಲ್ಲಿರುವುದು. ವಾಚಕರು ನೋಡಬಹುದು. (ಗೀ. ಅ. ೩. ಶ್ಲೋ. ೧೯, ಅ. ೬. ಶ್ಲೋ. ೩, ಅ. ೧೮. ಶ್ಲೋ. ೨.) ಇವುಗಳಿಗೆ ಸಂಪ್ರದಾಯಾನುಸಾರ ಅರ್ಥ ಬರೆದಿರುತ್ತಾರೆ. ಅದು ವಾಸ್ತವವಾದ ಅರ್ಥವಲ್ಲವೆಂದು ಮ॥ ರಾ॥ ತಿಲಕರವರು ಬರೆಯುತ್ತಾರೆ. ಆದರೆ ಈ ಸಂಪ್ರದಾಯವು ಶಂಕರಾಚಾರ್ಯರದು. ಆದಾಗ್ಯೂ ಮ॥ ರಾ॥ ತಿಲಕರವರು ಮಾಡಿದ ಖಂಡನವು ಯುಕ್ತವಲ್ಲವೆಂದು ನಮಗೆ ತೋರುತ್ತದೆ. ಏತಕ್ಕೆಂದರೆ—ಗೀ. ೩. ೧೭-೧೯ ನೆಯ ಪುಟದಲ್ಲಿ "ಯಸ್ತ್ವಾತ್ಮರತಿರೇವಸ್ಯಾತ್" "ನೈವತಸ್ಯಕೃತೇನಾರ್ಥಃ" "ತಸ್ಮಾದಸಕ್ತಃಸತತಂ ಕಾರ್ಯಂಕರ್ಮಸಮಾಚರ" ಈ ಶ್ಲೋಕಗಳ ಅರ್ಥವನ್ನು ಬರೆಯುವಾಗ ಜ್ಞಾನಿಯಾದ ಪುರುಷನಿಗೆ ಕರ್ತವ್ಯ ಯಾವುದೂ ಇಲ್ಲವೆಂದು ಗೀತೆಯು ವಾಸ್ತವವಾದ ಸಿದ್ಧಾಂತವೆಂದು ಭ್ರಮಿಸಿ, ಅರ್ಜುನನು

ಅಜ್ಞಾನಿಯಾದುದರಿಂದ ಪರಮಾತ್ಮನು ಅವನಿಗೆ ಕರ್ಮವನ್ನು ಮಾಡುವುದಕ್ಕೆ ಉಪದೇಶ ಮಾಡಿರುವನೆಂದು ಶಂಕರಾಚಾರ್ಯರು ನಿರೂಪಿಸಿರುವ ಮತವನ್ನು ಅನುವಾದ ಮಾಡಿ ಅದನ್ನು ಮ|| ರಾ|| ತಿಲಕರವರು ಖಂಡಿಸಿರುವರು. ಆದರೆ ‘ಬ್ರಹ್ಮಸತ್ಯಂ ಜಗನ್ಮಿಥ್ಯಾ’ ಎಂಬ ಅದ್ವೈತ ಸಿದ್ಧಾಂತದಲ್ಲಿ ‘ಬ್ರಹ್ಮನೊಬ್ಬನೇ ಸತ್ಯ ಇತರ ಯಾವತ್ತೂ ಮಿಥ್ಯಾ’ ಎಂದರೆ ಬ್ರಹ್ಮಜ್ಞಾನದಿಂದ ನಿವೃತ್ತವಾಗುವುದು’ ಎಂದು ಹೇಳಿರೋಣದರಿಂದ ಜ್ಞಾನಾನಂತರದಲ್ಲಿ ಉಪಕಾರ್ಯವಾದ ಲೋಕಗಳು ಕರ್ಮಗಳು ಮತ್ತು ಕರ್ತೃತ್ವವು ನಷ್ಟವಾಗೋಣದರಿಂದ ಜ್ಞಾನಾನಂತರದಲ್ಲಿ ಕರ್ಮಮಾಡುವುದು ಅದ್ವೈತ ಮತಾನುಸಾರವಾಗಿ ಯುಕ್ತವಾಗುವುದಿಲ್ಲ. ಅರ್ಜುನನು ಅಜ್ಞಾನಿಯಾದುದರಿಂದಲೇ ಅವನಿಗೆ ಪರಮಾತ್ಮನು ಕರ್ಮ ಮಾಡುವುದಕ್ಕೆ ಉಪದೇಶ ಮಾಡಿದನು ಎಂದು ಶಂಕರಾಚಾರ್ಯರು ಹೇಳುವುದು ಅದ್ವೈತ ಮತಾನುಸಾರ ಯುಕ್ತವಾಗಿಯೇ ಇರುವುದು. ಇದನ್ನು ಖಂಡನ ಮಾಡಬೇಕಾದರೆ ‘ಬ್ರಹ್ಮಸತ್ಯಂ ಜಗನ್ಮಿಥ್ಯಾ’ ಎಂಬ ಅದ್ವೈತ ಸಿದ್ಧಾಂತವನ್ನು ತ್ಯಾಗಮಾಡಿ ಪ್ರಪಂಚವು ಸತ್ಯವಾದುದೆಂದು ಹೇಳಿದರೆ, ಜ್ಞಾನಾನಂತರದಲ್ಲಿ ಉಪಕಾರ್ಯ ಲೋಕಗಳು, ಕರ್ಮಗಳು, ಕರ್ತೃತ್ವವು ಉಂಟೆಂದು ಸಿದ್ಧಿಸುವುದಲ್ಲದೆ ಜ್ಞಾನಾನಂತರದಲ್ಲಿ ಮಾಡಿದ ಕರ್ಮಕ್ಕೆ ಅಧಿಕಫಲ ಉಂಟೆಂಬುದು ಸಿದ್ಧಿಸುವುದು. ಮ|| ರಾ|| ತಿಲಕರವರು ಅದ್ವೈತಮತವನ್ನು ಅನುಸರಿಸಿ ಹೀಗೆ ಖಂಡನ ಮಾಡಿರುವುದು ಸರಿಯಾದುದಲ್ಲ. ಅದ್ವೈತವೂ ಜ್ಞಾನೋತ್ತರ ಕರ್ಮವೂ ಪರಸ್ಪರ ವಿರುದ್ಧವಾಗಿರುವುವು. ಅದ್ವೈತವನ್ನು ಒಪ್ಪಿದರೆ ಜ್ಞಾನೋತ್ತರ ಕರ್ಮವಿಲ್ಲ. ಜ್ಞಾನೋತ್ತರ ಕರ್ಮವುಂಟೆಂದು ಹೇಳಿದರೆ ಅದ್ವೈತ ಮತವು ನಷ್ಟವಾಗುವುದು. ಹೀಗಿರಲು ಮ|| ರಾ|| ತಿಲಕರವರು ಈ ಎರಡನ್ನೂ ಅನುಸರಿಸಿದರೆ ಅರ್ಧಜರತೀಯ ನ್ಯಾಯವನ್ನು ಅನುಸರಿಸಿದಂತಾಗುವುದು. “ಯೋಗಾರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತೆ” ಇದೇ ಮೊದಲಾದ ಶ್ಲೋಕಗಳಿಗೆ ಶಂಕರಾಚಾರ್ಯರ ಸಾಂಪ್ರದಾಯಿಕವಾದ ಅರ್ಥವನ್ನು ಖಂಡನ ಮಾಡಬೇಕಾಗಿದ್ದರೆ ಪ್ರಪಂಚವು ಸತ್ಯವೆಂದು ಹೇಳಬೇಕು. ಹಾಗ

ಲ್ಲದೆ ಪ್ರಪಂಚವು ಮಿಥ್ಯಾ ಎಂದು ಪ್ರತಿಪಾದನ ಮಾಡಿ ಜ್ಞಾನೋತ್ತರ ಕರ್ಮ ಮಾಡಬೇಕೆಂದು ಹೇಳುವುದು ಮೇಲೆ ಹೇಳಿದಂತೆ ಅಯುಕ್ತವಾಗಿರುವುದು.

ಶ್ರುತ್ಯರ್ಥ ವಿಚಾರ.

ಶಂಕರಾಚಾರ್ಯರು ಮೊದಲಾದ ಪ್ರಾಚೀನರಾದ ಅದ್ವೈತಿಗಳು ಮತ್ತು ಮ॥ರಾ॥ ತಿಲಕಪ್ರಭೃತಿಗಳಾದ ಆಧುನಿಕಾದ್ವೈತಿಗಳು ಛಾಂದೋಗ್ಯೋಪನಿಷತ್ತಿನ ಮೂರನೆಯ ಖಂಡದಲ್ಲಿರುವ ' ಸರ್ವಂಖಲ್ವಿದಂ ಬ್ರಹ್ಮ ' ಇವೇ ಮೊದಲಾದ ವಾಕ್ಯಗಳಿಗೆ ಅದ್ವೈತವೇ ಅರ್ಥವೆಂದು ಹೇಳುವರು. ಆದುದರಿಂದ ಈ ಶ್ರುತಿಗಳ ವಾಸ್ತವಾರ್ಥ ಯಾವುದೆಂಬುದನ್ನು ಇಲ್ಲಿ ವಿಚಾರ ಮಾಡೋಣ.

" ಸರ್ವಂಖಲ್ವಿದಂಬ್ರಹ್ಮ ತಜ್ಜಲಾನಿತಿಶಾಂತಉಪಾಸೀತ "(ಛಾ. ೩-೧೪) ಶಾಂಕರಭಾಷ್ಯಾನುಸಾರ ಈ ಶ್ರುತಿಯ ಅರ್ಥವು ಹೇಗೆಂದರೆ— ತಜ್ಜಲಾನ್= ಈ ಸಂಪೂರ್ಣ ವಿಶ್ವವು ' ತಜ್ಜ ' ಎಂದರೆ ಆ ಬ್ರಹ್ಮನಿಂದ ಹುಟ್ಟಿರುವುದು, ' ತಲ್ಲ ' ಎಂದರೆ ಬ್ರಹ್ಮನಲ್ಲಿ ಲಯ ಹೊಂದುವುದು, ' ತದನ ' ಎಂದರೆ ಬ್ರಹ್ಮನಲ್ಲೇ ಇರುವುದು. ಈ ಪ್ರಕಾರ ತ್ರಿಕಾಲದಲ್ಲಿಯೂ ಈ ಪ್ರಪಂಚವು ಬ್ರಹ್ಮನನ್ನು ಬಿಟ್ಟು ತೋರುವುದಿಲ್ಲವಾದುದರಿಂದ ನಾಮರೂಪಗಳಿಂದ ವಿಕೃತವಾದ ಈ ಪ್ರಪಂಚವು ಬ್ರಹ್ಮಸ್ವರೂಪವಾಗಿಯೇ ಇರುವುದು. ಪ್ರಪಂಚವು ಬ್ರಹ್ಮಸ್ವರೂಪವೆಂದು ಯುಕ್ತಿಯಿಂದ ಸಿದ್ಧಿಸಿದರೂ ಅದು ಪ್ರತ್ಯಕ್ಷಕ್ಕೆ ವಿರುದ್ಧವಾದುದೆಂತಲೂ, ಮತ್ತು ಬ್ರಹ್ಮನು ಸದ್ವಿತೀಯ (ಪ್ರಪಂಚವೆಂಬ ದ್ವಿತೀಯ ವಸ್ತುವಿನಿಂದ ಯುಕ್ತ) ನಾಗಿರಲು ಅದ್ವಿತೀಯನೆಂದು ಹೇಳುವುದು ಅಯುಕ್ತವಾದುದೆಂತಲೂ ಶಂಕಿಸಿ ಪ್ರಪಂಚವು ಬ್ರಹ್ಮಸ್ವರೂಪವೂ ಬ್ರಹ್ಮನು ಅದ್ವಿತೀಯನೂ ಎಂದು ಹೇಳುವುದು ಹೇಗೆ ಯುಕ್ತವಾಗಿರುವುದೆಂಬುದನ್ನು ಆರನೆಯ ಅಧ್ಯಾಯದಲ್ಲಿ ಹೇಳುವೆವೆಂದು ಶಂಕರಾಚಾರ್ಯರು ಬರೆದಿದ್ದಾರೆ. ಸರ್ವಪ್ರಪಂಚವು ಬ್ರಹ್ಮರೂಪವಾದುದರಿಂದ ' ಶಾಂತಃ ' ಎಂದರೆ ರಾಗದ್ವೇಷಗಳಿಂದ ರಹಿತನಾಗಿ, ಪ್ರಪಂಚರೂಪಿಯಾದ ಬ್ರಹ್ಮನನ್ನು ವಕ್ಷ್ಯಮಾಣಗುಣಗಳಿಂದ ಉಪಾಸನೆ

ಮಾತವೇಕಃ ಎಂತಲೂ ಶಂಕರಾಚಾರ್ಯರು ಬರೆದಿರುವರು. ಆದರೆ ಇದು ಸರಿಯಾದುದಲ್ಲ. ಏತಕ್ಕೆಂದರೆ, ಈ ಪ್ರಪಂಚವು ವಿಕೃತ, ಜನ್ಯ, ಮಿಥ್ಯಾ, ಜಡ, ಘಟಪಟ ಕುಡ್ಯಾದ್ಯನೇಕರೂಪ ಮತ್ತು ಅಶುದ್ಧವಾಗಿಯೂ ಇರುವುದು. ಇಂತಹ ಪ್ರಪಂಚವು ವಿಕಾರರಹಿತ, ನಿತ್ಯ, ಸತ್ಯ, ಚೇತನ, ನಾಮರೂಪರಹಿತ, ಅಖಂಡ, ಏಕರೂಪ, ಮತ್ತು ಶುದ್ಧನೂ ಆದ ಬ್ರಹ್ಮಸ್ವರೂಪವು ಹೇಗೆ ಆಗುವುದು? ಪ್ರಪಂಚ ಮತ್ತು ಬ್ರಹ್ಮ ಇವುಗಳ ಧರ್ಮಗಳು ಪರಸ್ಪರ ವಿರುದ್ಧವಾದುದರಿಂದ ಐಕ್ಯವು ಯುಕ್ತವಾಗಲಾರದೆಂದು ನಾವು ಹೇಳುವೆವು. ಅಲ್ಲದೆ ಶಂಕರಾಚಾರ್ಯರು ಕೂಡ ಇದೇ ಖಂಡದ ಎರಡನೆಯ ಮಂತ್ರದಲ್ಲಿರುವ “ಸರ್ವಕಾಮಃ ಸರ್ವರಸಸ್ಸರ್ವಗಂಧಃ” ಎಂಬ ವಾಕ್ಯಕ್ಕೆ ಅರ್ಥ ಬರೆಯುವಾಗ ‘ಧರ್ಮಾವಿರುದ್ಧೋ ಭೂತೇಷು ಕಾಮೋಽಸ್ಮಿ’ (ಗೀ. ೭-೧೧) ಎಂಬ ಗೀತಾವಾಕ್ಯದಲ್ಲಿ ಬ್ರಹ್ಮನು ಕಾಮಸ್ವರೂಪಿ ಎಂದು ಹೇಳಿರುವ ಪ್ರಕಾರ ಇಲ್ಲಿಯಾದರೂ ಸರ್ವಶ್ಚಾಸೌ ಕಾಮಶ್ಚ = ಸರ್ವಕಾಮಃ ಎಂದು ಕರ್ಮಧಾರಯ ಸಮಾಸವನ್ನು ಮಾಡಿ, ಕಾಮ, ರಸ, ಗಂಧ ಇವುಗಳಿಗೂ ಬ್ರಹ್ಮನಿಗೂ ಐಕ್ಯ ಹೇಳಬೇಕೆಂದು ಶಂಕಿಸಿ, ಕಾಮ ರಸ ಗಂಧಗಳು ಜನ್ಯವು ಮತ್ತು ಪರಾಧೀನವೂ ಆದುದರಿಂದ ಬ್ರಹ್ಮನಿಗೆ ಇವುಗಳಿಂದ ಐಕ್ಯವನ್ನು ಹೇಳಿದರೆ ಬ್ರಹ್ಮನೂ ಕೂಡ ಅನಾದಿಯೂ, ಸ್ವತಂತ್ರನೂ ಅಲ್ಲವೆಂತಾಗುವುದಾದುದರಿಂದ ‘ಸರ್ವಕಾಮಃ’ ಶಬ್ದಕ್ಕೆ, ‘ಸರ್ವೇ ಕಾಮಾಃ ಯಸ್ಯ ಸಃ = ಸರ್ವಕಾಮಃ’ ಎಂದು ಬಹುವ್ರೀಹಿ ಸಮಾಸ ಮಾಡಿ ಕಾಮರಸ ಮೊದಲಾದ ಪದಾರ್ಥಗಳು ಬ್ರಹ್ಮನ ಅಧೀನವೆಂದು ಅರ್ಥಹೇಳಬೇಕು ಹೊರತು ಜನ್ಯವಾದ ಕಾಮರಸಾದಿಗಳಿಗೂ ನಿತ್ಯನಾದ ಬ್ರಹ್ಮನಿಗೂ ಐಕ್ಯರೂಪಾರ್ಥವು ಸಂಭವಿಸಲಾರದೆಂದು ಸ್ಪಷ್ಟವಾಗಿ ಹೇಳಿರುವರು. “ಧರ್ಮಾವಿರುದ್ಧೋ ಭೂತೇಷು ಕಾಮೋಽಸ್ಮಿ” ಎಂಬ ವಾಕ್ಯಕ್ಕೆ, ಕಾಮವು ಈಶ್ವರಾಧೀನವೆಂತಲೇ ಶಂಕರಾಚಾರ್ಯರು ಅರ್ಥವನ್ನು ಹೇಳಿರುವರು. ಈ ರೀತಿಯಾಗಿ ಜನ್ಯವಾದ ಕಾಮಾದಿಗಳೂ ನಿತ್ಯನಾದ ಬ್ರಹ್ಮನಿಗೂ ಐಕ್ಯವು ಅಯುಕ್ತವೆಂದು ಹೇಳುವ ಶಂಕರಾಚಾರ್ಯರೇ ‘ಸರ್ವಂಖಲ್ವಿದಂ

ಬ್ರಹ್ಮ' ಎಂಬ ವಾಕ್ಯಕ್ಕೆ ಅರ್ಥ ಬರೆಯುವಾಗ ಜನ್ಯವಾದ ಜಗತ್ತಿಗೂ ನಿತ್ಯನಾದ ಬ್ರಹ್ಮನಿಗೂ ಐಕ್ಯವುಂಟೆಂದು ಹೇಳಿರುವರು. ಹೀಗೆ ಹೇಳೋಣವು ಪರಸ್ಪರ ವಿರುದ್ಧವಾದುದರಿಂದ ಅಯುಕ್ತವೆಂದು ಹೇಳುವುದು ಅನಾವಶ್ಯಕವಾದುದು.

ಪ್ರಪಂಚವು ಬ್ರಹ್ಮಸ್ವರೂಪವೆಂದು ಅದ್ವೈತಿಗಳು ಹೇಳುವರಷ್ಟೆ. ಆದರೆ ಈ ವಿಷಯದಲ್ಲಿ ಪ್ರಮಾಣವೇನೆಂಬುವನ್ನು ವಿಚಾರ ಮಾಡೋಣ. ಪ್ರಪಂಚವು ಬ್ರಹ್ಮಸ್ವರೂಪವೆಂದು ಪ್ರತ್ಯಕ್ಷಪ್ರಮಾಣದಿಂದ ಸಿದ್ಧಿಸುವುದಿಲ್ಲ. ಅಲ್ಲದೆ ಪ್ರಪಂಚವು ಬ್ರಹ್ಮಸ್ವರೂಪವೆಂಬುವಕ್ಕೆ ಪ್ರತ್ಯಕ್ಷಪ್ರಮಾಣದಿಂದ ವಿರೋಧ ಬರುವುದೆಂದು ಅದ್ವೈತಿಗಳೇ ಹೇಳುವರು. ಆದುದರಿಂದ ಪ್ರಪಂಚವು ಬ್ರಹ್ಮಸ್ವರೂಪವೆಂದು ಪ್ರತ್ಯಕ್ಷದಿಂದ ಸಿದ್ಧಿಸಲಾರದು.

ಪ್ರಪಂಚವು ಬ್ರಹ್ಮಸ್ವರೂಪವೆಂಬ ವಿಷಯದಲ್ಲಿ ಅದ್ವೈತಿಗಳು ಯುಕ್ತಿಯನ್ನು ಹೇಳುವರು. ಅದು ಹೇಗೆ ಎಂದರೆ— 'ತಜ್ಜಲಾನ್' ಎಂಬ ಶಬ್ದದಿಂದ ಈ ಪ್ರಪಂಚವು ಈ ಬ್ರಹ್ಮನಿಂದ ಹುಟ್ಟಿ, ಬ್ರಹ್ಮನಲ್ಲೇ ಲಯವನ್ನು ಹೊಂದಿ, ಮತ್ತು ಬ್ರಹ್ಮನಲ್ಲಿದ್ದುಕೊಂಡು ಸಕಲ ವ್ಯಾಪಾರವನ್ನು ನಡಿಸುವುದೆಂದು ಲಭಿಸುತ್ತದೆ. ಈ ಪ್ರಕಾರ ಈ ಪ್ರಪಂಚವು ಯಾವಾಗಲೂ ಬ್ರಹ್ಮನಲ್ಲೇ ಇರುವುದರಿಂದ ಈ ಪ್ರಪಂಚವು ಬ್ರಹ್ಮಸ್ವರೂಪವಾದುದೆ ಎಂಬ ರೀತಿಯಾಗಿ ಪ್ರಪಂಚವು ಬ್ರಹ್ಮಸ್ವರೂಪವೆಂಬ ವಿಷಯದಲ್ಲಿ ಅದ್ವೈತವಾದಿಗಳು ಯುಕ್ತಿಯನ್ನು ಹೇಳುವರು. ಆದರೆ ಇದು ಸರಿಯಾದುದಲ್ಲ. ಏತಕ್ಕೆಂದರೆ—ಈ ಪ್ರಪಂಚವು ಪರಮಾತ್ಮನಿಂದ ಹುಟ್ಟುವುದು ಎಂದು ಹೇಳೋಣದರಿಂದ ಪರಮಾತ್ಮನು ಕಾರಣನೆಂತಲೂ, ಪ್ರಪಂಚವು ಕಾರ್ಯವೆಂತಲೂ ಹೇಳಿದಂತಾಗುವುದು. ಉಪಾದಾನ ಕಾರಣ, ನಿಮಿತ್ತ ಕಾರಣವೆಂದು ಕಾರಣವು ಎರಡು ವಿಧ. ಮೃತ್ತಿಕೆಯು ಘಟಕ್ಕೆ ಹೇಗೆ ಉಪಾದಾನ ಕಾರಣವೋ ಅದರಂತೆ ಬ್ರಹ್ಮನು ಈ ಪ್ರಪಂಚಕ್ಕೆ ಉಪಾದಾನ ಕಾರಣನೆಂದು ಹೇಳಿದರೆ ಪ್ರಪಂಚವು ಬ್ರಹ್ಮಸ್ವರೂಪವೆಂದು ಸಿದ್ಧಿಸುವುದು. ಆದರೆ,

'ನಿರ್ವಿಕಾರೋಽಕ್ಷರಶ್ಶುದ್ಧಃ' ಎಂಬ ಶ್ರುತ್ಯನುಸಾರ ವಿಕಾರರಹಿತನಾದ ಬ್ರಹ್ಮನು ಈ ಪ್ರಪಂಚಕ್ಕೆ ಉಪಾದಾನ ಕಾರಣನೆಂದು ಹೇಳುವುದಕ್ಕಾಗುವುದಿಲ್ಲ. ಘಟಕ್ಕೆ ದಂಡ ಮೊದಲಾದುದು ಹೇಗೆ ನಿಮಿತ್ತ ಕಾರಣವೋ ಅದರಂತೆ ಪ್ರಪಂಚಕ್ಕೆ ಬ್ರಹ್ಮನು ನಿಮಿತ್ತಕಾರಣನೆಂದೇ ಹೇಳಿದರೆ ನಿಮಿತ್ತ ಕಾರಣಕ್ಕೂ ಕಾರ್ಯಕ್ಕೂ ಐಕ್ಯವು ಪ್ರಮಾಣ ವಿರುದ್ಧವಾದುದರಿಂದ ಈ ಪ್ರಪಂಚವು ಬ್ರಹ್ಮಸ್ವರೂಪವೆಂದು ಹೇಳುವುದಕ್ಕಾಗುವುದಿಲ್ಲ. ಈ ರೀತಿಯಾಗಿ ಬ್ರಹ್ಮನು ಉಪಾದಾನ ಕಾರಣನೆಂದು ಹೇಳಿದರೆ ಶ್ರುತಿವಿರೋಧವು ಬರುವುದು. ನಿಮಿತ್ತ ಕಾರಣನೆಂದು ಹೇಳಿದರೆ ಈ ಪ್ರಪಂಚವು ಬ್ರಹ್ಮಸ್ವರೂಪವಾಗಲಾರದು. ಈ ದೋಷಪರಿಹಾರಾರ್ಥವಾಗಿ ಶಂಕರಾಚಾರ್ಯರೇ ಮೊದಲಾದವರು ಬ್ರಹ್ಮನು ಈ ಪ್ರಪಂಚಕ್ಕೆ ವಿವರ್ತೋಪಾದಾನ ಕಾರಣ ಎಂದರೆ ಬ್ರಹ್ಮನು ತಾನು ಪ್ರಪಂಚ ರೂಪದಿಂದ ವಿಕಾರ ಹೊಂದದೆ ಅಜ್ಞಾನದಿಂದ ಪ್ರಪಂಚರೂಪದಿಂದ ತೋರುತ್ತಾನೆ ಎಂದು ಹೇಳುವರು. ಆದರೆ ಅಜ್ಞಾನದಿಂದ ರಜತದಂತೆ ತೋರುವ ಶುಕ್ತಿಯು ಸರ್ಪದಂತೆ ತೋರುವ ರಜ್ಜುವು ಆ ರಜತಕ್ಕೂ ಮತ್ತು ರಜ್ಜುವಿಗೂ ಕಾರಣವೆಂದು ಲೋಕವ್ಯವಹಾರದಲ್ಲಿಯೂ ಶಾಸ್ತ್ರದಲ್ಲಿಯೂ ಸಿದ್ಧಿಸುವುದಿಲ್ಲ. ಮತ್ತು ಅಧ್ಯಾಸವಾದ ನಿರಾಸದಲ್ಲಿ ಹೇಳಿದ ಪ್ರಕಾರ ಬ್ರಹ್ಮನಲ್ಲಿ ಪ್ರಪಂಚಾಧ್ಯಾಸ ಮಾಡುವುದಕ್ಕೆ ಒಂದಾದರೂ ಕಾರಣವಿಲ್ಲದೆ ಇರುವುದರಿಂದ ಬ್ರಹ್ಮನಲ್ಲಿ ಪ್ರಪಂಚಾಧ್ಯಾಸವಾಗಲಾರದು. ಆದರೂ 'ತುಷ್ಯತು' ಎಂಬ ನ್ಯಾಯದಿಂದ ಅಧ್ಯಾಸವು ಉಂಟೆಂದು ಗ್ರಹಿಸಿದರೂ ಶುಕ್ತಿಯು ರಜತರೂಪವು, ರಜ್ಜುವು ಸರ್ಪರೂಪವು ಹೇಗೆ ಆಗುವುದಿಲ್ಲವೋ ಅದರಂತೆ ಬ್ರಹ್ಮನು ಪ್ರಪಂಚಸ್ವರೂಪನಾಗಲಾರನು.

'ತಜ್ಜ' ಎಂಬ ಶಬ್ದಕ್ಕೆ 'ತಸ್ಮಾತ್ ಜಾಯತೇ' ಎಂದರೆ ಬ್ರಹ್ಮನಿಂದ ಹುಟ್ಟುವುದು ಎಂದು ಅರ್ಥ ಹೇಳಿದಂತೆ 'ತಲ್ಲ' ಎಂಬ ಶಬ್ದಕ್ಕೆ 'ತಸ್ಮಾತ್ ಲೀಯತೇ' ಎಂದರೆ ಈ ಪ್ರಪಂಚವು ಬ್ರಹ್ಮನಿಂದಲೇ ಲಯ ಹೊಂದುವುದು ಎಂದೇ ಅರ್ಥ ಹೇಳಬೇಕು. ಆದರೆ ದಂಡದಿಂದ ನಾಶವನ್ನು ಹೊಂದುವ ಘಟವು ಹೇಗೆ ದಂಡಸ್ವರೂಪವಲ್ಲವೋ ಅದ

ರಂತೆ ಬ್ರಹ್ಮನಿಂದ ನಾಶವನ್ನು ಹೊಂದುವ ಈ ಪ್ರಪಂಚವು ಬ್ರಹ್ಮ ಸ್ವರೂಪವಲ್ಲವೆಂತಾಗುವುದು. ಈ ಪ್ರಪಂಚವು ಬ್ರಹ್ಮನಲ್ಲಿ ಲಯ ಹೊಂದುವುದೆಂಬ ವಿಷಯದಲ್ಲಿ ಜಲಬುದ್ಬುದದ ದೃಷ್ಟಾಂತವನ್ನು ಅದ್ವೈತಿಗಳು ಹೇಳುವರು. ಆದರೆ ಬುದ್ಬುದಕ್ಕೆ ಜಲವು ಉಪಾದಾನವಾದ ಕಾರಣವಾದುದರಿಂದ ಬುದ್ಬುದವು ಜಲದಲ್ಲಿ ಲಯವನ್ನು ಹೊಂದುವುದು, ಎಂದರೆ ಜಲಸ್ವರೂಪವಾಗುವುದೆಂದು ಅರ್ಥ ಹೇಳಬಹುದು. ಬ್ರಹ್ಮನು ಪ್ರಪಂಚಕ್ಕೆ ಉಪಾದಾನಕಾರಣವಲ್ಲವಾದುದರಿಂದ ಪ್ರಪಂಚವು ಬ್ರಹ್ಮನಲ್ಲಿ ಲಯಹೊಂದುವ ಮಾತ್ರದಿಂದಲೇ ಪ್ರಪಂಚವು ಬ್ರಹ್ಮಸ್ವರೂಪವೆಂದು ಹೇಳುವುದು ಅಯುಕ್ತವಾದುದು. 'ತದನ್' ಎಂಬುವ ಶಬ್ದಕ್ಕೂ ಇದೇ ರೀತಿಯಾಗಿ 'ತಸ್ಮಾತ್ ಅನಿತಿ' ಎಂದರೆ, ಈ ಬ್ರಹ್ಮನಿಂದಲೇ ವ್ಯಾಪಾರವನ್ನು ಮಾಡುವುದು ಎಂದು ಅರ್ಥ ಹೇಳಬೇಕು. (ಗೀ. ಅ. ೧೮. ಶ್ಲೋ. ೪೬) 'ಯತಃಪ್ರವೃತ್ತಿರ್ಭೂತಾನಾಂ' ಎಂಬ ವಾಕ್ಯದಿಂದ ಇದೇ ಅರ್ಥವು ಹೇಳಲ್ಪಟ್ಟಿದೆ. ಆದುದರಿಂದ 'ತದನ್' ಎಂಬ ಶಬ್ದದಿಂದಲೂ ಪ್ರಪಂಚವು ಬ್ರಹ್ಮಸ್ವರೂಪವೆಂದು ಸಿದ್ಧವಾಗಲಾರದು. 'ತಸ್ಮಿನ್ ಅನಿತಿ' ಎಂದರೆ ಬ್ರಹ್ಮನಲ್ಲಿ ವ್ಯಾಪಾರ ಮಾಡುವುದು ಎಂದು ಅರ್ಥ ಹೇಳುವುದು ಅಯುಕ್ತವಾದುದು. ಹಾಗೆ ಅರ್ಥ ಹೇಳಿದರೂ ಪ್ರಪಂಚವು ಬ್ರಹ್ಮಸ್ವರೂಪವೆಂದು ಸಿದ್ಧಿಸಲಾರದು. ಈ ರೀತಿಯಾಗಿ 'ತಜ್ಜ' 'ತಲ್ಲ' ಮತ್ತು 'ತದನ್' ಎಂಬ ಮೂರು ಶಬ್ದಗಳ ಅರ್ಥವಿಚಾರ ಮಾಡಿದಾಗಲೂ ಪ್ರಪಂಚವು ಬ್ರಹ್ಮಸ್ವರೂಪವೆಂದು ಸಿದ್ಧಿಸುವುದಿಲ್ಲ. 'ತಜ್ಜಲಾನಿತಿಶಾಂತಉಪಾಸೀತ' ಎಂಬ ವಾಕ್ಯಕ್ಕೆ 'ತತ್' ಎಂದರೆ (ಉಪಾಸನೆಯಲ್ಲಿ ವಿಶೇಷ್ಯವಾದ) ಬ್ರಹ್ಮನು 'ಜಲಾನ್' ಎಂದರೆ ಜಲೇಅನಿತಿ (ಉಪಾಸನೆಯಲ್ಲಿ ವಿಶೇಷಣವಾದ ಪ್ರಳಯಕಾಲದ) ಜಲದಲ್ಲಿ ಚೇಷ್ಟಿಸುವನು ಎಂದು ಅರ್ಥ ಹೇಳಿದರೆ ಏಕವಾಕ್ಯತೆ ಬರುವುದು. 'ಶಾಂತಉಪಾಸೀತ' ಎಂಬುದನ್ನು ಭಿನ್ನವಾದ ವಾಕ್ಯವನ್ನು ಮಾಡಿ ಉಪಾಸನೆಯಲ್ಲಿ ವಿಶೇಷಣವನ್ನು ಹೇಳುವ ಪದವಿಲ್ಲದೆ ಇದ್ದರೂ 'ವಕ್ಷ್ಯಮಾಣಗುಣೈಃ' ಎಂಬ ಪದವನ್ನು ಅಧ್ಯಾಹಾರ ಮಾಡಿಕೊಂಡು ಅದ್ವೈತಿಗಳು ಈ ವಾಕ್ಯಕ್ಕೆ ಹೇ

ಳುವ ಅರ್ಥವು ಯುಕ್ತವಲ್ಲವೆಂದು ಸ್ಪಷ್ಟವಾಗಿ ಕಂಡುಬರುವುದು. ‘ಸರ್ವಂಖಲ್ವಿದಂಬ್ರಹ್ಮ ತಜ್ಜಲಾನಿತಿಶಾಂತಉಪಾಸೀತ’ ಎಂಬ ವಾಕ್ಯಕ್ಕೆ ಸಿದ್ಧಾಂತಾನುಸಾರ ಅರ್ಥವು ಹೇಗೆಂದರೆ— ‘ಇದಂ’ ಎಂದರೆ ಸರ್ವರ ಹೃದಯದಲ್ಲಿಯೂ ಸನ್ನಿಹಿತನಾಗಿರುವ ಪರಮಾತ್ಮನು, (ಪೂರ್ವಖಂಡದಲ್ಲಿ ಪರಮಾತ್ಮನು ಹೃದಯದಲ್ಲಿ ಇರುವನು ಎಂದು ಹೇಳಿರೋಣದರಿಂದ ‘ಇದಂ’ ಎಂಬ ಶಬ್ದಕ್ಕೆ ಹೃದಯದಲ್ಲಿರುವಪರಮಾತ್ಮನು ಎಂದೆ ಅರ್ಥಹೇಳಬೇಕು.) ‘ಸರ್ವಂ’ ಎಂದರೆ ಪೂರ್ಣನು ಅಥವಾ ‘ಸರ್ವಂಸಮಾಪ್ನೋಷಿತತೋಸಿಸರ್ವಃ’ (ಗೀ. ೧೧. ೪೦.) ಎಂಬ ಗೀತಾವಚನಾನುಸಾರ ಸರ್ವವ್ಯಾಪಕನು ಎಂತ ಅರ್ಥ. ಅಥವಾ ‘ಪುರುಷಏವೇದಂಸರ್ವಂ ಯದ್ಭೂತಂ ಯಚ್ಚಭವ್ಯಂ ಉತಾಮೃತತ್ವಸ್ಯೇಶಾನಃ’ ಎಂಬ ವಾಕ್ಯಕ್ಕೆ ‘ಇದಂಸರ್ವಂಪುರುಷಏವ’ ಎಂದರೆ ಈ ಸಂಪೂರ್ಣಪ್ರಪಂಚವು ಪುರುಷನ ಅಧೀನವೆಂತಾಗಲೀ ‘ಪುರುಷಃಇದಂಸರ್ವಂ’ ಎಂದು ಪರಮಾತ್ಮನು ಸಂಪೂರ್ಣಜಗತ್ತಿಗೂ ಸ್ವಾಮಿಯೆಂತಾಗಲೀ ಹೇಗೆ ಅರ್ಥಹೇಳಬೇಕೋ ಅದರಂತೆ ‘ಇದಂಸರ್ವಂಬ್ರಹ್ಮ’ ಎಂದರೆ ಈ ಸಂಪೂರ್ಣ ಪ್ರಪಂಚವು ಬ್ರಹ್ಮನ ಅಧೀನವೆಂತಾಗಲೀ ‘ಬ್ರಹ್ಮಇದಂಸರ್ವಂ’ ಎಂದರೆ ಪರಮಾತ್ಮನು ಸರ್ವಪ್ರಪಂಚಕ್ಕೆ ಸ್ವಾಮಿಯೆಂತಾಗಲೀ ಅರ್ಥಹೇಳಬೇಕು. ‘ಸರ್ವಕಾಮಸ್ಸರ್ವಗಂಧಸ್ಸರ್ವರಸಃ’ ಎಂಬವಾಕ್ಯದಲ್ಲಾದರೋ ಕಾಮವು ಈಶ್ವರಾಧೀನವಾಗಿರುವುದು ಎಂದು ಅರ್ಥವನ್ನು ಹೇಳಬೇಕು. ‘ಕಾಮೋಽಸ್ಮಿಭರತರ್ಷಭ’ (ಗೀ. ೭-೧೧.) ಈ ಗೀತಾವಾಕ್ಯಕ್ಕೆ ನಾನು (ಪರಮಾತ್ಮನು) ಕಾಮಸ್ವರೂಪಿಯಾಗಿರುವೆನು ಎಂಬ ಅರ್ಥ ತೋರಿದರೂ ಕಾಮವು ಜನ್ಯ ಮತ್ತು ಪರತಂತ್ರವಾಗಿರೋಣದರಿಂದ ಪರಮಾತ್ಮನು ಕಾಮಸ್ವರೂಪಿ ಎಂದರೆ ಆತನು ಜನಾದಿಯು ಸ್ವತಂತ್ರನು ಅಲ್ಲವೆಂತಾಗುವುದು. ಆದುದರಿಂದ ‘ಕಾಮೋಽಸ್ಮಿ’ ಎಂಬ ಶಬ್ದಕ್ಕೆ ನಾನು ಕಾಮಸ್ವಾಮಿಯಾಗಿರುವೆನು ಎಂದು ಅರ್ಥವನ್ನು ಹೇಳಬೇಕೆಂತ ಶಂಕರಾಚಾರ್ಯರೇ ಸ್ಪಷ್ಟವಾಗಿ ಬರೆದಿರುವರು. ಆದರೆ ‘ಕಾಮೋಽಸ್ಮಿ’ ಎಂಬುದಕ್ಕೆ ಕಾಮಸ್ವರೂಪಿಯಾಗಿರುವೆನು ಎಂದು ಅರ್ಥ ಸಹಜವಾಗಿ ತೋರುವುದು.

ಅವರಿಂದ ಕಾಮುಕನ್ನೂ ಪರಮಾತ್ಮನಿಗೂ ಐಕ್ಯವು ಸಿದ್ಧಿಸುವುದು. ಆದರೆ ಆ ಐಕ್ಯವು ಅಯುಕ್ತವಾದುದರಿಂದ 'ಕಾಮೋಽಸ್ಮಿ' ಎಂಬುವ ವಾಕ್ಯಕ್ಕೆ 'ಕಾಮುಸ್ವಾಮಿಯಾಗಿರುವೆನು' ಎಂದು ಹೇಗೆ ಅರ್ಥ ಹೇಳಬೇಕೋ, ಅದರಂತೆ 'ಸರ್ವಂ ಖಲ್ವಿದಂ ಬ್ರಹ್ಮ' ಎಂಬ ವಾಕ್ಯಕ್ಕೆ ಪ್ರಪಂಚವು ಬ್ರಹ್ಮಸ್ವರೂಪವೆಂದು ಅರ್ಥ ಹೇಳಿದರೆ ಪ್ರಪಂಚಕ್ಕೂ ಬ್ರಹ್ಮನಿಗೂ ಸಿದ್ಧಿಸುವ ಐಕ್ಯವು ಪ್ರಮಾಣ ವಿರುದ್ಧವಾದುದರಿಂದ ಈ ಶ್ರುತಿವಾಕ್ಯಕ್ಕೆ ಪ್ರಪಂಚವು ಬ್ರಹ್ಮನ ಅಧೀನವಾಗಿರುವುದು ಎಂದು ಅರ್ಥ ಹೇಳಬೇಕು. 'ತಜ್ಜಲಾನಿತಿ ಶಾಂತ ಉಪಾಸೀತ' ಎಂಬ ವಾಕ್ಯಕ್ಕೆ 'ತತ್' ಎಂದರೆ ಬ್ರಹ್ಮನು 'ಜಲಾನಿತಿ' ಪ್ರಲಯಕಾಲದಲ್ಲಿ ಜಲದಲ್ಲಿ ಕ್ರೀಡೆ ಮಾಡತಕ್ಕವನು ಎಂದು. 'ಶಾಂತಃ' ಪರಮಾತ್ಮನಲ್ಲೇ ಮನಸ್ಸಿಟ್ಟವನಾಗಿ 'ಉಪಾಸೀತ' ಉಪಾಸನೆ ಮಾಡಬೇಕು ಎಂದು ಹೇಳಬೇಕು.

"ಅಥ ಖಲು ಕ್ರತುಮಯಃ ಪುರುಷೋ ಯಥಾಕ್ರತುರಸ್ಮಿಂಲ್ಲೋಕೇ ಪುರುಷೋ ಭವತಿ ತಥೇತಃ ಪ್ರೇತ್ಯ ಭವತಿ ಸಕ್ರತುಂ ಕುರ್ವೀತ" (ಛಾ ೩-೧೪-೧) ಎಂಬುದಕ್ಕೆ ಶಾಂಕರಭಾಷ್ಯಾನುಸಾರ ಅರ್ಥ— ಈ ಪುರುಷನು ನಿಶ್ಚಯ ಪ್ರಧಾನನಾಗಿರುವ ಕಾರಣದಿಂದ ಈ ಜನ್ಮದಲ್ಲಿ ಯಾವ ನಿಶ್ಚಯದಿಂದ ಯುಕ್ತನಾಗಿರುವನೋ ಮೃತನಾದನಂತರ ಆ ನಿಶ್ಚಯಾನುಸಾರವಾಗಿ ಫಲವನ್ನು ಹೊಂದುವನು ಇದೇ ಅರ್ಥವು.

"ಯಂ ಯಂ ವಾಪಿ ಸ್ಮರನ್ ಭಾವಂ ತ್ಯಜತ್ಯಂತೇ ಕಲೇಬರಂ
ತಂ ತಮೇವೈತಿ ಕೌಂತೇಯ ಸದಾ ತದ್ಭಾವಭಾವಿತಃ"

(ಗೀ. ೮-೬) ಎಂಬ ಗೀತೆಯ ಶ್ಲೋಕದಲ್ಲಿಯೂ ಹೇಳಿರುವುದು. ಈ ಪ್ರಕಾರ ಶಾಸ್ತ್ರದಲ್ಲಿ ಹೇಳಿರುವುದರಿಂದ ಕ್ರತು ಎಂದರೆ ನಿಶ್ಚಯವನ್ನು ಸಂಪಾದಿಸಬೇಕು. 'ಕ್ರತುಂ ಕುರ್ವೀತ' ಎಂಬುದಕ್ಕೆ 'ಉಪಾಸೀತ' ಎಂಬುದರಿಂದ ಅನ್ವಯವಿರುವುದು.

ಖಂಡನ— 'ತಜ್ಜಲಾನಿತಿ ಉಪಾಸೀತ' ಎಂಬ ವಾಕ್ಯದಿಂದ ಉಪಾಸನೆಯು ವಿಶೇಷಣ ಮತ್ತು ವಿಶೇಷ್ಯ ಈ ಎರಡನ್ನು ಹೇಳಿ

‘ಅಥ ಖಲು’ ಎಂಬ ವಾಕ್ಯದಿಂದ ಬೇರೆ ಪ್ರಕರಣವು ಪ್ರಾರಂಭಿಸಲ್ಪಟ್ಟಿದೆ ಎಂಬುದು ಸ್ಪಷ್ಟವು. ಹೀಗಿರಲು, ‘ತಜ್ಜಲಾನಿತಿ’ ಎಂಬ ವಾಕ್ಯವನ್ನು ಬೇರೆಮಾಡಿ, ವಿಶೇಷಣ ಮತ್ತು ವಿಶೇಷ್ಯಗಳನ್ನು ಹೇಳದೆ ಕ್ರಿಯೆಯನ್ನು ಮಾತ್ರ ಹೇಳುವ ‘ಉಪಾಸೀತ’ ಎಂಬ ಪದವನ್ನು ಬೇರೆ ಮಾಡಿ, ‘ಉಪಾಸೀತ’ ಎಂಬ ಪದವು ವಿಶೇಷಣ ಮತ್ತು ವಿಶೇಷ್ಯವನ್ನು ಹೇಳದೆ ಇರೋಣದರಿಂದ ಅಪೂರ್ಣವಾದ ಅರ್ಥವನ್ನು ಹೇಳುವದು ಎಂಬುದನ್ನು ಲಕ್ಷ್ಯಕ್ಕೆ ತಾರದೆ, ‘ಅಥ ಖಲು ಕ್ರತುಮಯಃ ಪುರುಷಃ’ ಎಂಬ ವಾಕ್ಯದಲ್ಲಿರುವ ‘ಅಥ’ ಎಂಬ ಶಬ್ದದಿಂದ ಬೇರೆ ಪ್ರಕರಣವು ಪ್ರಾರಂಭವಾಗಿರುವುದೆಂದು ಸ್ಪಷ್ಟವಾಗುವುದನ್ನು ಲಕ್ಷ್ಯಮಾಡದೆ ‘ಅಥ ಖಲು ಕ್ರತುಮಯಃ’ ಎಂಬ ವಾಕ್ಯಕ್ಕೆ ‘ಉಪಾಸೀತ’ ಎಂಬ ಶಬ್ದದಿಂದ ಅನ್ವಯ ಹೇಳುವುದು ಸರಿಯಾದುದಲ್ಲ. ಅಲ್ಲದೆ ‘ಕ್ರತುಂಕುರ್ವೀತ’ ಎಂಬ ವಾಕ್ಯಕ್ಕೆ ನಿಶ್ಚಯಾತ್ಮಕವಾದ ಉಪಾಸನೆಯನ್ನು ಮಾಡಬೇಕು ಎಂದು ಅರ್ಥವಾಗೋಣದರಿಂದ ಈ ವಾಕ್ಯಕ್ಕೆ ‘ಉಪಾಸೀತ’ ಎಂಬ ಪದದಿಂದ ಅನ್ವಯ ಹೇಳಿದರೆ ಪುನರುಕ್ತಿಯು ಆಗುವುದು.

ಸಿದ್ಧಾಂತಾರ್ಥ — ಪರಮಾತ್ಮನು ಪ್ರಳಯ ಕಾಲದಲ್ಲಿ ‘ಉದಕದಲ್ಲಿ ಕ್ರೀಡೆ ಮಾಡುವನು’ ಎಂಬುದಾಗಿ ಉಪಾಸನೆಯನ್ನು ಮಾಡಬೇಕು ಎಂದು ಹೇಳಿ ‘ಅಥ’ ಎಂಬುದರಿಂದ ಎರಡನೆಯ ಉಪಾಸನೆಯನ್ನು ಹೇಳುವರು. ಪುರುಷನು ಯಾವ ನಿಶ್ಚಯದಿಂದ ಯುಕ್ತನಾಗಿರುವನೋ ಅವನು ಮೃತನಾದನಂತರ ಆ ನಿಶ್ಚಯಕ್ಕೆ ಅನುರೂಪವಾದ ಫಲವನ್ನೇ ಹೊಂದುವನು. ಆದುದರಿಂದಲೇ ಪುರುಷನು ‘ಕ್ರತುಮಯಃ’ ಎಂದರೆ ನಿಶ್ಚಯಪ್ರಧಾನನಾಗಿರುವನು. ಆದಕಾರಣ ಪರಮಾತ್ಮನ ವಿಷಯಕವಾದ ನಿಶ್ಚಯಾತ್ಮಕವಾದ ಉಪಾಸನೆಯನ್ನು ಮಾಡಬೇಕು.

‘ಮನೋಮಯಃ ಪ್ರಾಣಶರೀರಃ ಭಾರೂಪಃ ಸತ್ಯಸಂಕಲ್ಪಃ ಆಕಾಶಾತ್ಮಾ ಸರ್ವಕರ್ಮಾ ಸರ್ವಕಾಮಃ ಸರ್ವಗಂಧಃ ಸರ್ವರಸಃ ಸರ್ವಮಿದಮಭ್ಯಾತ್ತೋಽವಾಕ್ಯನಾದರಃ’ (ಛಾಂ. ೩-೧೪-೨) ಎಂಬ ಧಕ್ಕೆ ಶಂಕರಭಾಷ್ಯಾನುಸಾರ ಅರ್ಥ —

‘ಮನೋಮಯಃ’ ಎಂದರೆ—ಪುರುಷನ ಮನಸ್ಸು ಆಯಾ ವಿಷಯಗಳಲ್ಲಿ ಪ್ರವೃತ್ತವಾದರೆ ಮನಸ್ಸೇ ಉಪಾಧಿಯಾಗಿಯುಳ್ಳ ಪುರುಷನು ಆ ವಿಷಯಗಳಲ್ಲಿ ಪ್ರವೃತ್ತನಾದಂತೆಯೂ, ಮನಸ್ಸು ನಿವೃತ್ತವಾದರೆ ಪುರುಷನು ನಿವೃತ್ತನಾದಂತೆಯೂ, ತೋರುವನಾದುದರಿಂದ ಪುರುಷನಿಗೆ ಸ್ವಾಭಾವಿಕವಾದ ಪ್ರವೃತ್ತಿಯೂ ಮತ್ತು ನಿವೃತ್ತಿಯೂ ಇರುವುದಿಲ್ಲ. ಆದರೆ ಪುರುಷನ ಪ್ರವೃತ್ತಿಗೂ ಮತ್ತು ನಿವೃತ್ತಿಗೂ ಮನಸ್ಸೇ ಕಾರಣವಾದುದರಿಂದ ಈ ಪುರುಷನಿಗೆ ಮನೋಮಯನೆಂದು ಹೆಸರು. ‘ಪ್ರಾಣಶರೀರಃ’ ಪ್ರಾಣ ಎಂದರೆ ವಿಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿ ಈ ಎರಡರಿಂದ ಕೂಡಿರುವ ಯಾವ ಲಿಂಗಶರೀರವ್ಯೋ ಅದರಿಂದ ಯುಕ್ತನಾಗಿರುವನು. ‘ಭಾರೂಪಃ’ ಎಂದರೆ ಚೈತನ್ಯಸ್ವರೂಪಿಯು. ‘ಸತ್ಯಸಂಕಲ್ಪಃ’ ಎಂದರೆ ಇತರ ಜೀವರುಗಳಂತೆ ವ್ಯರ್ಥವಾದ ಸಂಕಲ್ಪ ಇಲ್ಲದವನು ಎಂದರೆ ಸಂಕಲ್ಪಾನುಸಾರ ಕಾರ್ಯದ ಸಿದ್ಧಿಯನ್ನು ಹೊಂದುವನು. ‘ಆಕಾಶಾತ್ಮಾ’ ಎಂದರೆ ಆಕಾಶ ಸದೃಶನು. ಈಶ್ವರನು ಚೇತನನಾದುದರಿಂದ ಜಡವಾದ ಆಕಾಶದ ಸಾಮ್ಯವನ್ನು ಹೇಳುವುದು ಹೇಗೆ ಎಂದು ಶಂಕಿಸಿ ಆಕಾಶದಲ್ಲಿರುವ ಸರ್ವಗತತ್ವ ಮತ್ತು ರೂಪರಹಿತತ್ವ ಈ ಧರ್ಮಗಳಿಂದಲೇ ಪರಮಾತ್ಮನಿಗೆ ಆಕಾಶದ ಸಾದೃಶ್ಯವು ಹೇಳಿದೆ. ಜಡತ್ವ ಎಂಬ ಧರ್ಮದಿಂದ ಸಾದೃಶ್ಯವು ಹೇಳುವುದಿಲ್ಲ ಎಂದು ಸಮಾಧಾನವು ಹೇಳಲ್ಪಟ್ಟಿದೆ. ‘ಸರ್ವಕರ್ಮಾ’ ಎಂಬುವ ಶಬ್ದಕ್ಕೆ ‘ಸರ್ವಂ ಕರ್ಮಯಸ್ಯಸಃ’ ಎಂತಾಗಲೀ ‘ಸರ್ವಸ್ಮಿನ್ ಕರ್ಮ ಯಸ್ಯಸ್ಯಃ’ ಎಂತಾಗಲಿ ವಿಗ್ರಹ ಹೇಳಿದರೆ, ಸರ್ವ ಕ್ರಿಯೆಗಳು ಬ್ರಹ್ಮನಲ್ಲಿಯೇ ಉಂಟೆಂದು ಸಿದ್ಧಿಸುವುದು; ಅಲ್ಲದೆ ಬ್ರಹ್ಮನು ನಿಷ್ಕ್ರಿಯನೆಂದು ಹೇಳುವ ಶ್ರುತಿಯು ವಿರೋಧವು ಬರುವುದು. ಆದುದರಿಂದ ‘ಸರ್ವಂ ಕರ್ಮಯಸ್ಯಸಃ’ ಎಂದರೇ ತನ್ನಿಂದ ಉಂಟಾಗಿ ಇರುವ ಜಗತ್ತಿನಿಂದ ಯುಕ್ತನಾಗಿ ಇರುವನು ಎಂದು ಅರ್ಥ ಹೇಳಬೇಕು. ಹೀಗೆ ಹೇಳಿದರೇ ‘ಸಹಿಸರ್ವಸ್ಯಕರ್ತಾ’ ಎಂಬ ಶ್ರುತಿಯ ಅನುಕೂಲ್ಯವು ಬರುವುದು. ‘ಸರ್ವಕಾಮಃ, ಸರ್ವೇಕಾಮಾಃ ಯಸ್ಯಸಃ’ ಎಂದು ವಿಗ್ರಹ ಮಾಡಿದರೆ

“ಧರ್ಮಾವಿರುದ್ಧೋಭೂತೇಷು ಕಾಮೋಽಸ್ಮಿ ಭರತರ್ಷಭ” (ಗೀತಾ ೭. ೧೧.) ಎಂಬ ಗೀತಾ ವಚನಾನುಸಾರ ಧರ್ಮಕ್ಕೆ ಅವಿರುದ್ಧವಾದ ಕಾಮಗಳಿಂದ ಯುಕ್ತನಾದವನು ಎಂದರೆ ಕಾಮಸ್ವಾಮಿಯಾಗಿ ಇರುವನು ಎಂಬರ್ಥವು ಲಬ್ಧವಾಗುವುದು. ಕಾಮರೂಪಿಯು ಎಂಬ ಅರ್ಥವನ್ನು ಬಿಟ್ಟು ‘ಕಾಮಸ್ವಾಮಿಯು’ ಎಂಬರ್ಥವನ್ನು ಹೇಳುವುದರಲ್ಲಿ ಶಂಕರಾಚಾರ್ಯರು ಹೇಳಿದ ಕಾರಣವೇನೆಂದರೆ— ಗೀತೆಯಲ್ಲಿ ‘ಕಾಮೋಽಸ್ಮಿ’ ಎಂಬ ಪದದಿಂದ ಕಾಮಕ್ಕೂ ಈಶ್ವರನಿಗೂ ಐಕ್ಯವು ಹೇಳಿರುವುದರಿಂದ ‘ಸರ್ವೇ ಕಾಮಾಃ ಯಸ್ಯ ಸಃ’ ಎಂಬ ಬಹುವ್ರೀಹಿ ಸಮಾಸವು ಯುಕ್ತವಲ್ಲ. ಬಹುವ್ರೀಹಿ ಸಮಾಸ ಹೇಳಿದರೆ ಕಾಮ ಮತ್ತು ಈಶ್ವರ ಇವರುಗಳಿಗೆ ಭೇದವು ತೋರುವುದು. ಆದುದರಿಂದ ಬಹುವ್ರೀಹಿ ಸಮಾಸವನ್ನು ಬಿಟ್ಟು ಪರಮಾತ್ಮನು ‘ಕಾಮಸ್ವರೂಪಿಯಾಗಿರುವನು’ ಎಂಬರ್ಥವನ್ನು ಹೇಳಬೇಕಲ್ಲವೆ? ಹೀಗೆ ಹೇಳೋಣವೂ ಯುಕ್ತವಲ್ಲ. ಏಕೆ ಎಂದರೆ ಶಬ್ದ ಮೊದಲಾದ ವಿಷಯಗಳಂತೆ ಕಾಮವು ಜನ್ಯವೂ, ಮತ್ತು ಪರತಂತ್ರವು ಆಗಿರುವುದು. ಇಂತಹ ಕಾಮದಿಂದ ಪರಮಾತ್ಮನಿಗೆ ಅಭೇದ ಹೇಳಿದರೆ ಪರಮಾತ್ಮನು ಅನಾದಿಯು ಸ್ವತಂತ್ರನು ಅಲ್ಲವೆಂತ ಆಗುವುದು. ಆದುದರಿಂದ ‘ಸರ್ವಕಾಮಃ’ ಎಂಬ ಪದಕ್ಕೆ ಬಹುವ್ರೀಹಿ ಸಮಾಸವನ್ನು ಹೇಳಿ ಕಾಮವು ಈಶ್ವರಾಧೀನವೆಂತಾಗಲಿ, ಈಶ್ವರನು ಕಾಮಸ್ವಾಮಿ ಯೆಂತಾಗಲಿ ಅರ್ಥವನ್ನು ಹೇಳಬೇಕು.

ಈ ರೀತಿಯಾಗಿ ಜನ್ಯವಾದ ಕಾಮ ಮೊದಲಾದ ಪದಾರ್ಥಗಳಿಗೂ ನಿತ್ಯವಾದ ಈಶ್ವರನಿಗೂ ಐಕ್ಯವು ಅಯುಕ್ತವಾದುದರಿಂದ ‘ಕಾಮೋಽಸ್ಮಿ’ ಎಂಬ ವಾಕ್ಯದಲ್ಲಿ ಇರುವ ‘ಕಾಮಃ’ ಎಂಬ ಶಬ್ದಕ್ಕೆ ಕಾಮಸ್ವಾಮಿ ಎಂದೇ ಅರ್ಥವನ್ನು ಶಂಕರಾಚಾರ್ಯರು ಹೇಳಿರುವರು. ಅದ್ವೈತವಾದಿಗಳು ಈ ಶಂಕರಾಚಾರ್ಯರ ಉಕ್ತಿಯನ್ನು ಚೆನ್ನಾಗಿ ಅವಗಾಹನೆಗೆ ತಂದುಕೊಂಡರೆ, “ಸರ್ವಂ ಖಲ್ವಿದಂ ಬ್ರಹ್ಮ” (ಛಾಂ, ೩. ೧೪. ೧.) “ಆತ್ಮೈವೇದಂ ಸರ್ವಂ” (ಛಾಂ. ೭. ೨೫. ೨.) “ಬ್ರಹ್ಮೈವೇದಂ ಸರ್ವಂ” (ಬೃ. ೨. ೫. ೬.) ಇವೇ ಮೊದಲಾದ ಬ್ರಹ್ಮನಿಗೂ ಪ್ರ

ಪಂಚಕ್ಕೂ ಐಕ್ಯವನ್ನು ಹೇಳುವಂತೆ ತೋರುವ ವಾಕ್ಯಗಳಿಗೆ ಪ್ರಪಂಚವು ಬ್ರಹ್ಮನ ಅಧೀನವೆಂತಲು, ಬ್ರಹ್ಮನು ಈ ಪ್ರಪಂಚಕ್ಕೆ ಸ್ವಾಮಿಯೆಂತಲು ದ್ವೈತವಾದಿಗಳು ಹೇಳುವ ಅರ್ಥವು ಅಯುಕ್ತವಲ್ಲವೆಂದು ಅದ್ವೈತ ವಾದಿಗಳಿಗೆ ಸ್ಪಷ್ಟವಾಗಿ ಕಂಡುಬರಬಹುದು. ಈಶ್ವರನು ಅವಿದ್ಯೆ ಮೊದಲಾದ ದೋಷಗಳಿಂದ ರಹಿತನಾದವನು. ಆದುದರಿಂದ ದೋಷದಿಂದ ಉಂಟಾಗುವ ಪಾಪವು, ಅದರಿಂದ ಉಂಟಾಗುವ ದುರ್ಗಂಧವು ಅವನಿಗೆ ಇಲ್ಲ. ಆದುದರಿಂದ 'ಸರ್ವಗಂಧಃ' ಎಂಬ ಶಬ್ದಕ್ಕೆ ಉತ್ತಮವಾದ ಗಂಧದಿಂದ ಯುಕ್ತನಾದವನು ಎಂದು ಅರ್ಥ ಹೇಳಬೇಕು. 'ಪುಣ್ಯೋಗಂಧಃ' ಎಂಬ (ಗೀ. ೭. ೯.) ವಾಕ್ಯದಲ್ಲಿಯೂ ಇದೇ ಅರ್ಥ ಹೇಳಲ್ಪಟ್ಟಿದೆ. 'ಸರ್ವರಸಃ' ಎಂದರೆ ಸುಖಪ್ರದವಾದ ರಸದಿಂದ ಯುಕ್ತನಾದವನು. 'ಸರ್ವಮಿದಂ ಅಭ್ಯಾತ್ತಃ' ಎಂದರೆ ಸರ್ವತ್ರ ವ್ಯಾಪ್ತನಾದವನು. 'ಅವಾಕೀ' ಎಂದರೆ ವಾಗಿಂದ್ರಿಯದಿಂದ ರಹಿತನಾದವನು. ಪರಮಾತ್ಮನು ಸರ್ವಗಂಧನು ಸರ್ವರಸನು ಎಂದು ಹೇಳಿದರೆ ಅವನಿಗೆ ಗಂಧ ಮೊದಲಾದ ಪದಾರ್ಥಗಳನ್ನು ಗ್ರಹಿಸುವ ಘ್ರಾಣ ಮೊದಲಾದ ಇಂದ್ರಿಯಗಳುಂಟೆಂದು ಆಗುವುದು. ಆದುದರಿಂದ 'ಅವಾಕೀ' ಎಂಬ ಶಬ್ದದಿಂದ ವಾಗಿಂದ್ರಿಯದ ನಿಷೇಧ ಮಾಡಲ್ಪಟ್ಟಿದೆ. ಉಪಲಕ್ಷಣೆಯಿಂದ ಪರಮಾತ್ಮನು ಘ್ರಾಣ ಮೊದಲಾದ ಸರ್ವೇಂದ್ರಿಯಗಳಿಂದಲು ರಹಿತನು ಎಂಬ ಅರ್ಥವು ಲಬ್ಧವಾಗುವುದು. "ಅಪಾಣಿಪಾದೋ ಜವನೋಗ್ರಹಿತಾ ಪಶ್ಯತ್ಯಚಕ್ಷುಃ ಸಶೃಣೋತ್ಯಕರ್ಣಃ" ಇವೇ ಮೊದಲಾದ ಶ್ರುತಿಗಳಲ್ಲಿ ಪರಮಾತ್ಮನಿಗೆ ಹಸ್ತ, ಪಾದ, ನೇತ್ರ, ಕರ್ಣ ಮೊದಲಾದ ಇಂದ್ರಿಯಗಳು ಇಲ್ಲವೆಂದು ಹೇಳಿರುವುದರಿಂದ 'ಅವಾಕೀ' ಎಂಬ ಶಬ್ದಕ್ಕೆ ಉಪಲಕ್ಷಣೆಯಿಂದ ಪರಮಾತ್ಮನಿಗೆ ಸರ್ವೇಂದ್ರಿಯಗಳು ಇಲ್ಲವೆಂದು ಅರ್ಥಹೇಳಬೇಕು. 'ಅನಾದರಃ' ಎಂದರೆ ಈಶ್ವರನು ಆಪ್ತಕಾಮನು ಎಂದರೆ ಇಷ್ಟವಾದ ಸರ್ವ ಪದಾರ್ಥಗಳನ್ನು ಹೊಂದಿದವನು. ಆದುದರಿಂದಲೇ ಅವನು ನಿತ್ಯತೃಪ್ತನೂ ಆಗಿರುವನು. ಮನುಷ್ಯನಿಗೆ ಅಪ್ರಾಪ್ಯವಾದ ವಸ್ತುವು ಪ್ರಾಪ್ತವಾದರೆ ಯಾವ ವಿಧವಾದ ಸಂತೋಷ ಉಂಟಾಗುವುದೋ ಅಂತಹ

ಸಂತೋಷದಲ್ಲಿ ಅವನಿಗೆ ಆದರವಿಲ್ಲದುದರಿಂದ ‘ಅನಾದರಃ’ ಎಂದರೆ ಆದರಶೂನ್ಯನು ಎಂದು ಅರ್ಥವು.

ಖಂಡನ—ಅಧ್ಯಸ್ತವಾದ ನಿರಾಸದಲ್ಲಿ ಹೇಳಿರುವ ಪ್ರಕಾರ ಅದ್ವೈತದಲ್ಲಿ ಅಂತಃಕರಣ ಎಂದರೆ ಮನಸ್ಸಿನ ಅಧ್ಯಾಸವು ಯುಕ್ತವಾಗುವುದಿಲ್ಲವಾದುದರಿಂದ ಪುರುಷನು ಮನಸ್ಸು ಎಂಬ ಉಪಾಧಿಯಿಂದ ವಿಶಿಷ್ಟನು ಎಂದು ಹೇಳುವುದು ಸರಿಯಾದುದಲ್ಲ. ಜೀವನಿಗೆ ಕರ್ತೃತ್ವವೇ ಇಲ್ಲದೆಹೋದರೆ ಪುಣ್ಯ ಪಾಪ ಉಪಾಸನೆ ಇವುಗಳ ಸಂಬಂಧವೇ ಅಶಕ್ಯವಾಗುವುದು. ಆದುದರಿಂದ “ಕರ್ತಾಶಾಸ್ತ್ರಾರ್ಥವತ್ವಾತ್” (ಸೂತ್ರ ೨. ೩. ೩೩.) ಇತ್ಯಾದಿ ಸೂತ್ರಗಳಿಂದಲೂ “ಯುಧ್ಯಸ್ವ ಭಾರತ” ಇತ್ಯಾದಿ ವಾಕ್ಯಗಳಿಂದಲೂ ಹೇಳಿರುವ ಪ್ರಕಾರ ಜೀವನಿಗೆ ಪ್ರವೃತ್ತಿಯೂ ನಿವೃತ್ತಿಯೂ ವಾಸ್ತವವಾಗಿ ಇರುವುವೆಂದು ಹೇಳಬೇಕು. ಆ ಪ್ರವೃತ್ತಿ ನಿವೃತ್ತಿಗಳು ಔಪಾಧಿಕಗಳೆಂತಲೂ ಮಿಥ್ಯಾ ಎಂತಲೂ ಹೇಳಕೂಡದು. ಈ ಪ್ರಕರಣದ ಪ್ರಾರಂಭದಲ್ಲಿ “ಸರ್ವಂ ಖಲ್ವಿದಂಬ್ರಹ್ಮ” ಎಂದು, ಮತ್ತು ಅಂತ್ಯದಲ್ಲಿಯೂ “ಏತದ್ಬ್ರಹ್ಮ” ಎಂದು ಬ್ರಹ್ಮಶಬ್ದ ಇರುವುದು. ಆದುದರಿಂದ ಈ ಪ್ರಕರಣವು ಬ್ರಹ್ಮಪ್ರತಿಪಾದಕವು; ಜೀವಪ್ರತಿಪಾದಕವಲ್ಲ. ಆದಕಾರಣ ‘ಮನಸ್ಸು’ ಎಂಬ ಉಪಾಧಿಯಿಂದ ಯುಕ್ತನಾದ ಜೀವನು ಮನಸ್ಸು ಪ್ರವೃತ್ತವಾದರೆ ತಾನು ಪ್ರವೃತ್ತನಾದಂತೆಯೂ, ಮನಸ್ಸು ನಿವೃತ್ತವಾದರೆ ತಾನು ನಿವೃತ್ತನಾದಂತೆಯೂ ತೋರುವನಾದುದರಿಂದ ಈ ಪುರುಷನು ಮನೋಮಯನಾಗಿರುವನು ಎಂಬ ಅಯುಕ್ತಾರ್ಥಗಳನ್ನು ಹೇಳಿ ಈ ಪ್ರಕರಣವು ಜೀವಪ್ರತಿಪಾದಕವೆಂದು ಹೇಳುವುದು ಯುಕ್ತವಾದುದಲ್ಲ.

“ಯಃಪೃಥಿವ್ಯಾಂತಿಷ್ಠನ್ ಯಸ್ಯಪೃಥಿವೀಶರೀರಂ ಯಃಪ್ರಾಣೇತಿಷ್ಠನ್ ಯಸ್ಯಪ್ರಾಣಃ ಶರೀರಂ” ಇವೇ ಮೊದಲಾದ ಶ್ರುತಿಗಳಲ್ಲಿ ಹೇಳಿರುವ ಪ್ರಕಾರ ಪರಮಾತ್ಮನು ‘ಪ್ರಾಣಶರೀರಃ’ ಎಂದರೆ ಶರೀರವಂತೆ ಪ್ರಾಣವು ಪರಮಾತ್ಮನಿಗೆ ನಿಯಮ್ಯವಾಗಿರುವುದು ಎಂದು ಅರ್ಥಹೇಳಬೇಕು.

‘ ಸರ್ವಕರ್ಮಾ ’ ಎಂಬ ಶಬ್ದಕ್ಕೆ ‘ ಸರ್ವಂಕರ್ಮ ಯಸ್ಯಸಃ ’ ಎಂಬ ವಿಗ್ರಹ ಮಾಡಿದರೆ ಈಶ್ವರನಲ್ಲಿ ಕ್ರಿಯೆಯು ಸಿದ್ಧಿಸುವುದು. ಅಲ್ಲದೆ ಈಶ್ವರನು ನಿಷ್ಕ್ರಿಯನು ಎಂದು ಹೇಳುವ ಶ್ರುತಿಯು ವಿರೋಧವು ಬರುವುದೆಂದು ಭಯದಿಂದ ‘ ಕ್ರಿಯತೆ ಇತಿಕರ್ಮ ಸರ್ವಂ ಕರ್ಮ ಯಸ್ಯ ’ ಎಂದು ವಿಗ್ರಹವನ್ನು ‘ ಸರ್ವಕರ್ಮಾ ’ ಎಂಬ ಶಬ್ದಕ್ಕೆ ಶಂಕರಾಚಾರ್ಯರು ಹೇಳಿರುವರು. ಹೀಗೆ ವಿಗ್ರಹ ಮಾಡಿದರೆ ಈಶ್ವರನ ಕ್ರಿಯೆಗೆ ಈ ಪ್ರಪಂಚವು ವಿಷಯವಾಗಿರುವುದು ಎಂದು ಸಿದ್ಧಿಸುವುದರಿಂದ “ ಭಕ್ಷಿತೇಽಪಿಲಶುನೇನಶಾಂತೋವ್ಯಾಧಿಃ ” ಎಂಬಂತೆ ಈಶ್ವರನಿಗೆ ಕ್ರಿಯೆಯು ಸಿದ್ಧಿಸುವುದು. ಮತ್ತು “ ಸಹಿಸರ್ವಸ್ಯ ಕರ್ತಾ ” ಎಂಬ ಶ್ರುತಿಯು ಇದಕ್ಕೆ ಸಮಾನಾರ್ಥಕವಾಗಿಯೂ ಇರುವುದು. ಇದು ಶಂಕರಾಚಾರ್ಯರಿಗೆ ತಿಳಿಯದೆ ಇರುವುದು ಆಶ್ಚರ್ಯಕರವಾದುದು. “ ಸರ್ವಕರ್ಮಾ ” ಎಂಬ ಶಬ್ದಕ್ಕೆ ಹೇಗೆ ವಿಗ್ರಹ ಮಾಡಿದರೂ ಈಶ್ವರನಲ್ಲಿ ಕ್ರಿಯೆ ಇಲ್ಲವೆಂದು ಸಿದ್ಧವಾಗಲಾರದು. ‘ ಸರ್ವಕಾಮಃ, ಸರ್ವಗಂಧಃ ’ ಇತ್ಯಾದಿ ಶಬ್ದಗಳಿಗೆ ಕಾಮಗಂಧರಸ ಇವುಗಳು ಈಶ್ವರನ ಅಧೀನವಾಗಿರುವುವು ಎಂದು ಶಂಕರಾಚಾರ್ಯರು ಅರ್ಥ ಹೇಳಿರುವುದರಿಂದ ಈ ವಿಷಯದಲ್ಲಿ ವಿಶೇಷ ವಿಚಾರ ಮಾಡುವುದು ಅನಾವಶ್ಯಕವಾದುದು. “ ಸರ್ವಮಿದಮಭ್ಯಾತ್ತಃ ” ಎಂಬ ವಿಶೇಷಣದಿಂದ ಈ ಪ್ರಪಂಚವು ವ್ಯಾಪ್ಯವೆಂತಲೂ, ಈಶ್ವರನು ವ್ಯಾಪಕನೆಂತಲೂ ಸಿದ್ಧಿಸುವುದರಿಂದ ಪರಬ್ರಹ್ಮನಿಗೂ ಈ ಪ್ರಪಂಚಕ್ಕೂ ಭೇದವೇ ಸಿದ್ಧಿಸುವುದು. “ ಅಪಾಣಿಪಾದೋಜವನೋ ಗ್ರಹೀತಾ ಪಶ್ಯತ್ಯಚಕ್ಷುಃ ಸಶೃಣೋತ್ಯಕರ್ಣಃ ” ಎಂಬ ಶ್ರುತಿಯಲ್ಲಿ ಈಶ್ವರನಿಗೆ ನೋಡೋಣ (ದರ್ಶನ) ಕೇಳೋಣ (ಶ್ರವಣ) ಗಮನ ಗ್ರಹಣ ಮೊದಲಾದ ಕ್ರಿಯೆಗಳನ್ನು ಹೇಳಿರುವುದರಿಂದ ಆ ಕ್ರಿಯೆಗಳಿಗೆ ಸಾಧನವಾದ ಇಂದ್ರಿಯಗಳುಂಟೆಂದು ಹೇಳಬೇಕು. ಅಲ್ಲದೆ ‘ ಅಪಾಣಿಪಾದಃ ’ ಮೊದಲಾದ ಶಬ್ದಗಳಿಗೆ ಈಶ್ವರನು ಪ್ರಾಕೃತೇಂದ್ರಿಯಗಳಿಂದ ರಹಿತನಾದವನು ಎಂದು ಅರ್ಥ ಹೇಳಬೇಕು. ಶಂಕರಾಚಾರ್ಯರು ಮತ್ತು ಅವರ ಅನುಯಾಯಿಗಳಾದ ರಾ॥ ರಾ॥ ತಿಲಕನ್ರು ಶ್ರುತಿಗಳು ಈಶ್ವರನ ಗುಣಗಳು ಮಿಥ್ಯಾ ಎಂತಲೂ,

ಗುಣಪ್ರತಿಪಾದಕ ಶ್ರುತಿಗಳು ಅಪರಬ್ರಹ್ಮ ವಿಷಯಕವೆಂತಲೂ ಹೇಳುವರು. ಆದರೆ ಹೀಗೆ ಹೇಳುವುದಕ್ಕೆ ಶ್ರುತಿಯಲ್ಲಿರುವ ಒಂದು ಶಬ್ದವಾದರೂ ಅನುಕೂಲವಿಲ್ಲ. ಆದರೂ ಬೌದ್ಧರಂತೆ ಶ್ರುತ್ಯುಕ್ತವಾದ ಸರ್ವವೂ ಮಿಥ್ಯಾ ಎಂದು ಹೇಳೋಣವು ಯುಕ್ತವಲ್ಲ. ಮತ್ತು ಈ ಅದ್ವೈತವಾದಿಗಳು ತಮಗೆ ಅಭಿಮತವಾದ ನಿರ್ಗುಣ ಬ್ರಹ್ಮನ ಸಿದ್ಧಿಗೋಸ್ಕರ ವೇದವು ಪ್ರಮಾಣವೆಂದು ಹೇಳಿದರೂ "ಭಕ್ಷಿತೇಽಪಿಲಶುನೇ ನಶಾಂತೋವ್ಯಾಧಿಃ" ಎಂಬಂತೆ ಇವರ ನಿರ್ಗುಣಬ್ರಹ್ಮನು ಅವಾಚ್ಯನು ಅಜ್ಞೇಯನು ಆಗಿರುವುದರಿಂದ ವೇದದಿಂದಲಾಗಲೀ ಇತರ ಪ್ರಮಾಣದಿಂದಾಗಲೀ ಸಿದ್ಧಿಸುವುದಿಲ್ಲವಾದ ಕಾರಣ ವೇದವು ಅಪ್ರಮಾಣವೆಂದು (ವೇದದಲ್ಲಿ ಹೇಳಿರುವುದು ಮಿಥ್ಯಾ ಎಂದು ಹೇಳಿದರೆ ವೇದವು ಅಪ್ರಮಾಣವೆಂದು ಹೇಳಿದಂತೆಯೇ ಆಗುವುದು) ಹೇಳೋಣವು ನ್ಯಾಯ್ಯವಲ್ಲ. ಅಲ್ಲದೆ ಯಾವ ಪ್ರಮಾಣದಿಂದಲೂ ಸಿದ್ಧವಾಗದೆ ಇರುವ ನಿರ್ಗುಣಬ್ರಹ್ಮನ ಸಿದ್ಧಿಯನ್ನು ಕೂಡ ಒಪ್ಪಿದ ಪಕ್ಷದಲ್ಲಿ ಶಶವಿಷಾಣವಂಧ್ಯಾಪುತ್ರ ಮೊದಲಾದುವುಗಳ ಸಿದ್ಧಿಯನ್ನು ಒಪ್ಪಬೇಕಾಗುವುದು.

'ಮನೋಮಯಃ, ಪ್ರಾಣಶರೀರಃ, ಭಾರೂಪಃ, ಸತ್ಯಸಂಕಲ್ಪಃ ಆಕಾಶಾತ್ಮಾ, ಸರ್ವಕರ್ಮಾ, ಸರ್ವಕಾಮಃ, ಸರ್ವಗಂಧಃ, ಸರ್ವರಸಃ ಸರ್ವಮಿದಮಭ್ಯಾತ್ತೋಽವಾಕ್ಯನಾದರಃ' ಈ ಶ್ರುತಿಗೆ ಸಿದ್ಧಾಂತಾನುಸಾರ ಹೇಳತಕ್ಕ ಅರ್ಥವು — 'ಮನು ಅವಬೋಧನೆ' ಎಂಬ ಧಾತು ಪಾಠಾನುಸಾರ ಮನುಧಾತುವಿಗೆ ಜ್ಞಾನವೆಂದು ಅರ್ಥವು. ಮಯಟ್ ಪ್ರತ್ಯಯಕ್ಕೆ ಪ್ರಾಚುರ್ಯವೂ, ಸ್ವರೂಪವೂ ಅರ್ಥವಾಗಿರುವುವು. ಆದುದರಿಂದ 'ಮನೋಮಯಃ' ಎಂಬ ಶಬ್ದಕ್ಕೆ ಜ್ಞಾನಪ್ರಚುರ (ಸರ್ವಜ್ಞ) ನು ಎಂದು ಅರ್ಥವು. 'ಪ್ರಾಣಶರೀರಃ' ಎಂದರೆ ಚಲಾತ್ಮಕವಾದ ದೇಹವುಳ್ಳವನು. 'ಭಾರೂಪಃ' ಎಂದರೆ ಪ್ರಕಾಶಸ್ವರೂಪಿಯು. 'ಸತ್ಯಸಂಕಲ್ಪಃ' ಎಂದರೆ ಸಫಲವಾದ ಮನೋರಥವುಳ್ಳವನು; 'ಆಕಾಶಾತ್ಮಾ' ಎಂದರೆ ಆಕಾಶದಂತೆ ವ್ಯಾಪ್ತಸ್ವರೂಪನು. 'ಸರ್ವಕರ್ಮಾ' ಎಂದರೆ ಸರ್ವವಿಷಯಕವಾದ ಕ್ರಿಯೆಗಳಿಂದ ಯುಕ್ತನಾದವನು; 'ಸರ್ವಕಾ

ಮಃ' ಎಂದರೆ ಇಷ್ಟನಾದ ಸರ್ವವಸ್ತುಗಳಿಂದಲೂ ಪೂರ್ಣನಾದವ ನು; 'ಸರ್ವಗಂಧಃ' ಎಂದರೆ ಸರ್ವ ಸುಗಂಧಗಳನ್ನು ಗ್ರಹಣ ಮಾ ಡುವವನು; 'ಸರ್ವರಸಃ' ಎಂದರೆ ಸರ್ವರಸಗಳನ್ನು ಗ್ರಹಣಮಾಡು ವವನು; 'ಸರ್ವಮಿದಮಭ್ಯಾತ್ತಃ' ಎಂದರೆ ಸರ್ವವ್ಯಾಪಕನು; 'ಅವಾಕೀ' ಎಂದರೆ ಪ್ರಾಕೃತ ವಾಗಿಂದ್ರಿಯದಿಂದ ರಹಿತನಾದವನು; 'ಅನಾದರಃ' ಎಂದರೆ ಆಶ್ಚರ್ಯ ರಹಿತನು. ಈ ಗುಣಗಳಿಂದ ವಿಶಿಷ್ಟ ನಾದ ಈಶ್ವರನ ಉಪಾಸನೆಯನ್ನು ಮಾಡಬೇಕು.

ಏಷಮ ಆತ್ಮಾಂತರ್ಹೃದಯೇಣೀಯಾನ್ ವ್ರೀಹೇರ್ವಾಯವಾದ್ವಾ ಸರ್ಷಪಾದ್ವಾ ಶ್ಯಾಮಾಕಾದ್ವಾಶ್ಯಾಮಾಕತಂಡುಲಾದ್ವೈಷಮ ಆತ್ಮಾಂ ತರ್ಹೃದಯೇಜ್ಯಾಯಾನ್ಪೃಥಿವ್ಯಾ ಜ್ಯಾಯಾನಂತರಿಕ್ಷಾಜ್ಜ್ಯಾಯಾನ್ ದಿವೋಜ್ಯಾಯಾನೇಭ್ಯೋ ಲೋಕೇಭ್ಯಃ ||

ಅರ್ಥ—'ಏಷಃ' ಎಂದರೆ ಪೂರ್ವದಲ್ಲಿ ಹೇಳಿರುವ ಗುಣಗಳಿಂದ ವಿಶಿಷ್ಟನಾದ ಪರಮಾತ್ಮನು, ಹೃದಯದಲ್ಲಿಯೇ ಶ್ಯಾಮಾಕತಂಡುಲಸ ರ್ಷಪ ಮೊದಲಾದ ಸೂಕ್ಷ್ಮಪದಾರ್ಥದಕಿಂತಲೂ ಸೂಕ್ಷ್ಮನಾಗಿರುವನು. ಹೀಗೆ ಹೇಳಿದರೆ ಪರಮಾತ್ಮನು ಅಣುಪರಿಮಾಣನೆಂದು ಸಿದ್ಧವಾಗು ವುದು. ಅದನ್ನು ನಿಷೇಧ ಮಾಡುವುದಕ್ಕಾಗಿ ಮುಂದೆ ಈ ಪರಮಾತ್ಮ ನು ಪೃಥ್ವಿಯಕಿಂತಲೂ, ಅಂತರಿಕ್ಷದಕಿಂತಲೂ, ದ್ಯುಲೋಕದಕಿಂತಲೂ, ಅಥವಾ ಸರ್ವಲೋಕಗಳಕಿಂತಲೂ ದೊಡ್ಡವನಾಗಿರುವನು ಎಂದು ಪರ ಮಾತ್ಮನಿಗೆ ಮಹತ್ಪರಿಮಾಣವು ಶ್ರುತಿಯಲ್ಲಿ ಹೇಳಿದೆ ಎಂದು ಶಂಕರಾ ಚಾರ್ಯರು ಹೇಳಿರುವರು. ಆದರೆ ಈ ಶ್ರುತಿಯಲ್ಲಿ ಪರಮಾತ್ಮನಿಗೆ ಅಣುಪರಿಮಾಣವನ್ನು ನಿಷೇಧ ಮಾಡಿರುವುದಿಲ್ಲ. ಏಕೆಂದರೆ—"ಅ ಣೋರಣೀಯಾನ್ ಮಹತೋಮಹೀಯಾನ್" ಇತ್ಯಾದಿ ಪ್ರಮಾಣದಲ್ಲಿ ಈಶ್ವರನಿಗೆ ಅಣುತ್ವವೂ ಮತ್ತು ಮಹತ್ವವೂ ಹೇಳಲ್ಪಟ್ಟವೆ. ಮತ್ತು 'ಯಸ್ಮಿನ್ವಿರುದ್ಧಗತಯೋಽಪ್ಯನಿಶಂಪತಂತಿ' ಎಂಬ ವಾಕ್ಯ ದಲ್ಲಿಯೂ ಇತರತ್ರ ವಿರುದ್ಧವಾಗಿ ತೋರುವ ಧರ್ಮಗಳು ಪರಮಾತ್ಮ ನಲ್ಲಿ ಇರುವುವೆಂದು ಹೇಳಿದೆ. ಕೃಷ್ಣಾವತಾರದಲ್ಲಿ ಯಶೋದೆಯು ಕೃ ಷ್ಣನಿಗೆ ಬಂಧನ ಮಾಡುವುದಕ್ಕಾಗಿ ತೆಗೆದುಕೊಂಡ ರಜ್ಜುವು ಎರ

ಡಂಗುಲ ಕಡಿಮೆಯಾಯಿತು. ಆ ರಜ್ಜುವಿಗೆ ಇನ್ನೊಂದು ರಜ್ಜು ಸೇರಿಸಿದಾಗಲೂ ಪುನಃ ಎರಡಂಗುಲ ಕಡಿಮೆಯಾಯಿತು. ಇದರಿಂದಲೂ ಪರಮಾತ್ಮನಲ್ಲಿ ಅಣುತ್ವವೂ ಮಹತ್ತ್ವವೂ ಎರಡೂ ಉಂಟೆಂದು ಸಿದ್ಧಿಸುವುದು.

'ಸರ್ವಕರ್ಮಾ, ಸರ್ವಕಾಮಃ, ಸರ್ವಗಂಧಃ, ಸರ್ವರಸಃ, ಸರ್ವಮಿದಮಭ್ಯಾತ್ತೋऽವಾಕ್ಯನಾದರಃ ಏಷಮ ಆತ್ಮಾಂತರ್ಹೃದಯ ಏತದ್ಬ್ರಹ್ಮ' ಛಾಂ. ೩. ೪. ೧೪.

ಅರ್ಥ— ಲೋಕದಲ್ಲಿ ರಾಜನಿಗೆ ಸಂಬಂಧಪಟ್ಟ ಚಾರಪುರುಷರನ್ನು ಕರೆದುಕೊಂಡು ಬರಲು ಹೇಳಿದರೆ ರಾಜನನ್ನು ಬಿಟ್ಟು ಹೇಗೆ ಚಾರಪುರುಷನನ್ನು ಮಾತ್ರ ತರುವರೋ ಅದರಂತೆ ಮನೋಮಯತ್ವ ಮೊದಲಾದ ಗುಣಗಳಿಂದ ಯುಕ್ತನಾದ ಪರಮಾತ್ಮನ ಉಪಾಸನೆಯನ್ನು ಮಾಡಬೇಕೆಂದು ಹೇಳಿದರೆ ಆ ಮನೋಮಯತ್ವ ಮೊದಲಾದ ಗುಣಗಳನ್ನು ಬಿಟ್ಟು ಕೇವಲ ಪರಮಾತ್ಮನ ಉಪಾಸನೆಯನ್ನೇ ಮಾಡಬೇಕೆಂದು ಅರ್ಥವಾಗಬಹುದು. ಹಾಗೆ ಅರ್ಥ ಹೇಳಬಾರದೆಂಬ ಕಾರಣದಿಂದ ಪುನಃ ಮನೋಮಯತ್ವ ಮೊದಲಾದ ಗುಣಗಳು ಹೇಳಲ್ಪಟ್ಟಿವೆ. ಇವರಿಂದ ಮನೋಮಯತ್ವ ಮೊದಲಾದ ಗುಣಗಳಿಂದ ಯುಕ್ತನಾದ ಪರಮಾತ್ಮನ ಉಪಾಸನೆಯನ್ನೇ ಮಾಡಬೇಕೆಂದು ಸಿದ್ಧಿಸುವುದು. 'ಏಷಮೇ ಆತ್ಮಾ' ಎಂದರೆ ಇವನು ನನ್ನ ಆತ್ಮನು ಎಂದು ಆತ್ಮನಿಗೂ ಜೀವನಿಗೂ ಸಂಬಂಧವು ಹೇಳಲ್ಪಟ್ಟಿದೆ. ಮತ್ತು 'ಏತದ್ಬ್ರಹ್ಮ ಏತಮಿತಃ ಪ್ರೇತ್ಯಾಭಿಸಂಭವಿತಾಸ್ಮಿ' ಎಂಬ ಶ್ರುತಿಯಲ್ಲಿ ಪ್ರಾಪ್ತಿಯೆಂಬುವ ಕ್ರಿಯೆಗೆ ಪರಮಾತ್ಮನು ಕರ್ಮನೆಂತಲೂ ಉಪಾಸಕನಾದ ಜೀವನು ಕರ್ತನೆಂತಲೂ ಹೇಳಿದೆ. ಒಂದೇ ಕ್ರಿಯೆಯಲ್ಲಿ ಕರ್ತನೂ ಕರ್ಮಪದಾರ್ಥವೂ ಭಿನ್ನವಾಗಿರಬೇಕೆಂಬ ನಿಯಮ ಇರೋಣದರಿಂದ ಈ ಶ್ರುತಿಯಿಂದ ಜೀವೇಶ್ವರರಿಗೆ ಐಕ್ಯವು ಸಿದ್ಧಿಸಲಾರದು. ಅದರಿಂದಲೇ 'ತತ್ತ್ವಮಸಿ, ಆತ್ಮೈವೇದಂಸರ್ವಂ' ಎಂಬ ೬ ನೆಯ ಮತ್ತು ೩ ನೆಯ ಅಧ್ಯಾಯದಲ್ಲಿರುವ ವಾಕ್ಯಗಳಿಗಾದರೂ ಜೀವಬ್ರಹ್ಮೈಕ್ಯವು ಅರ್ಥವಾಗಲಾರದು. ೬ನೆಯ ಅಧ್ಯಾಯದಲ್ಲಿ 'ಅಥ ಸಂಪತ್ಸ್ಯೇ' ಎಂಬ

ವಾಕ್ಯದಲ್ಲಿ ಕಾಲಾಂತರದಲ್ಲಿ ಜೀವನಿಗೆ ಬ್ರಹ್ಮಪ್ರಾಪ್ತಿಯು ಹೇಳಿರುವುದರಿಂದ ಈ ಶ್ರುತಿಯೂ ಜೀವೇಶ್ವರರ ಭೇದಪ್ರತಿಪಾದಕವೇ ; ಐಕ್ಯಪ್ರತಿಪಾದಕವಲ್ಲವೆಂದು ಹೇಳಕೂಡದು. ಏಕೆಂದರೆ— ಈ ವಾಕ್ಯವು ಭೋಗಿಸಲಿಕ್ಕೆ ಆರಬ್ಧವಾದ ಕರ್ಮವು ಉಳಿಯುವುದೆಂದು ಹೇಳುವುದಕ್ಕಾಗಿ ಪ್ರವೃತ್ತವಾಗಿದೆ. ಕಾಲಾಂತರದಲ್ಲಿ ಬ್ರಹ್ಮಪ್ರಾಪ್ತಿಯನ್ನು ಹೇಳಿರುವುದರಿಂದ ಭೇದಪರವೆಂದು ತಿಳಿಯಬಾರದು. ಹಾಗೆ ಹೇಳಿದರೆ 'ತತ್ತ್ವಮಸಿ' ಎಂಬ ವಾಕ್ಯದಲ್ಲಿ ಜೀವನಿಗೆ ಬ್ರಹ್ಮಪ್ರಾಪ್ತಿಯನ್ನು ವರ್ತಮಾನಕಾಲದಲ್ಲಿಯೇ ಹೇಳಿರುವುದರಿಂದ ಆ ಶ್ರುತಿಯ ವಿರೋಧವು ಬರುವುದೆಂದು ಶಂಕರಾಚಾರ್ಯರು ಹೇಳಿರುವರು. ಆದರೆ 'ಏಷ ಮ ಆತ್ಮಾ, ಏತದ್ಬ್ರಹ್ಮ, ಏತಮಿತಃಪ್ರೇತ್ಯ' ಮೊದಲಾದ ವಾಕ್ಯಗಳು ಹೇಗೆ ಭೇದಪ್ರತಿಪಾದಕವೋ ಅದರಂತೆಯೇ 'ತತ್ತ್ವಮಸಿ' 'ಆತ್ಮೈವೇದಂ ಸರ್ವಂ' ಈ ವಾಕ್ಯಗಳು ಕೂಡ ಭೇದಪ್ರತಿಪಾದಕವೆಂತಲೇ ಹೇಳಬೇಕು. ಐಕ್ಯಪ್ರತಿಪಾದಕವೆಂದು ಹೇಳಕೂಡದು. 'ತತ್ತ್ವಮಸಿ' ಎಂಬ ವಾಕ್ಯವು ಐಕ್ಯಪ್ರತಿಪಾದಕವಲ್ಲವೆಂಬುದನ್ನು ಮುಂದೆ ಸ್ಪಷ್ಟಮಾಡುವೆವು. 'ಆತ್ಮೈವೇದಂಸರ್ವಂ' ಎಂಬ ವಾಕ್ಯವು ಐಕ್ಯಪ್ರತಿಪಾದಕವಲ್ಲ. ಏಕೆಂದರೆ— 'ಸರ್ವಕಾಮಃ, ಸರ್ವಗಂಧಃ' ಈ ವಿಶೇಷಣಗಳಿಂದ ಜನ್ಯ ಮತ್ತು ಪರಾಧೀನವಾದ ಕಾಮಗಂಧಾದಿಗಳು ಈಶ್ವರಸ್ವರೂಪವೆಂದು ಹೇಳಿದರೆ ಈಶ್ವರನು ಜನ್ಯನು ಮತ್ತು ಪರತಂತ್ರನೆಂದು ಸಿದ್ಧಿಸುವುದು. ಆದುದರಿಂದ ಕಾಮಗಂಧ ಮೊದಲಾದುವುಗಳು ಈಶ್ವರಾಧೀನವಾಗಿರುವುವು ಎಂದು ಶಂಕರಾಚಾರ್ಯರೇ ಅರ್ಥಹೇಳಿರುವರು. ಅದರಂತೆಯೇ ಜಡ ಮತ್ತು ವಿಕೃತವಾದ ಪ್ರಪಂಚವು ಈಶ್ವರಸ್ವರೂಪವೆಂದು ಹೇಳಿದರೆ ಈಶ್ವರನು ಜಡ ಮತ್ತು ವಿಕೃತನೆಂದು ಸಿದ್ಧಿಸುವುದು. ಆದುದರಿಂದ ಈ ಸರ್ವಪ್ರಪಂಚವು, 'ಆತ್ಮೈವ' ಎಂದರೆ ಆತ್ಮನ ಅಧೀನವಾದುದೇ ಎಂದು ಅರ್ಥ ಹೇಳಬೇಕು. ಈಶ್ವರಸ್ವರೂಪವಾದುದು ಎಂದು ಹೇಳಕೂಡದು. ಮತ್ತು ಶುಕ್ತಿಯಲ್ಲಿ ಆರೋಪಿತವಾದ ರಜತವು ಹೇಗೆ ಶುಕ್ತಿರೂಪವಾಗುವುದಿಲ್ಲವೋ ಅದರಂತೆಯೇ ಅದ್ವೈತಮತಾನುಸಾರವಾಗಿ ಬ್ರಹ್ಮನಲ್ಲಿ ಆರೋಪಿತವಾದ ಈ

ಪ್ರಪಂಚವು ಬ್ರಹ್ಮಸ್ವರೂಪವಾಗಲಾರದು. ಘಟಾಕಾರವಾಗಿ ಪರಿಣಮಿಸುವ ಮೃತ್ತಿಕೆಯು ಘಟಸ್ವರೂಪವಾಗುವುದುಂಟು. ಆದರೆ ಬ್ರಹ್ಮನು ವಿಕಾರಶೂನ್ಯನಾದುದರಿಂದ ಪ್ರಪಂಚರೂಪದಿಂದ ಪರಿಣಮಿಸುವನೆಂತಲೂ ಹೇಳಲಿಕ್ಕಾಗುವುದಿಲ್ಲ. ಆದುದರಿಂದ 'ಆತ್ಮೈವೇದಂ ಸರ್ವಂ' ಎಂಬ ಶ್ರುತಿಯು ಪ್ರಪಂಚಕ್ಕೂ ಬ್ರಹ್ಮನಿಗೂ ಐಕ್ಯವನ್ನು ಹೇಳುವುದಿಲ್ಲ.

'ಏತಮಿತಃ ಪ್ರೇತ್ಯಾಭಿಸಂಭವಿತಾಸ್ಮೀತಿ ಯಸ್ಯಸ್ಯಾದದ್ಧಾ ನವಿಚಿಕಿತ್ಸಾಸ್ತೀತಿಹಸ್ಮಾಹ ಶಾಂಡಿಲ್ಯಃ' ಛಾಂ. ೩-೧೪-೧೪. ಈ ಶ್ರುತಿಗೆ ಶಾಂಕರಭಾಷ್ಯಾನುಸಾರ ಅರ್ಥ— 'ಯಾವ ಜ್ಞಾನಿಯಾದ ಪುರುಷನಿಗೆ ನಾನು ಈ ದೇಹದಿಂದ ಮೃತನಾಗಿ ಸಗುಣಬ್ರಹ್ಮನನ್ನು ಹೊಂದುವೆನೆಂಬ ನಿಶ್ಚಯವು ಮರಣಕಾಲದಲ್ಲಿ ಇರುವುದೋ ಮತ್ತು ಯಾವ ಪುರುಷನಿಗೆ ನಿಶ್ಚಯದ ಫಲಪ್ರಾಪ್ತಿಯ ವಿಷಯದಲ್ಲಿ ಸಂಶಯವಿರುವುದಿಲ್ಲವೋ ಆ ಜ್ಞಾನಿಯಾದ ಪುರುಷನು ಈಶ್ವರಭಾವವನ್ನು ಹೊಂದುವನು. ಹೀಗೆ ಶಾಂಡಿಲ್ಯಋಷಿಗಳು ಹೇಳುವರು' ಎಂಬುದಾಗಿದೆ.

ಖಂಡನ—ಸಗುಣ ಬ್ರಹ್ಮನೆಂದರೆ ಒಂದು ವಿಶಿಷ್ಟ ಚೈತನ್ಯವು. ಮತ್ತು ಜೀವನು ವಿಶಿಷ್ಟಚೈತನ್ಯವೇ. ಹೀಗಿರಲು ಅವರಿಗೆ ಐಕ್ಯವು ಹೇಗೆ ಸಿದ್ಧಿಸುವುದು? ಜೀವನು ಉಪಾಧಿಯಿಂದ ನಿವೃತ್ತನಾದಾಗಲೂ ಸಗುಣಬ್ರಹ್ಮನಿಂದ ಅವನಿಗೆ ಐಕ್ಯವನ್ನು ಹೇಳಲಾಗುವುದಿಲ್ಲ. ಉಭಯ ಚೈತನ್ಯವು ಉಪಾಧಿಯಿಂದ ನಿವೃತ್ತವಾದುದು ಎಂದು ಅರ್ಥ ಹೇಳುವುದಾದರೆ ಜೀವನಿಗೆ ಶುದ್ಧಬ್ರಹ್ಮ ಪ್ರಾಪ್ತಿಯನ್ನೇ ಹೇಳಿದಂತೆ ಆಗುವುದು. ಸಗುಣಬ್ರಹ್ಮ ಪ್ರಾಪ್ತಿಯೆಂದು ಅರ್ಥವಾಗುವುದಿಲ್ಲ. ಮತ್ತು ಈ ವಾಕ್ಯದಲ್ಲಿ ಜೀವನು ಈಶ್ವರನನ್ನು ಕುರಿತು ಪ್ರಾಪ್ತನಾಗುವನು ಎಂದು ಹೇಳಿದೆ. ಪ್ರಾಪ್ತಿಯೆಂಬ ಕ್ರಿಯೆಗೆ ಈಶ್ವರನು ಕರ್ಮನು, ಜೀವನು ಕರ್ತನು ಆಗಿರುವುದರಿಂದ ಅವರುಗಳಿಗೆ ಭೇದವೆ ಸಿದ್ಧಿಸುವುದೆಂದು ಶಂಕರಾಚಾರ್ಯರು ಮೊದಲೇ ಹೇಳಿರುವುದರಿಂದ ಈ ವಾಕ್ಯದಲ್ಲಿ ಪುನಃ ಅವರುಗಳಿಗೆ ಐಕ್ಯವನ್ನು ಹೇಳಿದರೆ ಪೂರ್ವೋತ್ತರ ಗ್ರಂಥಗಳ ವಿರೋಧವು ಬರುವುದು.

ಸರ್ವಕರ್ಮಾ, ಸರ್ವಕಾಮಃ, ಸರ್ವಗಂಧಃ, ಸರ್ವರಸಃ, ಸರ್ವಮಿದಮಭ್ಯಾತ್ತೋಽವಾಕ್ಯನಾದರಃ । ಏಷಮೆ ಆತ್ಮಾಂತರ್ಹೃದಯೇ ಏತದ್ಬ್ರಹ್ಮ ಏತಮಿತಃ ಪ್ರೇತ್ಯಾಭಿಸಂಭವಿತಾಸ್ಮೀತಿ ಯಸ್ಯಸ್ಯಾದದ್ಧಾನ ವಿಚಿಕಿತ್ಸಾಸ್ತೀತಿಹಸ್ಮಾಹ ಶ್ಯಾಂಡಿಲ್ಯಃ ಶ್ಯಾಂಡಿಲ್ಯಃ ಛಾಂ. ೩-೪-೧೪.

ಸಿದ್ಧಾಂತದ ಅರ್ಥ—ಈ ದೇಹದಿಂದ ಮೃತನಾದ ನಂತರ ಸರ್ವಕಾಮತ್ವ ಮೊದಲಾದ ಗುಣಗಳಿಂದ ವಿಶಿಷ್ಟನು ಹೃತ್ಕಮಲಸ್ಥನು ಆದ ಬ್ರಹ್ಮನನ್ನು ಜ್ಞಾನಿಯು ಹೊಂದುವನೆಂಬ ನಿಶ್ಚಯವು ಯಾವ ಪುರುಷನಿಗೆ ಇರುವುದೋ ಆ ಜ್ಞಾನಿಯಾದ ಪುರುಷನು ಪರಮಾತ್ಮನನ್ನು ಹೊಂದುವನು ಎಂಬ ವಿಷಯದಲ್ಲಿ ಸಂಶಯವಿಲ್ಲ. ಶಾಂಡಿಲ್ಯ ಋಷಿಗಳು ಹೀಗೆ ಹೇಳುವರು.

ಜಡ, ವಿಕೃತ, ಪರತಂತ್ರ, ಮತ್ತು ಕಾರ್ಯರೂಪಿಯಾಗಿಯೂ ಭಿನ್ನಭಿನ್ನವಾಗಿಯೂ ಅದ್ವೈತ ಮತಾನುಸಾರ ಆರೋಪಿತವಾಗಿಯೂ ಇರುವ ಈ ಪ್ರಪಂಚವು ಚೇತನ, ವಿಕಾರಶೂನ್ಯ, ಸ್ವತಂತ್ರ, ನಾಮರೂಪಗಳಿಂದ ರಹಿತ ಅಖಂಡ ಮತ್ತು ಅನಾದಿಯಾದ ಬ್ರಹ್ಮನಸ್ವರೂಪವಾಗಲಾರದು. ಶಂಕರಾಚಾರ್ಯರು ಕಾಮರಸಗಂಧ ಮೊದಲಾದ ಪದಾರ್ಥಗಳು ಜನ್ಯವು ಪರತಂತ್ರವು ಆದುದರಿಂದ ಸ್ವತಂತ್ರನು ನಿತ್ಯನು ಆದ ಬ್ರಹ್ಮಸ್ವರೂಪವಾಗಲಾರದು ಎಂದು ಇದೇ ಖಂಡದಲ್ಲಿಯೇ ಹೇಳಿದಾರೆ. ಹೀಗಿರಲು ರಾ|| ರಾ|| ತಿಲಕರೇ ಮೊದಲಾದ ಅದ್ವೈತಿಗಳು ಪ್ರಪಂಚವು ಬ್ರಹ್ಮಸ್ವರೂಪವೆಂದು ಮತ್ತು ಈ ಭೇದವು ಕೊನೆಯ ಎಂದರೆ ಶ್ರೇಷ್ಠವಾದ ಅದ್ವೈತ ಬ್ರಹ್ಮಾನುಭವದಲ್ಲಿ ಇರಲಾರದೆಂದು, 'ಸರ್ವಂಖಲ್ವಿದಂಬ್ರಹ್ಮ' ಎಂಬ ವಾಕ್ಯದ ಅಭಿಪ್ರಾಯವನ್ನು (ಛಾಂ. ೩-೧೪-೧. ಗೀ. ರ. ೨೯೬.) ಹೇಳುವುದು ಯುಕ್ತವಲ್ಲ. ಮತ್ತು 'ಸರ್ವಕಾಮಃ, ಸರ್ವಗಂಧಃ' ಇವೇ ಮೊದಲಾದ ಶ್ರುತಿವಾಕ್ಯಗಳಿಗೆ ಕಾಮ ಮೊದಲುದುವುಗಳು ಈಶ್ವರನ ಅಧೀನವಾಗಿರುವುವು ಎಂಬ ಅರ್ಥ ಹೇಳುವುದು ಯುಕ್ತವಾದುದು. ಹಾಗೂ ಈಶ್ವರನಲ್ಲಿ ಇರುವ ನಿಯಾಮಕತ್ವ ಮೊದಲಾದ ಗುಣಗಳು ಸತ್ಯವೆಂದು ಹೇಳುವುದಕ್ಕೆ

ಯಾವ ಅಭ್ಯಂತರವೂ ಇಲ್ಲ. ಅಲ್ಲದೆ ಯಾವ ಶ್ರುತಿಯೂ ಈ ಗುಣಗಳು ಮಿಥ್ಯಾಭೂತವೆಂದು ಹೇಳಿರುವುದಿಲ್ಲ. ಆದುದರಿಂದ ಶ್ರುತ್ಯುಕ್ತವಾದ ಗುಣಗಳು ಮಿಥ್ಯಾ ಯೆಂದು ಹೇಳುವುದಕ್ಕೆ ಪ್ರಮಾಣಸಹಾಯವಿಲ್ಲದಿರುವುದಲ್ಲದೆ ಸಕಲ ಪ್ರಮಾಣಗಳ ವಿರೋಧವೂ ಬರುತ್ತದೆ. ಈ ಗುಣಗಳು ಇವುಗಳಿಂದ ಯುಕ್ತನಾದ ಬ್ರಹ್ಮನು ಮತ್ತು ಚೇತನಾಚೇತ ಪ್ರಪಂಚವು ವೇದೋಕ್ತವಾಗಿದ್ದರೂ ಮಿಥ್ಯಾ ಯೆಂದು ಹೇಳಿದರೆ ವೇದವು ಅಪ್ರಮಾಣವೆಂತಾಗುವುದರಿಂದ ಬೌದ್ಧಮತವನ್ನು ಅನುಸರಿಸಿದಂತೆ ಆಗುವುದು. ಶಂಕರಾಚಾರ್ಯರು ವೇ. ಸೂ. ೧-೨-೧. ಈ ಅಧಿಕರಣದಲ್ಲಿ 'ಏತಮಿತಃ ಪ್ರೇತ್ಯ ಅಭಿಸಂಭವಿತಾಸ್ಮೀತಿ' ಇವೇ ಮೊದಲಾದ ವಾಕ್ಯಗಳು ಜೀವೇಶ್ವರರ ಭೇದಬೋಧಕವೆಂದು ಹೇಳಿರುವರು. ಹೀಗಿರಲು ಸಮಸ್ತ ಪ್ರಪಂಚಕ್ಕೂ ಬ್ರಹ್ಮನಿಗೂ ಐಕ್ಯವನ್ನು ಹೇಳುವುದು ಯುಕ್ತವಲ್ಲ. ಆದುದರಿಂದ ಈ ಉಪನಿಷತ್ ಖಂಡಕ್ಕೆ ನಮ್ಮ ಸಿದ್ಧಾಂತ ಪ್ರಕಾರವಾಗಿ ಪರಮಾತ್ಮನು ಸರ್ವಪ್ರಪಂಚಕ್ಕೆ ಸ್ವಾಮಿಯು ಪೂರ್ಣನು ವ್ಯಾಪ್ತನು ಆಗಿದ್ದು ಪ್ರಳಯಕಾಲದಲ್ಲಿ ಉದಕದಲ್ಲಿ ಕ್ರೀಡೆ ಮಾಡುವನು ಎಂದು ಉಪಾಸನೆಯನ್ನು ಮಾಡಬೇಕೆಂತಲು, ಮತ್ತು ಜ್ಞಾನಸ್ವರೂಪಿಯು ಚಲಾತ್ಮಕವಾದ ಶರೀರದಿಂದ ಯುಕ್ತನು, ಪ್ರಕಾಶ ಸ್ವರೂಪಿಯು ಅಪ್ರತಿಹತ ಶಕ್ತಿಯುಳ್ಳವನು ಎಂತಲೂ ಉಪಾಸನೆಯನ್ನು ಮಾಡಿದರೆ ಆ ಪುರುಷನು ಪರಮಾತ್ಮನನ್ನು ಹೊಂದುವನು ಎಂದರೆ ಮುಕ್ತನಾಗುವನೆಂತಲೂ ಅರ್ಥ ಹೇಳಬೇಕು.

ವೇದಾಂತಸೂತ್ರಗಳಿಗೆ ಶಾಂಕರಭಾಷ್ಯದಲ್ಲಿ ಈ ಉಪನಿಷತ್ ಖಂಡದಲ್ಲಿ ಇರುವ ಕೆಲವು ವಾಕ್ಯಗಳನ್ನು ವಾಸ್ತವವಾದ ಅರ್ಥದಕಿಂತಲು ವಿರುದ್ಧವಾದ ಅರ್ಥಗಳ ವಿಷಯದಲ್ಲಿ ಪ್ರಮಾಣವೆಂದು ಗ್ರಂಥಕಾರರು ಉದಾಹರಿಸಿರುವರು. ಆ ವಾಕ್ಯಗಳನ್ನು ಅವುಗಳ ಭಾಷ್ಯವನ್ನು ಬರೆದು ಅದರ ಯುಕ್ತಾಯುಕ್ತತ್ವ ವಿಚಾರವನ್ನು ಮಾಡಹೋದರೆ ಬಹಳ ಗ್ರಂಥ ವಿಸ್ತಾರವಾಗುವುದು. ಆದುದರಿಂದ ಈಗ ಆ ವಿಚಾರವನ್ನು ಮಾಡುವುದಿಲ್ಲ. ಶಾಂಕರಭಾಷ್ಯದ ಯುಕ್ತಾಯುಕ್ತತ್ವ ವಿಚಾರವನ್ನು ಮಾಡುವ ಪ್ರಕರಣದಲ್ಲಿ ಈ ವಿಚಾರವನ್ನು ಮಾಡುವೆವು.

ಶ್ರೀಮತ್ಪರಮಹಂಸೇತ್ಯಾದಿ ಸಮಸ್ತ ಬಿರುದಾಂಕಿತರಾದ
ಶ್ರೀಮತ್ಸತ್ಯಧ್ಯಾನತೀರ್ಥ ಶ್ರೀಪಾದಂಗಳವರಿಗೂ,
ಮ|| ರಾ|| ಬಾಲಗಂಗಾಧರತಿಲಕರವರಿಗು
ಬೆಳಗಾಂಜಿಲ್ಲಾ ಚಿಕ್ಕೋಡಿಯಲ್ಲಿ ಗತ ಏಪ್ರಲ್ ತಿಂಗಳಲ್ಲಿ ನಡೆದ

ಗೀತಾರಹಸ್ಯದಮೇಲ್ ವಿಚಾರದ ಸಂಗ್ರಹ.*

ಪೀಠಿಕೆ.

ಶ್ರೀ ಉತ್ತರಾದಿ ಮಠಾಧೀಶರಾದ ಶ್ರೀಮತ್ಸತ್ಯಧ್ಯಾನತೀರ್ಥರ ವರ ಸವಾರಿಯು ಗೋಕಾವಿನಲ್ಲಿರುವಾಗ ಆ ಸ್ಥಳದ ವಕೀಲರು ಮೊದಲಾದ ಪ್ರತಿಷ್ಠಿತಜನರು ಶ್ರೀ ಸ್ವಾಮಿಗಳವರ ಸನ್ನಿಧಾನದಲ್ಲಿ “ ಗೀತಾರಹಸ್ಯದಲ್ಲಿ ಮಧ್ವಮತದ ಮೇಲೆ ಹೇಳಿರುವ ದೂಷಣಗಳು ಶ್ರೀಗಳವರ ದೃಷ್ಟಿಗೆ ಬಂದಿವೆಯೆ ” ಎಂದು ಪ್ರಶ್ನೆಮಾಡಿದರು. ಶ್ರೀಗಳವರು ಆ ದೂಷಣಗಳನ್ನು ತಾವು ನೋಡಿದೇವೆ ಎಂತಲು, ಅವುಗಳು ಸರಿಯಾಗಿಲ್ಲವೆಂತಲು, ಗೀತೆಯಲ್ಲಿ ದ್ವೈತವೇ ಪ್ರತಿಪಾದ್ಯವಾಗಿದೆ ಎಂಬುದನ್ನು ಸಾಧಿಸಿಕೊಡಲು ತಾವು ಸಿದ್ಧವಿದೇವೆ ಎಂತಲು, ಬಾಗಲುಕೋಟೆ ಮೊಕ್ಕಾಮಿನಿಂದ ಮ|| ರಾ|| ತಿಲಕರವರಿಗೆ ತಿಳಿಯುವದಿಸೋಣವಾಗಿದೆ ಎಂಬದಾಗಿ ಅಪ್ಪಣೆಕೊಡಿಸಿದರು. ಆಗ, ಚಿಕ್ಕೋಡಿಸ್ಥಳಕ್ಕೆ ಮ|| ರಾ|| ತಿಲಕರವರು ಬರುವ ಸಂಭವವಿದೆ ಯಾದುದರಿಂದ ಆ ಸಮಯದಲ್ಲಿ ಚಿಕ್ಕೋಡಿಯಲ್ಲಿ ಅಥವಾ ಸಮೀಪದಲ್ಲಿರುವ ಮತ್ಯಾವ ಸ್ಥಳದಲ್ಲಿಯಾದರು, ಸಭೆಯನ್ನು ಸೇರಿಸಿ ಈ ವಿಷಯದಲ್ಲಿ ಚರ್ಚೆಯನ್ನು ನಡೆಸಬೇಕು ಎಂಬದಾಗಿ ಶ್ರೀಗಳವರ ಸನ್ನಿಧಾನದಲ್ಲಿ

---

* ಶ್ರೀ ಉತ್ತರಾದಿ ಮಠದಲ್ಲಿರುವ ಶ್ರೀ ಮ|| ಗಲಗಲಿ ರಾಮಾಚಾರ್ಯರು ಮಹಾರಾಷ್ಟ್ರಭಾಷೆಯಲ್ಲಿ ಪ್ರಚುರಿಸಿರುವುದು ಕನ್ನಡದಲ್ಲಿ ಪರಿವರ್ತಿಸಲ್ಪಟ್ಟಿದೆ.

ರಾಜಶ್ರೀ ಅಣ್ಣಾರಾವ್‌ದೇವಳೀ ಮೊದಲಾದ ದೊಡ್ಡಮನುಷ್ಯರು ವಿಜ್ಞಾಪಿಸಿ ಈ ವಿಷಯದಲ್ಲಿ ಮ॥ ರಾ॥ ತಿಲಕರವರಿಗೆ ಪತ್ರಬರೆದರು. ಅದಕ್ಕೆ ಮ॥ ರಾ॥ ತಿಲಕರವರ ಕಡೆಯಿಂದ ಬಂದ ಗತ ಏಪ್ರಿಲ್ ಮೂರನೇ ತಾರೀಖಿನ ಉತ್ತರದಲ್ಲಿ "ಚಿಕ್ಕೋಡಿಯಲ್ಲಿ ಶ್ರೀಸ್ವಾಮಿಗಳವರ ಭೇಟಿಮಾಡುವುದಕ್ಕೆ ತಮಗೇನು ಆಕ್ಷೇಪವಿಲ್ಲವೆಂಬದಾಗ್ಗಿಯು, ಆದರೆ ನೀವು ಹೇಳುವಂತೆ ದ್ವೈತಾದ್ವೈತವಿಷಯದ ವಿವಾದದಲ್ಲಿ ಯಾರನ್ನಾದರೂ ಸಮಾಧಾನನಡಿಸುತ್ತೇನೆಂಬ ನಂಬಿಕೆಯು ತಮಗಿಲ್ಲವೆಂತಲು, ಇಂತಹ ವಿಷಯಗಳು ಬಹುದಿವಸಗಳಿಂದಲು ನಿರೂಢವಾದ ಆಗ್ರಹ ಸಹಿತಗಳೆಂತಲು, ಈ ಅವಾಂತರಮತಭೇದಗಳಲ್ಲಿ ತಮಗಾಗ್ರಹವಿಲ್ಲವೆಂತಲು, ಕೇವಲ ಗೀತಾಗ್ರಂಥಕ್ಕನುಸಾರವಾಗಿ ತಾವಿದೇವೆ ಎಂತಲು, ತಾವು ಮಾಡಬಹುದಾದ ಕಾರ್ಯವು ಮಧ್ವಮತವನ್ನು ತಾವು ಅನ್ಯಥಾವರ್ಣಿಸಲಿಲ್ಲವೆಂಬುದನ್ನು ವ್ಯಕ್ತಪಡಿಸುವುದರಕಿಂತಲು ಹೆಚ್ಚಿಲ್ಲವೆಂತಲು, ಇಷ್ಟುಮಾತ್ರದಿಂದ ನಿಮಗು ನಿಮ್ಮ ಸ್ನೇಹಿತರಿಗು ಸಂತೋಷವಾಗುವ ಪಕ್ಷದಲ್ಲಿ ನಾನು ಚಿಕ್ಕೋಡಿಯಲ್ಲಿ ಶ್ರೀಸ್ವಾಮಿಗಳವರ ಸಂದರ್ಶನ ಮಾಡುವುದಕ್ಕೆ ಆಕ್ಷೇಪವಿಲ್ಲ" ಎಂಬದಾಗಿ ಕಂಡು ಬಂದಿತು.

ಅದೇ ಪ್ರಕಾರ ಶ್ರೀಗಳವರಿಗೆ ಮಹಮ್ಮದಾಪುರದ ಮೊಕ್ಕಾಮಿನಲ್ಲಿ ಈಮೇಲ್ಕಂಡ ಮಂಡಲಿಯವರು ತಿಳಿಯಪಡಿಸಲಾಗಿ ಶಿಷ್ಯಸಮೇತ ಶ್ರೀಗಳವರ ಸವಾರಿಯು ಏಪ್ರಿಲ್ ೧೦ನೇ ತಾರೀಖಿನ ದಿನ ಚಿಕ್ಕೋಡಿಗೆ ದಯಮಾಡಿಸಿತು. ಅವರ ಮರುದಿನ ಮ॥ ರಾ॥ ತಿಲಕರವರು ಅಲ್ಲಿಗೆ ಬಂದು ಸೇರಿದರು. ರಾಜಶ್ರೀ ದೇವಳೆ ಮೊದಲಾದವರ ಮಂಡಲಿಯು ಮ॥ ರಾ॥ ತಿಲಕರವರ ಭೇಟಿಮಾಡಿ ಆಸಾಯಂಕಾಲ, ತಿಲಕರವರು ಬಂದಾಗ ಯಾವ ಯಾವ ವಿಷಯಗಳ ವಾದ ನಡೆಯಬೇಕೆಂಬುದನ್ನು ವಿಜ್ಞಾಪಿಸಿ ಮರುದಿನ ಆಯಾವಿಷಯಗಳ ಚರ್ಚೆಯಾಗಬೇಕೆಂದು ಶ್ರೀಗಳವರ ಸನ್ನಿಧಾನದಲ್ಲಿ ತಿಳಿಸಿದರು. ಅದೇಪ್ರಕಾರ ಸಾಯಂಕಾಲದಲ್ಲಿ ಶ್ರೀಗಳವರು ಇಳಿದ ಮಂಟಪದಲ್ಲಿ ಸಭೆಯು ಸೇರಿತು. ಆಸಮಯದಲ್ಲಿ ಶ್ರೀಗಳವರು ಚರ್ಚೆಗಾಗಿ ಮುಂದೆ ಹೇಳಿದ ವಿಷಯಗಳನ್ನು ಅನುವಾದಮಾಡಿದುದಲ್ಲದೆ, ಇನ್ನೂ ಅನೇಕ ವಿಷಯಗಳು ವಿಚಾರಕ್ಕ

ರ್ಥವಾಗಿವೆ. ಆದರೆ ಪ್ರಕೃತಪ್ರಶ್ನದ ವಿಚಾರವು ನಡೆದ ನಂತರ ಆವಿಷಯಗಳ ವಿಚಾರ ನಡೆಯಬಹುದು ' ಎಂದು ಸೂಚಿಸಿದರು. ಅವರು ಮಾಡಿದ ಅನುವಾದವೇನೆಂದರೆ—

ಪ್ರಥಮದಿನ—' ತತ್ತ್ವಮಸಿ ' ವಾಕ್ಯವಿಚಾರ.

ಶ್ರೀ—ಗೀತಾರಹಸ್ಯದಲ್ಲಿ ' ಅಧ್ಯಾತ್ಮಪ್ರಕರಣ ' ಪುಟ—೩೦—೩೩ ರ ಮಧ್ಯದಲ್ಲಿ ಮುಂದೆ ಹೇಳುವಂತಿದೆ.

" ಉಪನಿಷತ್ತಿನಲ್ಲಿ ಅಲ್ಲಲ್ಲಿ ದ್ವೈತ ಮತ್ತು ಅದ್ವೈತದ ನಿರೂಪಣ ವಿರುವುದರಿಂದ ಈ ಎರಡು ಭಾಗಗಳಿಗು ಏಕವಾಕ್ಯತೆ ಬರುವಂತೆ ಮಾಡಬೇಕಾದುದು ನಿಜ. ಆದರೆ ಅದ್ವೈತವಾದವನ್ನು ಮುಖ್ಯ ಮಾಡಿಕೊಂಡು ' ನಿರ್ಗುಣಬ್ರಹ್ಮನು ಸಗುಣಭಾವವನ್ನು ಹೊಂದಿದಾಗ ಮಾತ್ರ ಅಷ್ಟು ಪೂರ್ತಿ ಮಾಯಿಕ ದ್ವೈತದ ಪ್ರಾಪ್ತಿಯಾಗಿರುವುದಾಗಿ ಕಾಣುತ್ತದೆ ' ಎಂದು ಅಂಗೀಕರಿಸಿದರೆ ಸರ್ವವಚನಗಳಿಗು ಹೇಗೆ ವ್ಯವಸ್ಥೆಯಾಗುತ್ತದೋ ಹಾಗೆ ವ್ಯವಸ್ಥೆಯು ದ್ವೈತಪಕ್ಷ ಮುಖ್ಯವೆಂದಂಗೀಕರಿಸಿದರೆ ಆಗುವುದಿಲ್ಲ. ಉದಾಹರಣಕ್ಕೆ ' ತತ್ತ್ವಮಸಿ ' ವಾಕ್ಯದಲ್ಲಿರುವ ಪದಗಳಿಗೆ ಅನ್ವಯವು ದ್ವೈತಮತಕ್ಕನುಸಾರವಾಗಿ ಯಾವಾಗಲು ಹೊಂದಿಕೆಯಾಗುವುದಿಲ್ಲ. ದ್ವೈತಿಗಳ ದೃಷ್ಟಿಯಲ್ಲಿ ಈ ಅನುಪಪತ್ತಿಯು ಬರಲಿಲ್ಲವೆಂತಲ್ಲ. ಆದರೆ ' ತತ್ತ್ವಂ ' ಎಂಬುದಕ್ಕೆ ' ತಸ್ಯತ್ವಂ ' ಎಂದರೆ ನಿನ್ನ ದೆಸೆಯಿಂದ ಭಿನ್ನನಾದವನಾರೋ ನೀನು ಅವನವನಾಗಿದೀ ಅವನೇ ನೀನಲ್ಲ. ಈಪ್ರಕಾರ ಕ್ಲೇಶದಿಂದ ಮಹಾವಾಕ್ಯಕ್ಕೆ ಅರ್ಥಹೇಳಿ ದ್ವೈತಿಗಳು ತಾವು ಸಮಾಧಾನಮಾಡಿಕೊಂಡಿದಾರೆ. ಆದರೆ ಸಂಸ್ಕೃತದಲ್ಲಿ ಯಾರಿಗೆ ಸ್ವಲ್ಪವಾದರೂ ಜ್ಞಾನವಿರುತ್ತದೆಯೋ ಮತ್ತು ಯಾರಬುದ್ಧಿಯು ಆಗ್ರಹದಿಂದ ಯುಕ್ತವಲ್ಲದೇ ಇರುತ್ತದೆಯೋ ಅಂತಹವರಿಗೆ ಈ ಕ್ಲಿಷ್ಟಾರ್ಥವು ಯಥಾರ್ಥವಲ್ಲವೆಂದು ತಿಳಿದು ಬರಬಹುದು " ಎಂಬದಾಗಿದೆ. (ಈ ಭಾಗವನ್ನು ಓದಿ ತೋರಿಸಿ' ಈ ನಿಮ್ಮ ಬರವಣಿಗೆಯು ಯುಕ್ತವಾಗಿಲ್ಲ. ಏಕೆ ಎಂದರೆ ' ತತ್ತ್ವಮಸಿ ' ಎಂಬ ವಾಕ್ಯವು ದ್ವೈತಮತಪ್ರಕಾರ ಹೇಗೆ ಹೊಂದುತ್ತಿದೆಯೋ ಹಾಗೆ ಅದ್ವೈತಮತಪ್ರಕಾರ ಹೊಂದುವುದಿಲ್ಲ. ಅದ್ವೈ

ತಮತದಲ್ಲಿಯೇ ಈ ವಾಕ್ಯಕ್ಕೆ ಅರ್ಥವು ಕ್ಲಿಷ್ಟವಾಗಿ ಮಾಡಲ್ಪಟ್ಟಿದೆ. ಹೇಗೆ ಎಂದರೆ—

೧—“ಸನ್ಮೂಲಾಃ ಸೌಮ್ಯೇಮಾಃ ಸರ್ವಾಃ ಪ್ರಜಾಃ ಸದಾಯತನಾಃ ಸತ್ಪ್ರತಿಷ್ಠಾಃ ಯಥಾ ನು ಖಲು ಸೋಮ್ಯೇಮಾಸ್ತಿಸ್ರೋ ದೇವತಾಃ ಪುರುಷಂ ಪ್ರಾಪ್ಯ ತ್ರಿವೃತ್ತ್ರಿವೃತ್ ಏಕೈಕಾ ಭವತಿ ತದುಕ್ತಂ ಪುರಸ್ತಾದೇವ ಭವತಿ ಅಸ್ಯ ಸೋಮ್ಯ ಪುರುಷಸ್ಯ ಪ್ರಯತೋ ವಾಙ್ಮನಸಿ ಸಂಪದ್ಯತೇ ಮನಃ ಪ್ರಾಣೇ ಪ್ರಾಣಸ್ತೇಜಸಿ ತೇಜಃ ಪರಸ್ಯಾಂ ದೇವತಾಯಾಂ ಸ ಏಷೋಽಣಿಮೈತದಾತ್ಮ್ಯಮಿದಂ ಸರ್ವಂ ತತ್ಸತ್ಯಂ ಸ ಆತ್ಮಾ ತತ್ತ್ವಮಸಿ ಶ್ವೇತಕೇತೋ ಇತಿ” ಎಂಬುದು ‘ತತ್ತ್ವಮಸಿ’ ಎಂಬ ವಾಕ್ಯವನ್ನು ಒಳಗೊಂಡಿರುವ ಭಾಗವಾಗಿದೆ. ಅದರ ಪೂರ್ವಭಾಗದ ಅರ್ಥವೇನೆಂದರೆ—ಹೇಸೋಮ್ಯ= ಎಲೈ! ಸೋಮಪಾನಾರ್ಹನೇ, ಇಮಾಃ ಸರ್ವಾಃ ಪ್ರಜಾಃ= ಈ ಸಮಸ್ತಪ್ರಜೆಗಳು, ಸನ್ಮೂಲಾಃ= ಸತ್ತೆನ್ನಿಸಿಕೊಳ್ಳುವ ಪರಮಾತ್ಮನೇ ಕಾರಣವಾಗಿವುಳ್ಳಂತಹುವು, ಸದಾಯತನಾಃ= ಸತ್ತಾದ ಪರಮಾತ್ಮನೇ ಆಶ್ರಯವಾಗಿವುಳ್ಳಂತಹುವು, ಸತ್ಪ್ರತಿಷ್ಠಾಃ= ಸತ್ತಾದ ಪರಮಾತ್ಮನೇ ಸ್ಥಾಪಕನಾಗಿವುಳ್ಳಂತಹುವು, ಇತ್ಯಾದಿ ರೂಪವಾಗಿದೆ. ಈ ಪೂರ್ವವಾಕ್ಯಗಳಿಂದ ಪರಮಾತ್ಮನಿಗು ಸರ್ವಪ್ರಜರಿಗು ಕಾರಣ ಕಾರ್ಯಭಾವವು, ಆಶ್ರಯಾಶ್ರಯಿಭಾವವು, ಸ್ಥಾಪಕ ಸ್ಥಾಪ್ಯಭಾವವು, ಉಕ್ತವಾಗಿರುವುದರಿಂದ ಅವರುಗಳಿಗೆ ಭೇದವೇ ಸಿದ್ಧವಾಗುತ್ತದೆ. ಈ ಪ್ರಕಾರ ಪೂರ್ವವಾಕ್ಯದಲ್ಲಿ ಪರಮಾತ್ಮನಿಗು, ಸರ್ವಜೀವರಿಗು ಸ್ಪಷ್ಟವಾಗಿ ಭೇದವರ್ಣಿತವಾಗಿರಲಾಗಿ ಒಂದುವೇಳೆ ಶ್ವೇತಕೇತುವಿಗೆ ‘ತತ್ತ್ವಮಸಿ’ ಎಂಬ ವಾಕ್ಯದಿಂದ ಐಕ್ಯವು ಪ್ರತಿಪಾದಿಸಲ್ಪಟ್ಟದೆ ಎಂದು ಒಪ್ಪಬಹುದಾಗಿದ್ದರೂ, ಸರ್ವಜೀವರಿಗು ಪರಮಾತ್ಮನಿಗು ಐಕ್ಯವು ಹೇಗೆ ಸಿದ್ಧವಾಗುತ್ತದೆ? ಹೇಗೆ ರಾಮಕೃಷ್ಣಾದಿಗಳು ಪರಮಾತ್ಮನ ಅವತಾರರಾದುದರಿಂದ ಪರಮಾತ್ಮನಿಂದ ಅಭಿನ್ನರಾಗಿದಾರೋ ಹಾಗೆ ಶ್ವೇತಕೇತುವುಕೂಡ ಈಶ್ವರಾವತಾರನಾದಕಾರಣ ಪರಮಾತ್ಮನಿಂದ ಅಭಿನ್ನನಾಗಿದಾನೆ ಎಂದು ಹೇಳಬಹುದು. ಹೀಗೆ ಶ್ವೇತುವಿಗು ಪ

ಮಾತ್ಮನಿಗು ಅಭೇದವನ್ನು ಒಪ್ಪುವ ಮಾತ್ರದಿಂದ ಸರ್ವಜೀವರು ಪರಮಾತ್ಮನಿಂದ ಭಿನ್ನರಲ್ಲ ; ಅಭಿನ್ನರಾಗಿದಾರೆ ಎಂಬುದು ಹೇಗೆ ಸಿದ್ಧಿಸುತ್ತದೆ.

೨—ಮತ್ತೊಂದು ರೀತಿಯಿಂದ 'ತತ್ತ್ವಮಸಿ' ವಾಕ್ಯಕ್ಕೆ ಅರ್ಥವನ್ನು ಹೇಳಬಹುದು. 'ಸ ಆತ್ಮಾ ತತ್ತ್ವಮಸಿ' ಎಂಬ ವಾಕ್ಯದಲ್ಲಿ 'ಆತ್ಮಾ + ಅತತ್ + ತ್ವಂ + ಅಸಿ' ಎಂದು ಪದಚ್ಛೇದವಾಗುತ್ತದೆ. ಹೀಗಿರಲಾಗಿ ಈ ವಾಕ್ಯಕ್ಕೆ ಪೂರ್ವೋಕ್ತ ಮಾಹಾತ್ಮ್ಯವಂತನು ಪರಮಾತ್ಮನು. ನೀನು ಅವನಿಂದ ಭಿನ್ನನಾಗಿದೀ, ಎಂಬುದಾಗಿ ಕ್ಲೇಶವಿಲ್ಲದೇ ಅರ್ಥವಾಗುತ್ತದೆ.

೩—ಅಥವಾ, ಮತ್ತೊಂದು ರೀತಿಯಿಂದ ಈ ಮಹಾವಾಕ್ಯಕ್ಕೆ ಉಪಪತ್ತಿಯಾಗುತ್ತದೆ. ಈ ವಾಕ್ಯದಲ್ಲಿರುವ 'ತತ್' ಎಂಬ ಪದಕ್ಕೆ ಏಳುವಿಭಕ್ತಿಗಳ ಅರ್ಥಗಳನ್ನೂ ಹೇಳಬಹುದು. ಕಾರಣವೇನೆಂದರೆ--ವೈದಿಕವ್ರಕರಣದಲ್ಲಿ 'ಸುಪಾಂಸುಲುಕ್ಪೂರ್ವಸವರ್ಣ' ಎಂಬ (ಅ೭. ಪಾ೧. ಸೂ೩೯) ಪಾಣಿನಿಯ ಸೂತ್ರವಿದೆ. ಇದರಿಂದ ಕೆಲವೆಡೆಗಳಲ್ಲಿ ವಿಭಕ್ತಿಗೆ ಲೋಪವು, ಅಥವಾ ಸರ್ವವಿಭಕ್ತಿಗಳಿಗು ಸುವಿಭಕ್ತಿ ಬಂದು ಅದಕ್ಕೆ 'ಸ್ವಮೋರ್ಲುಕ್' ಎಂಬ ಸೂತ್ರದಿಂದ ಲೋಪವಾಗುತ್ತದೆ. ಈ ಪ್ರಕಾರ ಈ ವಾಕ್ಯದಲ್ಲಿರುವ ತತ್ಪದೋತ್ತರದಲ್ಲಿರುವ ವಿಭಕ್ತಿಗೆ ಲೋಪವಾಗಿದೆ ಎಂದೊಪ್ಪಬೇಕು. ಅಥವಾ 'ತತ್' ಎಂಬುದು ವಿಭಕ್ತಿಪ್ರತಿರೂಪಕವಾದ ಅವ್ಯಯವೆಂದೊಪ್ಪಿದರೂಕೂಡ 'ತತ್' ಎಂಬ ಶಬ್ದಕ್ಕೆ ಮುಖ್ಯಾರ್ಥವು 'ಅವನಲ್ಲಿ' ಎಂಬುದಾಗಿಯು, ಆಗುತ್ತದೆಂಬುದಕ್ಕೆ ಏನೂ ಬಾಧಕವಿಲ್ಲ. ಈ ಅರ್ಥವು ಪೂರ್ವೋಕ್ತವಾದ ವ್ಯಾಕರಣಸೂತ್ರಕ್ಕೆ ಅನುಸರಿಸಿದ್ದಾಗಿದೆ.

೧—ಈಗ 'ತತ್' ಎಂಬುದಕ್ಕೆ 'ತಸ್ಮಿನ್ ಅವನಲ್ಲಿ' ಎಂಬ ಅರ್ಥವು ಹೇಗೆ ಹೊಂದುತ್ತದೋ ನೋಡಿರಿ? ಪೂರ್ವದಲ್ಲಿ 'ಸದಾಯತನಾಃ' ಎಂಬುದು ಪ್ರಜಾವಿಶೇಷಣವಾಗಿತ್ತಷ್ಟೆ. ಅದಕ್ಕೆ ಪರಮಾತ್ಮನು ಸರ್ವಪ್ರಜರಿಗು ಆಶ್ರಯನೆಂಬುದಷ್ಟೆ ಅರ್ಥವು. ಅದೇ ಅರ್ಥವು ತತ್ತ್ವಮಸಿ ಎಂಬವಾಕ್ಯದಲ್ಲಿಯು, ಪರಮಾತ್ಮನಲ್ಲಿ ನೀನಿದೀಯೆ

ಎಂಬವಾಗಿ ಪ್ರತಿಪಾದಿಸಲ್ಪಡುವುವು. ಈ ಅರ್ಥವು ಸರಳವಾಗಿಯೂ ಪೂರ್ವವಾಕ್ಯ ಸಂಬದ್ಧವಾಗಿಯೂ ಇದೆಯಲ್ಲವೇ.

೨—'ತತ್' ಎಂಬುದಕ್ಕೆ 'ತಸ್ಮಾತ್' ಎಂದು ಪಂಚಮಿಯ ಅರ್ಥವು 'ಅವನ ದೆಸೆಯಿಂದ ನೀನು ಆಗಿದಿ' ಎಂದು ಹೊಂದುತ್ತದೆ.

(ಈಗ ರಾ|| ಶ್ರೀ|| ಪರಂಜಪೆಯವರು ಶಂಕಿಸಿದರು.)

ಪರಂಜಪೆ—ಕಿಮಸಿ= ಏನು ಆಗಿದಿ?

ಶ್ರೀ—ಜಾತೋಸಿ= ಉತ್ಪನ್ನನಾಗಿದೀ?

ಪರಂ—ಉಪನಿಷತ್ತಿನಲ್ಲಿ ಜಾತಪದವಿಲ್ಲವಾದುದರಿಂದ ಅಧ್ಯಾಹಾರ ಮಾಡಬೇಕಾಗುತ್ತದೆ.

ಶ್ರೀ—ಪೂರ್ವದಲ್ಲಿ 'ಸನ್ಮೂಲಾಃ ಸರ್ವಾಃ ಪ್ರಜಾಃ' ಎಂದು ಪರಮಾತ್ಮನ ಕಡೆಯಿಂದ ಸರ್ವಪ್ರಜರೂ ಉತ್ಪನ್ನರಾಗುತ್ತಾರೆ ಎಂಬುದಾಗಿ ಉಕ್ತವಾಗಿರುವುದರಿಂದ ಇಲ್ಲಿಯೂ ಜಾತಪದಕ್ಕೆ ಅಧ್ಯಾಹಾರವು ಸಹಜವಾಗಿ ತೋರುತ್ತದೆ. ಹೇಗಾದರೆ 'ಗಚ್ಛಾಮಿ= ಹೋಗುತ್ತೇನೆ' ಎಂದರೆ, 'ಅಹಂ= ನಾನು' ಎಂಬ ಪದವು ಲಬ್ಧವಾಗುತ್ತದೋ ಹಾಗೆ. ಅಥವಾ 'ಸತ್ಪ್ರತಿಷ್ಠಾಃ' ಎಂಬ ಪೂರ್ವೋಕ್ತವಾದ ವಿಶೇಷಣಕ್ಕನುಸಾರವಾಗಿ 'ತತ್ತ್ವಮಸಿ' ಎಂಬವಾಕ್ಯಕ್ಕೆ 'ತತ್= ತಸ್ಮಾತ್, ಅಸಿ= ವಿದ್ಯಸೆ, ಅವನ ಸಂಬಂಧದಿಂದ ನೀನು ಇದೀಯೋ' ಎಂದು ಅರ್ಥಮಾಡಬಹುದು. ಈ ಪಕ್ಷದಲ್ಲಿ ಜಾತಪದಕ್ಕಾಗಲಿ ಮತ್ತಾವ ಪದಕ್ಕಾಗಲಿ ಅಧ್ಯಾಹಾರದ ಆವಶ್ಯಕತೆಯಿಲ್ಲ. ಮೇಲೆ ಹೇಳಿದ ಪ್ರಕಾರ ಸರ್ವಅರ್ಥಗಳು ದ್ವೈತಮತಕ್ಕೆ ಪೋಷಕವಾಗಿರುವುದರಿಂದ ದ್ವೈತವೇ ಮುಖ್ಯವು. ಪೂರ್ವಸಂದರ್ಭಗಳನ್ನು ಹಿಡಿದು 'ತತ್ತ್ವಮಸಿ' ವಾಕ್ಯಕ್ಕೆ ಮುಖ್ಯವೃತ್ತಿಯಿಂದ ಅದ್ವೈತವು ಅರ್ಥವೆಂದು ನಿರೂಪಿಸಲು ಸಾಧ್ಯವಾಗುವುದೇ ಇಲ್ಲ.

ಅದ್ವೈತಮತದಲ್ಲಿ 'ತತ್ತ್ವಮಸಿ' ವಾಕ್ಯದಲ್ಲಿರುವ ತತ್ಛಬ್ದವು ಸರ್ವನಾಮವಾದುದರಿಂದ ಪೂರ್ವದಲ್ಲಿ ಪ್ರಸಕ್ತವಾದ ವಸ್ತುವಿಗೆ ಬೋಧಕವಾಗುತ್ತದೆ. ಪೂರ್ವದಲ್ಲಾದರೋ ಜಗತ್ಕರ್ತೃತ್ವಾದಿಗುಣವಿಶಿಷ್ಟವಾದ ಬ್ರಹ್ಮಚೈತನ್ಯವು ಪ್ರಸಕ್ತವಾಗಿರುವುದರಿಂದ ಅದೇ

ತತ್ಪದದಿಂದ ಗ್ರಹಿಸಲ್ಪಡಬೇಕು. ‘ತ್ವಂ’ ಪದದಿಂದ ಸಂಬೋಧ್ಯನಾದ ಅಸರ್ವಜ್ಞನು ಅಂತಃಕರಣಾವಚ್ಛಿನ್ನ ಚೈತನ್ಯರೂಪನೂ ಆದ ಶ್ವೇತಕೇತುವೆಂಬುವ ಜೀವನಬೋಧವಾಗುತ್ತದೆ. ಹಾಗಾಗುವಲ್ಲಿ ಸರ್ವಜ್ಞ ಮತ್ತು, ಕಿಂಚಿಜ್ಜ್ಞ ಇವರಿಗೆ ಅಭೇದ ಹೇಗೆ ಕೂಡೀತು ಎಂದು ಜಹದಜಹಲ್ಲಕ್ಷಣಾವೃತ್ತಿಯಿಂದ ಮುಖ್ಯಾರ್ಥವನ್ನು ಬಿಟ್ಟು ಗೌಣಾರ್ಥವೆಂದರೆ ಸರ್ವಜ್ಞತ್ವಕಿಂಚಿಜ್ಜ್ಞತ್ವವೆಂಬ ವಿಶೇಷಣಗಳನ್ನು ಬಿಟ್ಟು ‘ತತ್, ತ್ವಂ’ ಎಂಬ ಎರಡುಪದಗಳಲ್ಲಿಯೂ ಲಕ್ಷ್ಯಾರ್ಥವನ್ನು ಎಂದರೆ ಚೈತನ್ಯಮಾತ್ರವನ್ನು ಗ್ರಹಿಸಿ ಐಕ್ಯವನ್ನು ಹೇಳಿದಾರೆ.

ಮತ್ತು ಶ್ರುತಿಗೆ ಮುಖ್ಯಾರ್ಥವನ್ನು ಬಿಟ್ಟು ಆ ಮುಖ್ಯಾರ್ಥವನ್ನು ಅದ್ವೈತಿಗಳು ಅಂಗೀಕರಿಸುವ ಪಕ್ಷದಲ್ಲಿ ನಾವು ಕೂಡ ‘ತತ್ತ್ವಮಸಿ’ ಎಂಬವಾಕ್ಯಕ್ಕೆ ನೀನು ತತ್ಸದೃಶನಾಗಿದ್ದೀಯೆ, ತದಧೀನನಾಗಿದ್ದೀಯೆ ಎಂದು ಅಮುಖ್ಯಾರ್ಥವನ್ನು ಏಕೆ ಹೇಳಬಾರದು? ಅಮುಖ್ಯಾರ್ಥವನ್ನು ಅದ್ವೈತಪಕ್ಷದಲ್ಲಿ ಗ್ರಹಿಸಬಹುದು, ದ್ವೈತಪಕ್ಷದಲ್ಲಿ ಗ್ರಹಿಸಕೂಡದೆಂಬುದಾಗಿ ರಾಜಾಜ್ಞೆ ಇರುವುದಿಲ್ಲ.

ಮೇಲೆ ಹೇಳಿದ ಸರ್ವ ವಿವೇಚನಗಳಿಂದ ಈ ಮಹಾವಾಕ್ಯಕ್ಕೆ ಮುಖ್ಯಾರ್ಥವು ದ್ವೈತಪಕ್ಷದಲ್ಲಿ ಸಂಗತವಾಗಿರುವುದರಿಂದ “ಈ ಅಪಾರ್ಥವು ಸರಿಯಲ್ಲ ಎಂದು ಸಂಸ್ಕೃತದಲ್ಲಿ ಸ್ವಲ್ಪಜ್ಞಾನವಿದ್ದವನಿಗೂ ಕೂಡ ತೋರಬಹುದು” ಎಂದು ತಾವು ಹೇಳುವುದು ಯುಕ್ತವಲ್ಲವೆಂದು ನಮಗೆ ಕಾಣುತ್ತದೆ.

ತಿಲಕರು—ತಮ್ಮ ಮತಪ್ರಕಾರ ‘ತತ್’ ಎಂಬ ಶಬ್ದಕ್ಕೆ ‘ತಸ್ಮಾತ್’ ಅಥವಾ ‘ತಸ್ಮಿನ್’ ಎಂದು ಅರ್ಥಮಾಡುವುದು ಸರಳವಾಗಿ ತೋರುವುದಿಲ್ಲ. ‘ತತ್, ತ್ವಂ, ಅಸಿ’ ಈ ವಾಕ್ಯದಲ್ಲಿ ‘ತತ್’ ಮತ್ತು ‘ತ್ವಂ’ ಈ ಎರಡು ಪದಗಳ ವಿಭಕ್ತಿಯು ಪ್ರಥಮೆಯಾಗಿರುವುದರಿಂದ ಐಕ್ಯವನ್ನಂಗೀಕರಿಸುವಲ್ಲಿ ಅರ್ಥ ಸರಳವಾಗುತ್ತದೆ. ತಮ್ಮ ಮತಪ್ರಕಾರ ವಿಭಕ್ತಿಗೆ ವ್ಯತ್ಯಾಸ ಮಾಡಬೇಕಾಗುತ್ತದೆ.

ಶ್ರೀ—ನಿಮ್ಮ ಮತಪ್ರಕಾರ ‘ತತ್, ತ್ವಂ’ ಈ ಎರಡು ಪದಗಳಿಗೂ ಮುಖ್ಯಾರ್ಥ ಬಿಟ್ಟು ಅಮುಖ್ಯಾರ್ಥವನ್ನು ಗ್ರಹಿಸಬೇಕಾಗು

ತ್ತದೆ. ನಮ್ಮ ಮತದಲ್ಲಿ ಎರಡು ಪದಗಳಿಗೂ ಮುಖ್ಯಾರ್ಥವನ್ನು ಬಿಡಬೇಕಾದ ಅವಶ್ಯಕತೆಯಿಲ್ಲ. ತತ್ಪದೋತ್ತರದಲ್ಲಿರುವ ವಿಭಕ್ತಿಗೆ ವ್ಯಾಕರಣ ನಿಯಮಪ್ರಕಾರ ಆಗುವ ಅನೇಕ ವಿಭಕ್ತ್ಯರ್ಥಗಳ ಮಧ್ಯದಲ್ಲಿ ನಾವು ಪಂಚಮಿಯಾ ಅಥವಾ ಸಪ್ತಮಿಯಾ ವಿಭಕ್ತಿಯ ಅರ್ಥವನ್ನು ಪೂರ್ವವಾಕ್ಯಗಳ ಸಂದರ್ಭವನ್ನು ಅನುಸರಿಸಿ ಯಾವ ಪದಕ್ಕೂ ಮುಖ್ಯಾರ್ಥವನ್ನು ಬಿಡದೇ ಹೇಳುತ್ತೇವೆ. ಹಾಗಾಗುವಲ್ಲಿ ಸರಳಾರ್ಥವಾವುದೋ ಮತ್ತು ಕ್ಲೇಶಪಟ್ಟು ವ್ಯತ್ಯಾಸದಿಂದ ಮಾಡಿದರ್ಥವಾವುದೋ ಇದನ್ನು ವಿದ್ವಾಂಸರು ತಿಳಿಯಬಹುದು.

...ನೆಯ ವಿಷಯ

ಶ್ರೀ—"ಶ್ರೀಮಧ್ವಾಚಾರ್ಯರವರು ತಮ್ಮ ಗೀತಾಭಾಷ್ಯದಲ್ಲಿ ಹೇಳಿರುವುದೇನೆಂದರೆ—ನಿಷ್ಕಾಮ ಕರ್ಮದ ವಿಷಯವು ಗೀತೆಯಲ್ಲಿ ವರ್ಣಿಸಲ್ಪಟ್ಟಿದ್ದರೂ, ನಿಷ್ಕಾಮಕರ್ಮವು ಸಾಧನವಾದ ಕಾರಣ ಕೊನೆಗೆ ಭಕ್ತಿಯು ಮುಖ್ಯವಾಗಿರುತ್ತದೆ. ಭಕ್ತಿಯುಂಟಾದ ಮೇಲೆ ಕರ್ಮಮಾಡಿದರೂ, ಮಾಡದೇ ಇದ್ದರೂ, ಏನೂ ವಿಶೇಷವಿಲ್ಲ. "ಧ್ಯಾನಾತ್ಕರ್ಮಫಲತ್ಯಾಗಃ"—ಪರಮೇಶ್ವರನ ಧ್ಯಾನವೆಂದರೆ ಭಕ್ತಿಯಕಿಂತಲು, ಕರ್ಮಫಲತ್ಯಾಗವೆಂದರೆ—ನಿಷ್ಕಾಮಕರ್ಮವು ಶ್ರೇಷ್ಠವೆಂಬುದು ಮೊದಲಾದ ಗೀತಾವಚನಕ್ಕೆ ಈ ಸಿದ್ಧಾಂತವು ವಿರುದ್ಧವಾಗಿದೆ. ಆದರೆ ಅದು ಅಕ್ಷರಶಃ ಸರಿಯಲ್ಲವಾದ ಕಾರಣ ಅರ್ಥವಾದವೆಂದು ತಿಳಿಯಬೇಕು. ಎಂಬುದಾಗಿ ಗೀತೆಯ ಮಾಧ್ವಭಾಷ್ಯದಲ್ಲಿ ಬರೆದಿದೆ. (ಗೀತಾ, ಮಾಧ್ವ, ಭಾ. ೧೨, ೧೨)" ಎಂಬ ಗೀತಾರಹಸ್ಯದ ವಿಷಯ ಪ್ರವೇಶದಲ್ಲಿ ೧೬, ೧೭ ಪತ್ರಗಳಲ್ಲಿರುವ ಈ ಭಾಗವನ್ನು ಓದಿ ತೋರಿಸಿ,—

'ಕರ್ಮ ಮಾಡಿದರೇನು, ಮಾಡದಿದ್ದರೇನು, ಇದರಲ್ಲಿ ವಿಶೇಷವಿಲ್ಲ' ಎಂದು ನಮ್ಮ ಆಚಾರ್ಯರು ಹೇಳಿರುವುದಿಲ್ಲ. "ಧ್ಯಾನಾತ್ಕರ್ಮಫಲತ್ಯಾಗಃ" ಎಂಬ ಶ್ಲೋಕದಲ್ಲಿ 'ಧ್ಯಾನಾತ್' ಎಂಬ ಶಬ್ದಕ್ಕೆ

‘ಭಕ್ತಿಯಕಿಂತಲೂ,’ ಎಂದು ಅರ್ಥವಾಗುವುದಿಲ್ಲ. ತಾವು ಈ ಶ್ಲೋಕಕ್ಕೆ ವ್ಯಾಖ್ಯಾನ ಮಾಡುವ ಸಮಯದಲ್ಲಿ ಧ್ಯಾನ ಶಬ್ದಕ್ಕೆ ಅರ್ಥ ‘ಭಕ್ತಿಯು’ ಎಂಬುದಾಗಿ ಮಾಡಲಿಲ್ಲ. ನಾವ್ಯಾರೂ ಮಾಡಲಿಲ್ಲ. ಈ ಕಾರಣದಿಂದ ಗೀತೆಗೆ ಈ ಸಿದ್ಧಾಂತದ ನಮ್ಮ ಮತವು ಹೇಗೆ ವಿರುದ್ಧವಾಗುತ್ತದೆ? “ಅಪತಿ ಇದು (ವಚನ) ಅಕ್ಷರಶಃ ಸರಿಯಲ್ಲವಾದ ಕಾರಣ ಅರ್ಥವಾದಾತ್ಮಕವೆಂದು ತಿಳಿಯಬೇಕು” ಎಂಬುದಾಗಿ ಆ ಚಾರ್ಯರು ಹೇಳಿದಾರೆ ಎಂದು ಯಾವ ವಿಧಾನವನ್ನು ತಾವು ಮಾಡಿದೀರೋ ಅದು ಯುಕ್ತವಾಗಿಲ್ಲ. ಆಚಾರ್ಯರ ಬರವಣಿಗೆಯ ಉದ್ದೇಶವು “ಧ್ಯಾನಾತ್ಕರ್ಮಫಲತ್ಯಾಗಃ” ಎಂಬ ಗೀತಾವಾಕ್ಯಕ್ಕೆ ತೋರುವ ಅರ್ಥ ಸರಿಯಲ್ಲವೆಂದು ಹೇಳುವುದಾಗಿಲ್ಲವಾದ ಕಾರಣ, ಆ ವಾಕ್ಯದ ಅರ್ಥವು ಕೇವಲ ಧ್ಯಾನದಕಿಂತಲು ಕರ್ಮಫಲತ್ಯಾಗದಿಂದ ಯುಕ್ತವಾದ ಧ್ಯಾನವು ಶ್ರೇಷ್ಠವೆಂದು ಹೇಳುವುದಕ್ಕಾಗಿದೆ.

೩ನೆಯ ವಿಷಯ

ಶ್ರೀ—ಅದ್ವೈತಮತವನ್ನು ಒಪ್ಪಿದ ಪಕ್ಷದಲ್ಲಿ ಕರ್ಮಯೋಗವು ಹೊಂದುವುದಿಲ್ಲ. ತಮ್ಮ ಗೀತಾರಹಸ್ಯದ ಮಧ್ಯದಲ್ಲಿ ಅದ್ವೈತಮತವನ್ನು ಅಂಗೀಕರಿಸಿ ಕರ್ಮಯೋಗವನ್ನು ಅಂಗೀಕರಿಸಿರೋಣವಾಗಿದೆ. ಇದು ಯುಕ್ತವಲ್ಲ. ಅದ್ವೈತಮತ ಯುಕ್ತವೇ ಅಥವಾ ಅಯುಕ್ತವೇ ಎಂಬ ವಿಚಾರವು ಬೇರೆ. ಆದರೆ ತಮಗೆ ಕರ್ಮಯೋಗವು ಮಾನ್ಯವಾದರೆ ಅದ್ವೈತವನ್ನು ಬಿಡಿ. ಅದ್ವೈತಮಾನ್ಯವಾದರೆ ಕರ್ಮಯೋಗವನ್ನು ಬಿಡಿ. ಪರಸ್ಪರ ವಿರುದ್ಧವಾದ ಎರಡರನ್ನು ಒಪ್ಪುವುದು ಯೋಗ್ಯವಲ್ಲ. “ಬ್ರಹ್ಮಸತ್ಯಂ ಜಗನ್ಮಿಥ್ಯಾ” ಎಂದು ಅದ್ವೈತಮತವಿರುವುದರಿಂದ ‘ಬ್ರಹ್ಮ ಒಂದೇ ಸತ್ಯವು, ಉಳಿದ ಕ್ರಿಯಾಲೋಕಾದಿಗಳು (ಉಪಕಾರಾದಿಕ್ರಿಯಾ, ಉಪಕಾರಿಯಾದ ಲೋಕ) ಸರ್ವಜಗತ್ತು ಬ್ರಹ್ಮನಲ್ಲಿ ಅಜ್ಞಾನದಿಂದ ಶುಕ್ತಿಯಲ್ಲಿ ಕಲ್ಪಿತವಾದ ರಜತದಂತೆ ಕಾಣುತ್ತದೆ. ಬ್ರಹ್ಮನ ಜ್ಞಾನವು ಉದಯಿಸಿದ ನಂತರ ಕಲ್ಪಿತವಾದ ಜಗತ್ತೆಲ್ಲವು ರಜತದಂತೆ ನಿವೃತ್ತವಾಗುತ್ತದೆ, ಎಂದರೆ ಬ್ರಹ್ಮಜ್ಞಾ

ನವಾದ ಮೇಲೆ ಯಾವ ಪದಾರ್ಥವೂ ಕಾಣುವುದಿಲ್ಲವಾದ ಕಾರಣ ಯಾರಿಗೆ ಶುಶ್ರೂಷೆಯನ್ನು ಮಾಡಬೇಕು ? ಯಾಗಾದಿಕರ್ಮವನ್ನು ಹೇಗೆ ಮಾಡಬೇಕು ? ಲೋಕೋಪಕಾರ ಹೇಗೆ ಮಾಡಬೇಕು ? ಸ್ವಪ್ನ ಮಧ್ಯದಲ್ಲಿ ಕಾಣುವ ಶಿಶುವು ಜಾಗ್ರದವಸ್ಥೆಯಲ್ಲಿ ಕಾಣದೇ ಇದ್ದರೂ ಆ ಶಿಶುವಿಗೆ ಸ್ನಾನ ಭೋಜನಾದಿಗಳನ್ನು ಮಾಡಿಸುವುದು ಹೇಗೆ ಕೂಡುವುದಿಲ್ಲವೋ ಹಾಗೆಯೇ ಅದ್ವೈತಪಕ್ಷದಲ್ಲಿ ಬ್ರಹ್ಮಜ್ಞಾನಾನಂತರ ಕರ್ಮಯೋಗವು ಕೂಡುವುದಿಲ್ಲ.

೪ನೆಯ ವಿಷಯ

ಶ್ಲೋ — ‘‘ಯಜ್ಞಾರ್ಥಾತ್ಕರ್ಮಣೋಽನ್ಯತ್ರ ಲೋಕೋಽಯಂ ಕರ್ಮಬಂಧನಃ । ತದರ್ಥಂ ಕರ್ಮ ಕೌಂತೇಯ ಮುಕ್ತಸಂಗಃ ಸಮಾಚರ ’’ ಗೀ. ೩. ೯.

ಈ ಶ್ಲೋಕದ ವ್ಯಾಖ್ಯಾನ ಮಧ್ಯದಲ್ಲಿ

‘‘ಯಜ್ಞಕ್ಕಾಗಿ ಯಾವ ಕರ್ಮವು ಮಾಡಲ್ಪಡುತ್ತದೋ ಅದನ್ನು ಬಿಟ್ಟು ಇತರ ಕರ್ಮವು ಲೋಕಕ್ಕೆ ಬಂಧಕವಾಗಿದೆ. ಅದಕ್ಕಾಗಿ ಎಂದರೆ ಯಜ್ಞಾರ್ಥ (ಮಾಡಬೇಕಾದ) ಕರ್ಮವನ್ನು (ಸಹಿತ) ನೀನು ಫಲಾಸಕ್ತಿರಹಿತನಾಗಿ ಮಾಡುತ್ತಾ ಬಾ. ’’ ಹೀಗೆ ಬರೆದು ಮುಂದೆ ಅಭಿಪ್ರಾಯ ಬರಿಯುವಾಗ ‘‘ಯಜ್ಞ ಎಂದರೆ ವಿಷ್ಣುವು’’ ಎಂದು ಗೌಣಾರ್ಥ ಮಾಡಿ ಯಜ್ಞಾರ್ಥ ಎಂದರೆ ವಿಷ್ಣುಪ್ರೀತ್ಯರ್ಥ ಅಥವಾ ಪರಮೇಶ್ವರಾರ್ಪಣ ಪೂರ್ವಕ ಎಂಬುದಾಗಿ ಯಾವ ಅರ್ಥಮಾಡುತ್ತಾರೋ ಅದು ನಮ್ಮ ಮತದಲ್ಲಿ ವ್ಯತ್ಯಸ್ತವಾಗಿದೆ. ಮತ್ತು ಕ್ಲಿಷ್ಟವಾಗಿದೆ’’ ಎಂದು ತಾವು ಬರದಿದ್ದೀರಿ. ಆದರೆ ಅದು ಯುಕ್ತವಾಗಿ ಕಾಣುವುದಿಲ್ಲ. ಏಕೆ ಎಂದರೆ—

‘‘ಯಜ್ಞೋ ಯಜ್ಞಪತಿರ್ಯಜ್ವಾ ಯಜ್ಞಾಂಗೋ ಯಜ್ಞವಾಹನಃ । ’’ (ವಿಷ್ಣುಸಹಸ್ರನಾಮ), ‘‘ಯಜ್ಞೋ ವಿಷ್ಣುರ್ದೇವತಾ’’ (ಶ್ರುತಿ), ‘‘ಯಜ್ಞೇನ ಯಜ್ಞಮಯಜಂತ’’ (ಪುರುಷಸೂಕ್ತ)

ಇವು ಮೊದಲಾದ ಅನೇಕ ಸ್ಥಳಗಳಲ್ಲಿ ಯಜ್ಞಶಬ್ದಕ್ಕೆ ಪರಮಾತ್ಮ ಬೋಧಕತ್ವವು ಇರುವುದರಿಂದ ಯಜ್ಞ ಶಬ್ದದಿಂದ ಪರಮಾತ್ಮನೆಂಬ ಅರ್ಥವನ್ನು ಗ್ರಹಿಸಿದರೆ ಅದು ಅಮುಖ್ಯಾರ್ಥವಾಗುವುದಿಲ್ಲ.

ತಿ—ವಿಷ್ಣುಸಹಸ್ರನಾಮ ಮಧ್ಯದಲ್ಲಿ ಯಜ್ಞ ಶಬ್ದವು ಪರಮಾತ್ಮಬೋಧಕವಾಗಿದ್ದರೂ ಕೂಡ ಆ ಅರ್ಥವನ್ನು ಇಲ್ಲಿ ಗ್ರಹಿಸುವುದು ಸರಿಯಲ್ಲ. “ ಯಜ್ಞೇನ ಯಜ್ಞಮಯಜಂತ ” ಎಂಬ ಸ್ಥಳದಲ್ಲಿ ಯಜ್ಞಶಬ್ದವು ಪರಮಾತ್ಮ ಬೋಧಕವೇ ಅಲ್ಲ.

ಶ್ರೀ—ಯಜ್ಞಶಬ್ದಕ್ಕೆ ವಿಷ್ಣುವೇ ಮುಖ್ಯಾರ್ಥವೆಂದಿಲ್ಲವೇ ? ಹೀಗೆ ವಿಷ್ಣುವು ಮುಖ್ಯಾರ್ಥವಾಗಿರಲಾಗಿ ಗೌಣಾರ್ಥವೆಂದು ಬರೆದಿರುವುದು ಹೇಗೆ ಕೂಡುತ್ತದೆ. ಆದರೆ ಇಲ್ಲಿ ಆ ಅರ್ಥವನ್ನು ಗ್ರಹಿಸುವುದು ಸರಿಯಲ್ಲ ಎಂದು ಬರಿಯಬೇಕಾಗಿತ್ತು. ವಾಸ್ತವವಾಗಿ ಈ ಸ್ಥಳದಲ್ಲಿ ಯಜ್ಞಶಬ್ದಕ್ಕೆ ವಿಷ್ಣುವೇ ಅರ್ಥವೆಂದು ಗ್ರಹಿಸುವುದು ಯುಕ್ತವಾಗಿದೆ. ತಾವು ಬರೆದಿರುವ ಅರ್ಥವು ಸರಿಯಲ್ಲ. ಕಾರಣವೇನೆಂದರೆ—

“ಯಜ್ಞನಿಮಿತ್ತವಾಗಿ ಯಾವದಾದರೊಂದು ಕರ್ಮವನ್ನು ಮಾಡಬೇಕಾಗುತ್ತದೋ ಅದನ್ನು ಬಿಟ್ಟು ಬೇರೆ ಯಾವದಾದರೂ ಒಂದು ಕರ್ಮವನ್ನು ಮಾಡಿದರೆ ಮನುಷ್ಯನು ಕರ್ಮಬಂಧದಲ್ಲಿ ಸಿಕ್ಕುತ್ತಾನೆಯೆ ಏನು ? ” ಎಂದು ಈ ಸ್ಥಳದಲ್ಲಿ ಪ್ರಶ್ನೆ ಹುಟ್ಟುತ್ತವೆ. ಏಕೆ ಎಂದರೆ—ಯಜ್ಞವೆಂಬುವುದು ಒಂದು ಕರ್ಮವಾಗಿದೆ. ಮತ್ತು ಅದಕ್ಕೆ ಸ್ವರ್ಗಪ್ರಾಪ್ತಿರೂಪವಾದ ಶಾಸ್ತ್ರೋಕ್ತವಾದ ಫಲವು ಲಭಿಸದೇ ಇರುವುದಿಲ್ಲ. ಆದರೆ ಸ್ವರ್ಗಪ್ರಾಪ್ತಿಯೆಂಬ ಈ ಫಲವು ಮೋಕ್ಷಪ್ರಾಪ್ತಿಗೆ ವಿರುದ್ಧವಾಗಿದೆ ಎಂಬುದಾಗಿ ಗೀತೆಯ, ಎರಡನೆಯ ಅಧ್ಯಾಯದಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟದೆ. (ಗೀ. ೨-೪೦—೪೪ ಮತ್ತು ೯-೨೦-೨೧ ನೋಡಬಹುದು.) ಆದಕಾರಣ ಯಜ್ಞಾರ್ಥವಾಗಿ ಕೂಡ ಗೃಹಸ್ಥರು ಯಾವ ನಿಯತಕರ್ಮವನ್ನು ಮಾಡಬೇಕೋ ಅದನ್ನು ಕೂಡ ಫಲಾಶೆಯನ್ನು ಬಿಟ್ಟು ಎಂದರೆ ಕೇವಲ ಕರ್ತವ್ಯವೆಂದು ಮಾಡಬೇಕು ಎಂಬುದಾಗಿ ಮೇಲಣ ಶ್ಲೋಕದ ಎರಡನೆಯ ಅರ್ಧವಲ್ಲಿ ಪುನಃ ವಿಧಾನ ಮಾಡಲ್ಪಟ್ಟದೆ. (ಗೀ. ರ. ೯-ಪೃ ೬೪೮) ” ಎಂದು ತಾವು ಬರಿಯೋ

ಣವಾಗಿದೆ. ಆದರೆ ಯಜ್ಞಾರ್ಥಕರ್ಮ ಮಾಡಿದರೂನು ಫಲಾಶೆಯನ್ನು ಬಿಡಲೇ ಬೇಕಲ್ಲವೆ. ಫಲಾಶೆಯನ್ನು ಬಿಟ್ಟೇ ಕರ್ಮವನ್ನು ಮಾಡಬೇಕಾದರೆ ಆ ಕರ್ಮವು, ಯಜ್ಞಾರ್ಥವ್ರೋ ಅಥವಾ ಮತ್ತು ಬೇರೆ ಯಾವದೋ ಆಗಲಿ, ಅದು ಬಂಧಕವಾಗುವುದಿಲ್ಲವಲ್ಲವೆ ? ಆದರೆ ಯಜ್ಞಾರ್ಥವಾಗಿ ಫಲಾಶೆಯನ್ನು ಬಿಟ್ಟು ಕರ್ಮಮಾಡುತ್ತಾ ಬಂದರೆ ಅದು ಬಂಧಕವಾಗುವುದಿಲ್ಲ ಎಂಬ ನುಡಿಯೇ ಸಯುಕ್ತಿಕವಾಗಿಲ್ಲ.

ಅಲ್ಲದೆ "ಯಜ್ಞಶಬ್ದವು ಕೇವಲ ಶ್ರೌತಯಜ್ಞವನ್ನೇ ಈ ಸ್ಥಳದಲ್ಲಿ ತಿಳಿಸುವುದಿಲ್ಲನಾವಕಾರಣ ಆ ಯಜ್ಞಶಬ್ದಾರ್ಥದಲ್ಲಿ, ಸ್ಮಾರ್ತಯಜ್ಞಕ್ಕೂ ಮತ್ತು ಚಾತುರ್ವರ್ಣ್ಯವಿಯಥಾಧಿಕಾರಸರ್ವ ವ್ಯಾವಹಾರಿಕಕರ್ಮಕ್ಕೂ ಸಮಾವೇಶವಾಗುತ್ತದೆ. ಈ ವಿಷಯವನ್ನು ಈ ಪ್ರಕರಣದಲ್ಲಿ ವಾಚಕರು ನಿಯಮದಿಂದ ಲಕ್ಷ್ಯದಲ್ಲಿಡಬೇಕು (ಗೀ. ರ. ಪೃ. ೬೪೪) ಹೀಗೆ." ತಾವು ಬರಿಯೋಣವಾಗಿದೆ. ತಾವು ಹೇಳುವ ಪ್ರಕಾರ ಯಜ್ಞವೆಂದರೆ ಸರ್ವವಿಹಿತಕರ್ಮವ್ರೂ ಆಗುತ್ತದೆ. ಮತ್ತು ಆ ವಿಹಿತಸಕಲ ಕರ್ಮಗಳಿಗೋಸ್ಕರ ಬೇರೆ ಯಾವ ವಿಧವಾದ ಕರ್ಮವು ಮಾಡಬೇಕಾಗಿ ಉಳಿದಿದೆ ? ಕರ್ಮವು ಎರಡು ಪ್ರಕಾರವಾಗಿದೆ. ಒಂದು ವಿಹಿತ, ಎರಡನೆಯದು ನಿಷಿದ್ಧ. ಇದರಲ್ಲಿ ನಿಷಿದ್ಧಕರ್ಮವೇನೋ ಮಾಡತಕ್ಕುದಲ್ಲ. ಮತ್ತು ಯಜ್ಞ ಪದದಿಂದ ಸರ್ವ ವಿಹಿತಕರ್ಮವನ್ನು ಗ್ರಹಿಸುವ ಪಕ್ಷದಲ್ಲಿ ಎರಡನೆಯ ಕರ್ಮವೇ ಉಳಿಯಲಿಲ್ಲ. ಆದರೆ ಯಜ್ಞಾರ್ಥಕರ್ಮವೆಂಬುದಾವುದು ?

"ಯತ್ಕರೋಷಿಯದಶ್ನಾಸಿ ಯಜ್ಜುಹೋಷಿದದಾಸಿಯತ್ ।
ಯತ್ತಪಸ್ಯಸಿಕೌಂತೇಯ ತತ್ಕುರುಷ್ವಮದರ್ಪಣಮ್ ॥"

ಈ ಶ್ಲೋಕದಲ್ಲಿ ಹೇಳಿರುವ ಪ್ರಕಾರ ಪರಮಾತ್ಮನ ಉದ್ದೇಶದಿಂದ ಫಲೇಚ್ಛೆಯನ್ನು ಬಿಟ್ಟು ಕರ್ಮವನ್ನು ಮಾಡು ಎಂಬುದಾಗಿ,

ಯಜ್ಞಾರ್ಥಾತ್ಕರ್ಮಣೋನ್ಯತ್ರ ಲೋಕೋಯಂ ಕರ್ಮಬಂಧನಃ ।
ತದರ್ಥಂ ಕರ್ಮಕೌಂತೇಯ ಮುಕ್ತಸಂಗಸ್ಸಮಾಚರ ॥

ಎಂಬುದಕ್ಕೂ ಅರ್ಥಹೇಳುವುದೇ ಯುಕ್ತವಾಗಿದೆ.

೫ನೆಯ ವಿಷಯ

ಶ್ರೀ—

" ನಾಸತೋವಿದ್ಯತೇಭಾವೋ ನಾಭಾವೋವಿದ್ಯತೇಸತಃ ।
ಉಭಯೋರಪಿದೃಷ್ಟೋಂತಸ್ತ್ವನಯೋಸ್ತತ್ವದರ್ಶಿಭಿಃ ॥ "
(ಗೀ. ೨-೧೬)

ಈ ಶ್ಲೋಕದ ಅಭಿಪ್ರಾಯವನ್ನು ಹೇಳುವಾಗ—

" ಈ ಶ್ಲೋಕದಲ್ಲಿ ' ನಾಸತೋವಿದ್ಯತೇಭಾವಃ ' ಎಂಬ ಮೊದಲನೆಯ ಪಾದದಲ್ಲಿ ' ವಿದ್ಯತೇಭಾವಃ ' ಎಂಬುದಕ್ಕೆ ' ವಿದ್ಯತೆ + ಅಭಾವಃ ' ಎಂದು ಪದವಿಭಾಗಮಾಡಿ, ಮತ್ತು ' ಅಸತ್ ಎಂದರೆ-ಅವ್ಯಕ್ತವಾದ ಪ್ರಕೃತಿಯೇ, ಅದಕ್ಕೆ ಅಭಾವವೆಂದರೆ ನಾಶವಾಗುವುದಿಲ್ಲ.' ಎಂದು ಈ ಪಾದಕ್ಕೆ ಮಾಧ್ವಭಾಷ್ಯದಲ್ಲಿ ಅರ್ಥವು ಮಾಡಲ್ಪಟ್ಟಿದೆ. ಮತ್ತು ಎರಡನೆಯ ಪಾದದಲ್ಲಿ ಸತ್ತಿಗೂ ನಾಶವಾಗುವುದಿಲ್ಲ, ಎಂದು ಯಾವ ಅರ್ಥ ಹೇಳಲ್ಪಟ್ಟದೆಯೋ, ಆ ಅರ್ಥದಲ್ಲಿ, ಅಸತ್ತು ಮತ್ತು ಸತ್ತು ಈ ಎರಡೂ ನಿತ್ಯವಾಗಿದೆ ಎಂಬುದಾಗಿ ತಮ್ಮ ದ್ವೈತಸಂಪ್ರದಾಯ ಪ್ರಕಾರವಾಗಿ ಮಧ್ವಾಚಾರ್ಯರವರು ಈ ಒಟ್ಟು ಶ್ಲೋಕಕ್ಕೆ ಅರ್ಥವನ್ನು ಕೊಟ್ಟಿದಾರೆ. ಆದರೆ ಇದು ಸರಳವಾಗಿಲ್ಲದೆ ಕ್ಲಿಷ್ಟವಾಗಿದೆ ಏಕೆಂದರೆ— ' ಅಸತ್ ' ಮತ್ತು ' ಸತ್ ' ಈ ಎರಡು ಪರಸ್ಪರವಿರೋಧಿ ಶಬ್ದಾನುಸಾರವಾಗಿ ಅಭಾವ ಮತ್ತು ಭಾವ ಎಂಬ ಎರಡುವಿರೋಧಿ ಶಬ್ದಗಳೇ ಈ ಸ್ಥಳದಲ್ಲಿ ಯೋಜನಾರ್ಹವಾಗಿದೆ ಎಂದು ಸ್ವಾಭಾವಿಕರೀತಿಯಿಂದ ತೋರಿಬರುತ್ತದೆ. ಮತ್ತು ಎರಡನೆಯ ಪಾದದಲ್ಲಿ ಎಂದರೆ ' ನಾಭಾವೋವಿದ್ಯತೆಸತಃ ' ಎಂಬಲ್ಲಿ ' ನಾಭಾವಃ ' ಎಂಬುದರಲ್ಲಿಯೂ ಅಭಾವಶಬ್ದವೇ ಗ್ರಾಹ್ಯವಾಗಿರಲಾಗಿ ಮೊದಲನೆಯ ಪಾದದಲ್ಲಿ ಭಾವ ಎಂಬ ಶಬ್ದವು ಇರಬೇಕಾಗಿದೆ. ಹೀಗೆ ವ್ಯತ್ಯಾಸವಿದೆ. ಅಲ್ಲದೆ ' ಅಸತ್ ' ಮತ್ತು ' ಸತ್ ' ಈ ಎರಡೂನು ನಿತ್ಯವಾಗಿದೆ ಎಂದು ಹೇಳುವುದಕ್ಕೆ ' ಅಭಾವ ' ಮತ್ತು ' ವಿದ್ಯತೆ ' ಈ ಪದಗಳನ್ನು ಎರಡಾವೃತ್ತಿ ಪ್ರಯೋಗಿಸಬೇಕಾದ ಆವಶ್ಯಕತೆ ಇರುವುದಿಲ್ಲ. ಆದರೆ ಈ ಪ್ರಕಾರ ಹೀ...

ಕೃತಿಯು ಅಪರಾರ್ಥಕವೆಂದು ಮಧ್ವಾಚಾರ್ಯರು ಅಂಗೀಕರಿಸಬಹುದು. ಆದರೂ ವ್ಯಕ್ತ ಅಥವಾ ದೃಶ್ಯ ಸೃಷ್ಟಿಯಲ್ಲಿ ಒಳಪಟ್ಟ ಮನುಷ್ಯನ ಶರೀರವು ನಾಶವುಳ್ಳುದು ಎಂದರೆ ಅನಿತ್ಯವಾಗಿದೆ ಎಂದು ಮುಂದೆ ಹದಿನೆಂಟನೆಯ ಶ್ಲೋಕದಲ್ಲಿ ಸ್ಪಷ್ಟ ಹೇಳಿದಾರೆ. ಆದಕಾರಣ ಆತ್ಮಗೆ ಸಮವಾಗಿ ದೇಹವನ್ನು ಕೂಡ ಭಗವನ್ಮತಾನುಸಾರವಾಗಿ ನಿತ್ಯವೆಂದು ಒಪ್ಪಲಾಗದು. ಒಂದು ನಿತ್ಯ, ಎರಡನೆಯದು ಅನಿತ್ಯವಾಗಿದೆ ಎಂದು ಸ್ವತಸ್ಸಿದ್ಧವಾಗುತ್ತಾದೆ. ಹಾಗಿದ್ದರೂ ಸಾಂಪ್ರದಾಯಿಕ ದೃಷ್ಟಿಯನ್ನನುಸರಿಸಿ ಇಂತಹ ವ್ಯತ್ಯಾಸವನ್ನು ಹೇಗೆ ಮಾಡಿದಾರೋ ಎಂಬುದು ವಾಚಕರ ಲಕ್ಷ್ಯಕ್ಕೆ ಬರುವ್ರದಕ್ಕಾಗಿ ಮಾಧ್ವಭಾಷ್ಯದಲ್ಲಿರುವ ಈ ಶ್ಲೋಕದ ಅರ್ಥವನ್ನು ಉದಾಹರಣಾರ್ಥವಾಗಿ ನಾವಿಲ್ಲಿ ಕೊಟ್ಟದೇವೆ." (ಗೀ. ರ. ೬೧೪-೬೧೫)

ಮೇಲೆ ಕೊಟ್ಟ ಶ್ಲೋಕದ ವ್ಯಾಖ್ಯಾನವ ಮಧ್ಯದಲ್ಲಿ ಯಾವದೋಷವನ್ನು ತಾವು ನಮ್ಮ ಭಾಷ್ಯಕಾರರಿಗೆ ಕೊಡೋಣವಾಗಿಯೋ ಅದು ಯುಕ್ತವಾಗಿಲ್ಲ. ಕಾರಣವೇನೆಂದರೆ, ನಾವು 'ಅಸತ್' ಎಂಬಪದಕ್ಕೆ ಪ್ರಕೃತಿ ಎಂಬ ಅರ್ಥವನ್ನು ಮಾಡಿ ಅದಕ್ಕೆ ನಿತ್ಯತ್ವವನ್ನು ಒಪ್ಪಿದೇವೆ.

ಈಗ ತಾವು ಹೀಗೆ ವಿರೋಧವನ್ನು ತೋರಿಸೋಣಾಗಿದೆಯಲ್ಲವೆ. 'ಅಸತ್' ಎಂದರೆ ಪ್ರಕೃತಿ ನಿತ್ಯವಾಗಿದೆ ಎಂದು ಒಪ್ಪುವುದಾದರೆ ಈ ಶ್ಲೋಕಕ್ಕೆ ಮುಂದೆ ಇರುವ "ಅಂತವಂತ ಇಮೇದೇಹಾನಿತ್ಯಸ್ಯೋಕ್ತಾ ಶ್ಶರೀರಿಣಃ" ಎಂಬ ಶ್ಲೋಕದಲ್ಲಿ ವ್ಯಕ್ತ ಅಥವಾ ದೃಶ್ಯ ಸೃಷ್ಟಿಯಲ್ಲಿ ಬರುವ ಮನುಷ್ಯನ ಶರೀರವು ನಾಶವಂತವಂತವಾಗಿದೆ ಎಂದು ಹೇಳಲ್ಪಟ್ಟದೆ. ತಾವು ತೋರಿಸಿರುವ ವಿರೋಧವು ಪೂರ್ವೋಕ್ತವಾಕ್ಯಗಳ ವಿಚಾರವನ್ನು ಸ್ವಲ್ಪವಾಗಿ ಮಾಡಿವರೂ ಕೂಡ ಅತ್ಯಂತ ನಿರಾಧಾರವಾಗಿದೆ ಎಂಬುದು ಸಹಜ ಸಿದ್ಧವಾಗುತ್ತದೆ. ಏಕೆಂದರೆ, "ಅನ್ತವನ್ತ ಇಮೇದೇಹಾಃ" ಈ ಶ್ಲೋಕವು ದೇಹವು ಅನಿತ್ಯವೆಂದು ಹೇಳುತ್ತದೆಯೋ ಹೊರ್ತು ಪ್ರಕೃತಿ ಅನಿತ್ಯವೆಂದು ಹೇಳುವುದಿಲ್ಲ. ಅಲ್ಲದೆ ಪ್ರಕೃತಿ ಅನಿತ್ಯವೆಂದು ಪ್ರತಿಪಾದಿಸುವ ಒಂದು ಶ್ಲೋಕವಾದರೂ

ಸಮಗ್ರ ಗೀತೆಯಲ್ಲಿರುವುದಿಲ್ಲ. ಕಾರ್ಯ ನಷ್ಟವಾದರೂ ಕೂಡ ಕಾರಣವು ನಿತ್ಯವಾಗಿರುವುದಕ್ಕೆ ಪ್ರತಿಬಂಧಕವೇನೂ ಬರುವುದಿಲ್ಲ.

೬ನೆಯ ವಿಷಯ.

ಶಿ:—ಗೀತೆಯಲ್ಲಿ ಅದ್ವೈತ ಪ್ರತಿಪಾದಕವಾದ ಶ್ಲೋಕವೇ ಇಲ್ಲ. ಇದ್ದರೆ ಒಂದನ್ನು ಹೇಳಿರಿ?

ತಿ—"ಅಧಿಯಜ್ಞೋಽಹಮೇವಾತ್ರ ದೇಹೇ ದೇಹಭೃತಾಂವರ" "ಎಲೈ ದೇಹಧಾರಿಗಳಲ್ಲಿ ಶ್ರೇಷ್ಠನಾದ ಅರ್ಜುನನೇ ದೇಹದೊಳಗೆ ಅಧಿಯಜ್ಞನು ನಾನೇ ಆಗಿದ್ದೇನೆ" ಎಂದು ಹೇಳಿರುವುದರಿಂದ ಜೀವ ಪರಮಾತ್ಮರಿಗೆ ಐಕ್ಯವಿದೆ ಎಂಬುದಾಗಿ ಕಾಣುತ್ತದೆ.

ಶಿ:—"(೧) ಕಿಂ ತದ್ ಬ್ರಹ್ಮ (೨) ಕಿಮಧ್ಯಾತ್ಮಂ (೩) ಕಿಂ ಕರ್ಮ ಪುರುಷೋತ್ತಮ (೪) ಅಧಿಭೂತಂ ಚ ಕಿಂ ಪ್ರೋಕ್ತಂ (೫) ಅಧಿದೈವಂ ಕಿಮುಚ್ಯತೇ (೬) ಅಧಿಯಜ್ಞಃ ಕಥಂ ಕೋಽತ್ರ ದೇಹೇಽಸ್ಮಿನ್ ಮಧುಸೂದನ" ಈ ಪ್ರಕಾರ ಆರು ಪ್ರಶ್ನೆಗಳಿಗೆ "(೧) ಅಕ್ಷರಂ ಬ್ರಹ್ಮ ಪರಮಂ (೨) ಸ್ವಭಾವೋಽಧ್ಯಾತ್ಮಮುಚ್ಯತೇ (೩) ಭೂತಭಾವೋದ್ಭವಕರೋ ವಿಸರ್ಗಃ ಕರ್ಮಸಂಜ್ಞಿತಃ (೪) ಅಧಿಭೂತಂ ಕ್ಷರೋ ಭಾವಃ (೫) ಪುರುಷಶ್ಚಾಧಿದೈವತಂ (೬) ಅಧಿಯಜ್ಞೋಽಹಮೇವಾತ್ರ ದೇಹೇ ದೇಹಭೃತಾಂವರ" ಎಂಬ ವಾಕ್ಯಗಳಿಂದ ಭಗವಂತನು ಉತ್ತರವನ್ನು ಕೊಟ್ಟಿದ್ದಾನೆ. ದೇಹದೊಳಗೆ ಅಧಿಯಜ್ಞನು ಯಾರು? ಆತನು ಹೇಗೆ ಇದ್ದಾನೆ? ಎಂಬುದು ಆರನೆಯ ಪ್ರಶ್ನೆಯಾಗಿದೆ. ಈ ಆರನೆಯ ಪ್ರಶ್ನೆಯ ಭಾಗಗಳಲ್ಲಿ ಎರಡನೆಯ ಭಾಗಕ್ಕೆ "ಅಧಿಯಜ್ಞೋಽಹಮೇವಾತ್ರ ದೇಹೇ ದೇಹಭೃತಾಂವರ" ಎಂಬುದುತ್ತರವಾಗಿದೆ. ಇದರಿಂದ ಜೀವಬ್ರಹ್ಮೈಕ್ಯವು ತಿಳಿದುಬರುವುದು ಹೇಗೆ?

ತಿ— "ಅಧಿಯಜ್ಞಃ ಅಹಮೇವ, ದೇಹಭೃತಾಂವರ, ದೇಹೇ ಅಹಮೇವ" ಎಂದು ಶಬ್ದಯೋಜನೆಯನ್ನು ಮಾಡಲು "ಅಹಮೇವ" ಎಂಬ ಶಬ್ದವನ್ನು ಎರಡಾವೃತ್ತಿ ಅನ್ವಯಿಸಿದರೆ ದೇಹದಲ್ಲಿರುವವನು ನಾನೇ ಎಂದರ್ಥವಾಗುವುದರಿಂದ ಜೀವನಿಗೂ ಪರಮಾತ್ಮನಿಗೂ ಐಕ್ಯವು ಬೋಧಿತವಾಗುತ್ತದೆ.

ಶ್ರೀ—"ಅಧಿಯಜ್ಞೋಽಹಮೇವಾತ್ರ ದೇಹೇ ದೇಹಭೃತಾಂ ವರ" ಎಂಬ ಅರ್ಧಶ್ಲೋಕದಲ್ಲಿ "ದೇಹಭೃತಾಂವರ, ದೇಹೇ ಅಧಿಯಜ್ಞಃ ಅಹಮೇವ" ಎಂದು ಒಂದೇ ವಾಕ್ಯವು ಕಾಣುತ್ತಿರುವಾಗ, ವಾಕ್ಯವನ್ನು ಭೇದಿಸಿ 'ಅಹಮೇವ' ಎಂಬ ಪದವನ್ನು ಎರಡಾವೃತ್ತಿ ಅನ್ವಯಕ್ಕೆ ತೆಗೆದುಕೊಳ್ಳುವುದು ಸರಿಯಾಗಿಲ್ಲವಾದಕಾರಣ ಕ್ಲೇಶಕರವಾಗಿದೆ.

೭ ನೆಯ ವಿಷಯ.

ಶ್ರೀ—"ಪರಂತು ಸ್ವಕೀಯಜನಸಂಗಡ ಯುದ್ಧಮಾಡುವುದೇ ಬಹು ದೊಡ್ಡ ದುರ್ವ್ಯಾಪಾರವೆಂದು ಖಿನ್ನನಾದ ಅರ್ಜುನನಿಗೆ ಅವನನ್ನು ಯುದ್ಧದಲ್ಲಿ ಪ್ರವೃತ್ತನನ್ನು ಮಾಡುವಹಾಗೆ ಬೋಧಿಸುವ ಗೀತೆಯಲ್ಲಿ, ಬ್ರಹ್ಮಜ್ಞಾನದಿಂದೋ ಅಥವಾ ಭಕ್ತಿಯಿಂದೋ ಮೋಕ್ಷವು ಹೇಗೆ ಲಭಿಸುವುದು ಎಂದು, ಇದರ ಎಂದರೆ ಅಪ್ರಕೃತವಾದ ಮೋಕ್ಷಮಾರ್ಗದ ವಿವೇಚನವೇತಕ್ಕೆ? ಎಂಬ ಶಂಕೆಯು ಮನಸ್ಸಿನಲ್ಲಿ ಬರಲು, ಅದೇ ಮುಂದೂ ಬಲಪಡುತ್ತಾ ಬರುತ್ತದಾದಕಾರಣ ಗೀತೆಯ ಮೇಲೆ ಇರುವ ಸವ ಟೀಕೆಯಲ್ಲಿಯೂ ಇದಕ್ಕೆ ತಕ್ಕ ಉತ್ತರವು ಲಭಿಸುವಹಾಗಿಲ್ಲ" ಎಂದು ತಾವು ಗೀತಾರಹಸ್ಯದಲ್ಲಿ ಬರೆಯೋಣವಾಗಿದೆ. ಆದರೆ ಇದಕ್ಕೆ ಉತ್ತರವು ನಮ್ಮ ಗೀತಾ ತಾತ್ಪರ್ಯ ಗ್ರಂಥದಲ್ಲಿ ಉಕ್ತವಾಗಿದೆ. "ತತ್ರ ಸಾಕ್ಷಾದಿಂದ್ರಾವತಾರ ಮುತ್ತಮಾಧಿಕಾರಿಣ ಮಾತ್ಮನಃ ಪ್ರಿಯತಮಮರ್ಜುನಂ ಕ್ಷತ್ರಿಯಾಣಾಂ ವಿಶೇಷತೋಽಪಿ ಪರಮಧರ್ಮಂ ನಾರಾಯಣದ್ವಿಷ್ಟತದನುಬಂಧಿನಿಗ್ರಹಂ ಬಂಧುಸ್ನೇಹಾದಧರ್ಮತ್ವೇನಾಶಂಕ್ಯ ತತೋ ನಿವೃತ್ತಪ್ರಾಯಂ ಸ್ವವಿಹಿತವೃತ್ತ್ಯಾ ಭಕ್ತ್ಯಾ ಭಗವದಾರಾಧನಮೇವ ಪರಮೋಧರ್ಮಃ, ತದ್ವಿರುದ್ಧಸ್ಸರ್ವೋಪ್ಯಧರ್ಮೋ ಭಗವದಧೀನತ್ವಾತ್ಸರ್ವಸ್ಯೇತಿ ಬೋಧಯಾಮಾಸ ಭಗವಾನ್ನಾರಾಯಣಃ। ಸರ್ವಂ ಚೈತದತ್ರೈವಾವಗಮ್ಯತೇ" ಎಂಬ ವಚನದಿಂದ "ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ" ಎಂಬ ವಾಕ್ಯದಮೇಲೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಇವರುಗಳು ತಮತಮಗೆ ಯೋಗ್ಯವಾದ ಕರ್ಮಗಳನ್ನು ಮಾಡುತ್ತಾ ಇದರಿಂದ ಅಂತಃಕರಣಶುದ್ಧಿಯನ್ನು ಪಡೆದರೆ

ಪರಮಾತ್ಮನ ಜ್ಞಾನ ಮತ್ತು ಮೋಕ್ಷವು ಅವರಿಗೆ ಸಿದ್ಧಿಸುತ್ತದೆ ಎಂಬ ಸಿದ್ಧಾಂತವು ತೋರ್ಗಡೆಯಾಗುತ್ತದೆ. ಎಲೈ! ಅರ್ಜುನನೇ! ನೀನು ಕ್ಷತ್ರಿಯನಾಗಿರುವ ಕಾರಣ "ಧರ್ಮ್ಯಾದ್ಧಿ ಯುದ್ಧಾಚ್ಛ್ರೇಯೋನ್ಯತ್ ಕ್ಷತ್ರಿಯಸ್ಯ ನ ವಿದ್ಯತೇ" ಎಂದು ಹೇಳಿರುವ ಪ್ರಕಾರ ಯುದ್ಧಕರ್ಮದಿಂದಲೇ ಈಶ್ವರಾರಾಧನೆಯನ್ನು ಮಾಡಿ ಈಶ್ವರನ ಜ್ಞಾನವನ್ನು ಸಂಪಾದಿಸಿ ಮೋಕ್ಷವನ್ನು ಹೊಂದಬೇಕು. ಹೀಗಿರಲು ಭಗವದ್ದ್ವೇಷಿಗಳು ಮತ್ತು ತದನುಬಂಧಿಗಳು ಆದ ಜನರ ನಿಗ್ರಹವು ಅಧರ್ಮವೆಂದು ತಿಳಿದು ಸ್ವಸ್ಥವಾಗಿ ಕುಳಿತುಕೊಳ್ಳುವುದು ಶಾಸ್ತ್ರವಿಹಿತವಲ್ಲ ಎಂಬ ಉಪದೇಶವನ್ನು ಅರ್ಜುನನಿಗೆ ಮಾಡಿರುವುದರಿಂದ ಮೋಕ್ಷಮಾರ್ಗವಿವೇಚನವಲ್ಲಿಯೇ ಯುದ್ಧಾಚರಣಕ್ಕೆ ಸಮಾವೇಶವುಂಟಾಗುತ್ತದೆ. ಇದರಿಂದ ತಮ್ಮ ಪ್ರಶ್ನೆಕ್ಕೆ ಉತ್ತರವು ಲಬ್ಧವಾಗುತ್ತಿರಲಾಗಿ ಈ ಟೀಕೆಯಿಂದಲೂ ಯೋಗ್ಯವಾದ ಉತ್ತರ ಲಭಿಸುವುದಿಲ್ಲವೆಂದು ತಮ್ಮ ಹೇಳುವಿಕೆಯು ಆಧಾರಸಹಿತವಾಗಿಲ್ಲ. ಆದುದರಿಂದ ಸರಿಯಲ್ಲ.

ಈ ಪ್ರಶ್ನೆಯ ವಿಚಾರ ನಡೆದಮೇಲೆ ಇತರ ಪ್ರಶ್ನೆಗಳ ವಿಚಾರವು ಆಗಬೇಕೆಂದು ನಿರ್ಣಯವಾಯಿತು.

೨ನೆಯ ದಿವಸ.

ಎರಡನೆಯ ದಿವಸ ರಾ॥ ತಿಲಕರವರು, ಪರಾಂಜಪೆಯವರು ಮೊದಲಾದ ಗೃಹಸ್ಥರು ವೈದಿಕರು ಮತ್ತು ವಿದ್ವಾಂಸರುಗಳ ಮಂಡಲಿಯು ಸಭಾಸ್ಥಾನಕ್ಕೆ ವ್ಯವಸ್ಥಾಪ್ರಕಾರ ಬಂದಿತು. ಆ ವೇಳೆಯಲ್ಲಿ ಅಸಿಸ್ಟೆಂಟ್ ಪೋಲೀಸ್ ಸೂಪರಿಂಡೆಂಟರು ಫೌಜದಾರರು ಮೊದಲಾದ ಸರ್ಕಾರದ ಅಧಿಕಾರಿಗಳು ಇದ್ದರು. ಸರ್ವಮಂಡಲಿಯು ಕಲೆತನಂತರ ಧಾರವಾಡದ ವಕೀಲರಾದ ರಾ॥ ವೆಂಕಟರಾವ್ ಆಲೂರು ಇವರು ಕನ್ನಡದಲ್ಲಿ ಪ್ರಸ್ತಾವೋಚಿತವಾದ ಭಾಷಣವನ್ನು ಮಾಡಿ, "ನಿನ್ನೆ ದಿನ ಶ್ರೀಮಾನಂಗಳವರು ಅನುವಾದ ಮಾಡಿದ ವಿಷಯಗಳ ಮಧ್ಯದಲ್ಲಿ (೧) ಗೀತಾರಹಸ್ಯದಲ್ಲಿ ಮಾಧ್ವಭಾಷ್ಯದ ಗ್ರಹಣಮಾಡಿದ ಪ್ರಮಾಣ ಕೊಡಲ್ಪಟ್ಟಿದೆಯೋ ಅಥವಾ, (೨) ದ್ವೈತಾದ್ವೈತಗಳ ಯುಕ್ತಾಯುಕ್ತತೆ

ಗಳೆ, (೩) ಅದ್ವೈತ ಸಿದ್ಧಾಂತವನ್ನು ಒಪ್ಪಿದಮೇಲೆ ಜ್ಞಾನ ಹುಟ್ಟಿದ ನಂತರ ಕರ್ಮ ಮಾಡುವುದಕ್ಕೆ ಸಂಭವವೇ ಇರುವುದಿಲ್ಲವಾದಕಾರಣ, ಅದ್ವೈತ ಮತ್ತು ಜ್ಞಾನೋತ್ತರ ಕರ್ಮಗಳು ಹೇಗೆ ಕೂಡುತ್ತವೆ ಯೆಂಬುದು, ಈ ಪ್ರಕಾರ ಮೂರು ವಿಷಯಗಳ ವಿಚಾರ ನಡೆಯಬೇಕಾಗಿದೆ ಎಂದು ತಿಳಿಸಿದರು. ಅದರಮೇಲೆ, ಡಾ॥ ತಿಲಕರವರು "ನನ್ನ ಬುದ್ಧಿಗೆ ಅವರು ಸರಿಯಾಗಿ ತೋರಿತೊ ಅದನ್ನು ನಾನು ಬರೆದಿದೇನೆ; ಗ್ರಾಹ್ಯವಾದನ್ನು ಗ್ರಹಿಸಬಹುದು. ದ್ವೈತಾದ್ವೈತ ವಿವಾದವು ಎಂದಿಗೂ ಹೊಂದಿಕೆಯಾಗುವುದಲ್ಲ. ಅದಕಾರಣ ಈ ವಿಷಯದಲ್ಲಿ ನೀನು ಹೇಳುವುದಕ್ಕೂ ನನಗೆ ಇಚ್ಛೆಯಿಲ್ಲ. ಶಾಂಕರಾದ್ವೈತವು ನನಗೆ ಸಮ್ಮತವಲ್ಲ. ಮತ್ತು ಪೂರ್ವಾಚಾರ್ಯರಲ್ಲಿ ದೂಷಣೆ ಮಾಡುವುದು ನನಗೆ ಇಷ್ಟವಲ್ಲ" ಎಂದು ಅಪ್ಪಣೆಕೊಡಿಸಿದರು. ಅನಂತರ ಚರ್ಚೆಗೆ ಆರಂಭವಾಯಿತು.

ತಿ.—(ಪೂರ್ವದಿವಸದ ಎರಡನೆ ವಿಷಯದಮೇಲೆ ಗೀತಾ ತಾತ್ಪರ್ಯ ಪುಸ್ತಕದಲ್ಲಿರುವ ಆ ವಿಷಯಕ್ಕೆ ಸಂಬಂಧಿಸಿದ ಭಾಗವನ್ನು ತೋರಿಸಿ) ಶ್ರೀಮಧ್ವಾಚಾರ್ಯರವರು "ಯೋಗಾರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತ" (೬-೩-ಗೀ) ಈ ಶ್ಲೋಕಕ್ಕೆ ವ್ಯಾಖ್ಯಾನ ಮಾಡುವಾಗ "ಕಾರ್ಯಂ ನಾನ್ಯತ್ತಸ್ಯ ತೇನ ತುಷ್ಟೋ ಭವತಿ ಕೇಶವಃ" ಎಂದು ಬರೆದಿರುವುದರಿಂದ ಕರ್ಮಮಾಡಿದರೇನು, ಮಾಡದಿದ್ದರೇನು, ಅದರಲ್ಲಿ ವಿಶೇಷವಿಲ್ಲ ಎಂಬ ಅರ್ಥವು ತಮ್ಮ ಆಚಾರ್ಯರಿಗೆ ಸಮ್ಮತವಾಗಿರುವಂತೆ ಕಾಣುತ್ತದೆ.

ಶ್ರೀ—"ಕಾರ್ಯಂ ನಾನ್ಯತ್" ಎಂದು ಹೇಳಿದಾರೆ; "ಕರ್ಮ ಕಾರ್ಯಂನ" ಎಂದು ಹೇಳಿರುವುದಿಲ್ಲ. "ಅನ್ಯತ್ಕರ್ಮ ನಕಾರ್ಯಂ" ಎಂದು ಹೇಳಿದರೆ ಅನ್ಯತ್-ಎಂದರೆ ಬೇರೆಯಾವ ಕರ್ಮವನ್ನು ಮಾಡಬೇಕಾದುದಿಲ್ಲ ಎಂದು ಅರ್ಥವಾಗುತ್ತದೆ. ಅಲ್ಲಿಯೇ "ನಾನಾಜನಸ್ಯ ಶುಶ್ರೂಷಾ ಕರ್ಮಾಖ್ಯಾ ಕರವನ್ಮಿತೇಃ। ಯೋಗಾರ್ಥಿನಾತು ಸಾಕಾರ್ಯಾ ಯೋಗಸ್ಥೇನ ಹರೌಸ್ಥಿತಿಃ॥ ತೇನಾಪಿಸ್ತ್ರೋತ್ರಮಾನಾಂತಕಾರ್ಯಾನ್ಯಭಿರುಚಿಃಸ್ವಪಿ। ಶಕ್ತಿತಃ ಕರಣೀಯಾನೀತಿ ವಿಶೇಷೋಽಸಿದ್ಧ

ಸಿದ್ಧಯೇಃ । ಪ್ರಾಪ್ನೋತಿಯಾಯಸ್ತು ಸಿದ್ಧಸ್ಸ್ಯಾತ್ ಪ್ರೇಪ್ಸುಸ್ಸಾಧಕ ಉಚ್ಯತೇ । ತಸ್ಯಪ್ರಾಣ್ಯುಪಕಾರೇಣಸಂತುಷ್ಟೋಭವತೀಶ್ವರಃ । ಸಿದ್ಧೋಪಾಯೇನ ವಿಷ್ಣೋಸ್ತು ಧ್ಯಾನವ್ಯಾಖ್ಯಾರ್ಚನಾದಿಕಂ । ಕಾರ್ಯಂ ನಾನ್ಯತ್ತು ಸ್ಯಾತ್ತೇನ ತುಷ್ಟೋ ಭವತಿ ಕೇಶವಃ ” ಎಂಬುದಾಗಿ ಹೇಳಿರುವ ಕಾರಣ ಧ್ಯಾನ-ವ್ಯಾಖ್ಯಾನ-ಪೂಜಾದಿ ಕರ್ಮವನ್ನು ಮಾಡಬೇಕು. ಅದು ಹೊರತು ಇತರ ಕರ್ಮಗಳನ್ನು ಮಾಡಬೇಕಾದುದಿಲ್ಲವೆಂದು ಸಿದ್ಧವಾಗುತ್ತದೆ.

ತಿ.—ಧ್ಯಾನ- ವ್ಯಾಖ್ಯಾ- ಪೂಜಾ ಮೊದಲಾದ ಕರ್ಮವನ್ನು ಮಾಡಬೇಕಾದರೆ ಬಿಡಬೇಕಾದ ಕರ್ಮವಾವುದು ?

ಶ್ರೀ—ಅಧಮಜನ ಶುಶ್ರೂಷೆಯು.

ತಿ—“ಅರ್ಚನಾದಿಕಂ” ಎಂಬಲ್ಲಿ ಆದಿಪದದಿಂದ ಗ್ರಾಹ್ಯವಾವುದು?

ಶ್ರೀ—“ತೇನಾಪಿ ಸ್ವೋತ್ತಮಾನಾಂತು ಕಾರ್ಯಾನ್ಯೈರಪಿ ಕೇಷ್ವಪಿ” ಎಂಬ ವಚನಾನುಸಾರ ಆದಿಪದದಿಂದ ಉತ್ತಮಜನಶುಶ್ರೂಷೆಯನ್ನು ಗ್ರಹಿಸಬೇಕು.

ತಿ—ಜ್ಞಾನಿಗೆ ಪರಮಾತ್ಮನನ್ನು ಬಿಟ್ಟು ಬೇರೆ ಉತ್ತಮ ವಸ್ತುವಾವುದು.?

ಶ್ರೀ—“ಸ್ವೋತ್ತಮಾಗುರವಃ ಪ್ರೋಕ್ತಾಃ” ಎಂದು ಹೇಳಿರುವುದರಿಂದ ತನಕಿಂತಲು ಹೆಚ್ಚು ಜ್ಞಾನವುಳ್ಳವರೆಲ್ಲರೂ ಉತ್ತಮರೇ. ಅವರ ಶುಶ್ರೂಷೆಯನ್ನು ಮಾಡಬೇಕು.

ತಿ—“ಲೋಕಸಂಗ್ರಹಮೇವಾಪಿ ಸಂಪಶ್ಯನ್ ಕರ್ತುಮರ್ಹಸಿ” (ಗೀ. ೩-೨೦-೨೧) “ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋಜನಃ” ಎಂದು ಹೇಳಿರುವ ಕಾರಣ ಅಧಮಜನ ಶುಶ್ರೂಷೆಯನ್ನು ಕೂಡ ಮಾಡಬೇಕೆಂದು ಗೀತೆಯ ಅಭಿಪ್ರಾಯವೆಂದು ಕಾಣುತ್ತದೆ. ಅದು ತಮ್ಮ ಮತಕ್ಕೆ ವಿರುದ್ಧವಾಗಿದೆ.

ಶ್ರೀ—ಈ ಪ್ರಕರಣಕ್ಕೆ ಅರ್ಥವು ಹೀಗಿದೆ. ಜ್ಞಾನಿಗಳು ಕರ್ಮವನ್ನು ಮಾಡದೇ ಹೋದರೆ ಅಜ್ಞಲೋಕವು ಕರ್ಮವನ್ನು ಮಾಡುವುದಿಲ್ಲ. ದೊಡ್ಡವರು ಆವಪ್ರಕಾರ ನಡೆಯುತ್ತಾರೋ ಅದೇ

ರೀತಿಯಲ್ಲಿ ಇತರಜನರೂ ನಡೆಯುತ್ತಾರೆ. ಆದುದರಿಂದ ನನಗೆ ಆವ ಕರ್ಮಫಲಗಳಲ್ಲಿಯೂ ಆಶೆಯಿಲ್ಲದಿರುವುದರಿಂದ ನಾನು ಲೋಕಕ್ಕೋಸ್ಕರ ಕರ್ಮವನ್ನು ಮಾಡುತ್ತೇನೆ ಎಂಬುದಾಗಿ ಪರಮಾತ್ಮನು ಹೇಳಿದಾನೆ. ಈ ಸ್ಥಳದಲ್ಲಿ ಲೋಕಸಂಗ್ರಹಕ ಕರ್ಮವೆಂದರೆ ಜ್ಞಾನಿಗಳು ತಾವು ಆಚರಣೆ ಮಾಡಿ ಅಜ್ಞಜನಗಳ ಕಡೆಯಿಂದಲು, ಅದೇಪ್ರಕಾರ ಆಚರಣೆ ಮಾಡಿಸುವುದು ಎಂಬುದೇ ಸರಿ. ಇದರಿಂದ ಅಧಮಜನಶುಶ್ರೂಷೆಯನ್ನು ಮಾಡಬೇಕೆಂದು ಅರ್ಥವು ನಿಷ್ಪನ್ನವಾಗುವುದಿಲ್ಲ.

ತಿ—ಆದರೆ ಅಧಮಜನರಿಗೆ ಉಪಕಾರ ಮಾಡಬೇಕಾದುದಿಲ್ಲವೆಂಬುದು ತಮ್ಮ ಸಿದ್ಧಾಂತವಾಗಿ ಕಾಣುತ್ತದೆ. ನಮ್ಮ ಮತವು ಹೀಗಿಲ್ಲ. ಸರ್ವಲೋಕಕ್ಕೂ ಉದ್ಧಾರಮಾಡಬೇಕೆಂಬುದು ನಮ್ಮ ಮತವಾಗಿರುವುದರಿಂದ ಅದು ತಮ್ಮ ಮತಕ್ಕೆ ವಿರುದ್ಧವಾಗುತ್ತದೆ.

ಶ್ರೀ—ಅಧಮಜನರ ಶುಶ್ರೂಷೆಯನ್ನು ಮಾಡಬೇಕಾದುದಿಲ್ಲವೆಂದು ನಾವು ಹೇಳುತ್ತೇವೆ. ಅವರ ಉದ್ಧಾರ (ಉಪಕಾರ)ವನ್ನು ಮಾಡಕೂಡದೆಂದು ನಾವು ಹೇಳುವುದಿಲ್ಲ. 'ಧ್ಯಾನವ್ಯಾಖ್ಯಾರ್ಚನಾದಿಕಂ' ಎಂಬಲ್ಲಿ 'ವ್ಯಾಖ್ಯಾ' ಎಂದರೆ ಅಧಮಜನರಿಗೆ ಉದ್ಧಾರವಾಗುವಂತೆ ಉಪದೇಶಮಾಡುವುದು ಎಂದರ್ಥವಾಗುತ್ತದೆ. ಇದರಮೇಲೆ ಉಪಕಾರ ಮಾಡಬೇಕೆಂಬುದು ನಮ್ಮ ಸಿದ್ಧಾಂತವೆಂದು ವ್ಯಕ್ತವಾಗುತ್ತದೆ.

ತಿ—'ಶುಶ್ರೂಷೆ' ಎಂಬುದೂ ಇದೇವೆ.

ಶ್ರೀ—ಇಲ್ಲ. ತಾವು ಲೋಕೋಪಕಾರ ಮಾಡುತ್ತೀರಿ ಎಂದು ಲೋಕ ಹೇಳುತ್ತದೆ. ಶುಶ್ರೂಷೆ ಮಾಡುತ್ತೀರಿ ಎಂದು ಹೇಳುವುದಿಲ್ಲ. 'ಶುಶ್ರೂಷೆ' ಎಂದರೆ ಜನರ ಕಡೆಯಿಂದ ದ್ರವ್ಯತೆಗೆದುಕೊಂಡು ಸೇವಾರೂಪವಾದ ನೀಚವೃತ್ತಿಯನ್ನು ಮಾಡುವುದು. ದ್ರವ್ಯವನ್ನು ತೆಗೆದುಕೊಳ್ಳದೆ ಸರ್ವಭೂತಹಿತಕ್ಕಾಗಿ ಕೆಲಸಮಾಡುವುದು ಉಪಕಾರವು.

ತಿ—ಮಾಧ್ವಮತದಲ್ಲಿ 'ಅಧಮಜನಶುಶ್ರೂಷಾ' ಎಂಬ ಶಬ್ದಕ್ಕೆ ಅರ್ಥವು ನನಗೆ ವಿವಕ್ಷಿತವಾದ ಲೋಕೋಪಕಾರವಲ್ಲದೆ ಇದ್ದರೆ ವಾದವೇ ಇಲ್ಲ. ಮುಂದೆ ಮಾಡುವ ಪ್ರವೃತ್ತಿಯಲ್ಲಿ "ಅಧಮಜನ ಶುಶ್ರೂ

ಷೆಯನ್ನು ಮಾಡಬೇಡಿರಿ; ಇತರ ಕರ್ಮವನ್ನು ಮಾಡಿರಿ” ಎಂಬ ಮಾಧ್ವಮತವಿದೆ ಎಂಬುದಾಗಿ ಶೋಧನೆಯನ್ನು ಮಾಡುತ್ತೇನೆ.

೩೧— “ಧ್ಯಾನಾತ್ಕರ್ಮಫಲತ್ಯಾಗಃ” ಪರಮೇಶ್ವರನ ಧ್ಯಾನಕಿಂತಲೂ ಎಂದರೆ ಭಕ್ತಿಯಕಿಂತಲೂ, ಕರ್ಮಫಲತ್ಯಾಗವು ಎಂದರೆ ನಿಷ್ಕಾಮಕರ್ಮವು ಶ್ರೇಷ್ಠವು ಎಂಬುದು ಮೊದಲಾದುದು ಗೀತಾವಾಕ್ಯಗಳ ಸಿದ್ಧಾಂತವೆಲ್ಲಕ್ಕೂ ವಿರುದ್ಧವಾಗಿದೆ ಎಂಬ ಆಕ್ಷೇಪವನ್ನು ನಮ್ಮ ಸಿದ್ಧಾಂತದಮೇಲೆ ತಾವು ಹೇಳಿರುತ್ತೀರಿ. ಅದು ಹೇಗೆ? ಧ್ಯಾನಶಬ್ದಕ್ಕೆ ಭಕ್ತಿಯೆಂದರ್ಥವಾಗುವುದಿಲ್ಲ.

೩೨— ಈ ಶ್ಲೋಕಕ್ಕೆ ಪೂರ್ವಶ್ಲೋಕದಲ್ಲಿ “ಮಾಂ ಧ್ಯಾಯಂತ ಉಪಾಸತೇ” ಎಂದು ಒಂದು ವಾಕ್ಯವಿದೆ. ಉಪಾಸನಾತ್ಮಕ ಧ್ಯಾನವೆಂದರೆ ಭಕ್ತಿಯೆ. ಅದು ಧ್ಯಾನಶಬ್ದಕ್ಕೆ ಅರ್ಥವಾಗುತ್ತದೆ.

೩೩— ಧ್ಯಾನವೆಂದರೆ ನಿರಂತರ ಸ್ಮರಣೆ. ಭಕ್ತಿಯೆಂದರೆ ಸ್ನೇಹ. (ಸ್ನೇಹವು ಸಣ್ಣಮಕ್ಕಳು ಮೊದಲಾದವರ ವಿಷಯದಲ್ಲಿ ಮಾಡಲ್ಪಟ್ಟರೆ ಅದನ್ನು ಪ್ರೇಮವೆನ್ನುತ್ತಾರೆ. ದೊಡ್ಡಮನುಷ್ಯರ ವಿಷಯದಲ್ಲಿ ಮಾಡಲ್ಪಟ್ಟರೆ ಅದನ್ನು ಭಕ್ತಿ ಎನ್ನುತ್ತಾರೆ.) ತಮ್ಮ ವ್ಯಾಖ್ಯಾನದಲ್ಲಿ ಧ್ಯಾನಶಬ್ದಕ್ಕೆ ಭಕ್ತಿಯೆಂದು ಅರ್ಥಮಾಡಲ್ಪಟ್ಟಿರುವುದಿಲ್ಲ. ನಾವೂ ಮಾಡಿರುವುದಿಲ್ಲ. ಹೀಗಿರುವಾಗ ವಿರೋಧವು ಹೇಗೆ? ಧ್ಯಾನಶಬ್ದಕ್ಕೆ ಭಕ್ತಿಯೆಂದರ್ಥ ಮಾಡಿದರೂ ಕೂಡ ವಿರೋಧ ಬರುವುದಿಲ್ಲ. “ಧ್ಯಾನಾತ್ಕರ್ಮಫಲತ್ಯಾಗಃ” ಪರಮೇಶ್ವರನ ಧ್ಯಾನವೆಂದರೆ ಭಕ್ತಿಯಕಿಂತಲೂ, ಕರ್ಮಫಲತ್ಯಾಗವೆಂದರೆ ನಿಷ್ಕಾಮಕರ್ಮವು ಶ್ರೇಷ್ಠವೆಂಬ ಅರ್ಥವನ್ನು ವಿಷಯಪ್ರವೇಶ ಪುಟ ೧೬-೧೭ರಲ್ಲಿ ಹೇಳಿ, ಗೀತಾಪರಿವರ್ತನ ಪುಟ ೩೫೬ ರಲ್ಲಿ ಧ್ಯಾನದಕಿಂತಲೂ ಕರ್ಮಫಲತ್ಯಾಗವು ಶ್ರೇಷ್ಠವೆಂದು ಅರ್ಥಕೊಟ್ಟು, ಮುಂದೆ ಪುಟ ೩೬೮ ರಲ್ಲಿ ಅಭಿಪ್ರಾಯ ಹೇಳುವಾಗ “ಸಾರಾಂಶ, ಕರ್ಮಫಲತ್ಯಾಗರೂಪವಾದ ಯೋಗವೆಂದರೆ ಜ್ಞಾನಭಕ್ತಿಯುಕ್ತವಾದ ನಿಷ್ಕಾಮಕರ್ಮಯೋಗವೇ. ಅದು ಸರ್ವಮಾರ್ಗಗಳಲ್ಲಿಯೂ ಶ್ರೇಷ್ಠವೆಂಬುದು ಭಗವದ್ಗೀತೆಯ ಮತವಾಗಿರುವುದರಿಂದ ಅದಕ್ಕನುಕೂಲವೂ ಅಥವಾ ಪೋಷಕವೂ ಆದ ಯುಕ್ತಿ

ಯಾದವು ೧೨ನೆಯ ಶ್ಲೋಕದಲ್ಲಿದೆ" ಎಂದು ಬರೆಯಲ್ಪಟ್ಟಿದೆ. ಸರ್ವಜ್ಞಾಚಾರ್ಯರು (೧೨-೧೨) ಶ್ಲೋಕದ ವ್ಯಾಖ್ಯಾನದಲ್ಲಿ "ಕೇವಲಧ್ಯಾನಾತ್ಫಲತ್ಯಾಗಯುಕ್ತಂ ಧ್ಯಾನಂ ಅಧಿಕಂ, ಧ್ಯಾನಯುಕ್ತಸ್ತ್ಯಾಗವಿಶೇಷೋಕ್ತಃ । ಧ್ಯಾನಾತ್ತು ಕೇವಲಾತ್ತ್ಯಾಗಯುಕ್ತಂ ತದಧಿಕಂ ಭವೇತ್" ಎಂದು ಬರೆದಿದ್ದಾರೆ. ಇದರ ತಾತ್ಪರ್ಯ ಸ್ಪಷ್ಟ. ಕರ್ಮಫಲತ್ಯಾಗವೆಂಬುವದಕ್ಕೆ ತಾವು ಮಾಡಿರುವ ಅರ್ಥವು ಜ್ಞಾನಭಕ್ತಿಯುಕ್ತ ನಿಷ್ಕಾಮಕರ್ಮಯೋಗವು. ನಮ್ಮ ಅರ್ಥವು ಫಲತ್ಯಾಗಯುಕ್ತವಾದ ಧ್ಯಾನವು. ಧ್ಯಾನವೆಂಬುದು ಜ್ಞಾನವಿಶೇಷವಾದುದರಿಂದ ಜ್ಞಾನ ನಂತರದಲ್ಲಿ ಕರ್ಮವನ್ನು ಅಂಗೀಕರಿಸುವುದು ಉಭಯರಿಗೂ ಸಮಾನವಾಗಿರಲು ಈ ಶ್ಲೋಕದ ವಿರೋಧವು ತಮಗೆ ಬರದೇ ನಮಗೆಮಾತ್ರ ಹೇಗೆ ಬರುತ್ತದೆ? ವಿರೋಧದ ಪ್ರಸಕ್ತಿಯೇ ಇಲ್ಲ.

ಶಿ—ನಾವು ಜ್ಞಾನಭಕ್ತಿಯುಕ್ತವಾದ ನಿಷ್ಕಾಮಕರ್ಮವೆಂದು ಕರ್ಮಕ್ಕೆ ಪ್ರಾಧಾನ್ಯವನ್ನು ಅಂಗೀಕರಿಸುವೆವು. ತಾವು ಫಲತ್ಯಾಗಯುಕ್ತಧ್ಯಾನವೆಂದು ಧ್ಯಾನಕ್ಕೆ ಪ್ರಾಧಾನ್ಯವನ್ನು ಅಂಗೀಕರಿಸುತ್ತೀರಿ. ಇದೇ ವಿರೋಧವು.

ಶ್ರೀ—ಗೀತೆಯಲ್ಲಾದರೋ "ಧ್ಯಾನಾತ್ಕರ್ಮಫಲತ್ಯಾಗಃ" ಎಂದು ಧ್ಯಾನದಕಿಂತಲೂ ಕರ್ಮಫಲತ್ಯಾಗವು ಶ್ರೇಷ್ಠವೆಂದು ಹೇಳಿದರಲ್ಲಾಗ, "ಕರ್ಮಫಲತ್ಯಾಗ" ಎಂಬ ಪದಕ್ಕೆ ಎರಡು ಕಡೆಯಲ್ಲಿಯೂ ಇತರ ವ್ಯಾಖ್ಯಾನುಸಾರವಾಗಿ ತಮಗಾದರೊಂದು ಪದವನ್ನು ಸೇರಿಸಬೇಕಾಗಿ ಬರುತ್ತದೆ. ಮೊದಲು ಆ ಪದವನ್ನು ಸೇರಿಸಬೇಕಾದಾಗಲೆ ನಮಗೂ ಆ ಪದವನ್ನು ಸೇರಿಸಬಹುದು. ನಾವು "ಫಲತ್ಯಾಗಯುಕ್ತಧ್ಯಾನ"ವೆಂದು ಧ್ಯಾನಪದಕ್ಕೆ ಮುಂದೆ ಫಲತ್ಯಾಗಯುಕ್ತಪದವನ್ನು ಸೇರಿಸಿರುವೆವು. "ಜ್ಞಾನಭಕ್ತಿಯುಕ್ತ ಕರ್ಮಫಲತ್ಯಾಗ" ಎಂದು ಜ್ಞಾನ (ಎಂದರೆ ಧ್ಯಾನ) ಪದವನ್ನು ತಾವು ಮೊದಲು ಸೇರಿಸುತ್ತೀರಿ. ಹೀಗಿರುವಾಗ ಗೀತೆಯು ಧ್ಯಾನಕ್ಕೂ ಪ್ರಾಧಾನ್ಯವನ್ನು ಹೇಳುವದಿಲ್ಲ. ಕರ್ಮಫಲತ್ಯಾಗಕ್ಕೂ ಪ್ರಾಧಾನ್ಯವನ್ನು ಹೇಳುವದಿಲ್ಲ. ಪೂರ್ವೋತ್ತರ ಸಂದರ್ಭ ಮತ್ತು ಅನೇಕ ಪ್ರಮಾಣಗಳು ಇವುಗಳ ಸಹಾಯದಿಂದ ಫಲ

ತ್ಯಾಗಕ್ಕೆ ಪ್ರಾಧಾನ್ಯ ಕೊಡಬೇಕೆ? ಅಥವಾ ಧ್ಯಾನಕ್ಕೆ ಪ್ರಾಧಾನ್ಯ ಕೊಡಬೇಕೆ?' ಎಂಬುದು ವಿಚಾರ ಮಾಡತಕ್ಕದು. ಗೀತೆಯ ವಿರೋಧವೇನೋ ನಮಗೆ ಇರುವುದಿಲ್ಲ.

(ಮೂರನೆಯ ವಿಷಯದಮೇಲೆ ಎರಡನೆಯ ದಿವಸ
ನಡೆದ ಚರ್ಚೆ.)

ತಿ—ನಾನು ಶಾಂಕರಾದ್ವೈತಿಯಲ್ಲ. ನಾನು ಜಗತ್ತಿಗೆ ಮಿಥ್ಯಾತ್ವವೆಂದರೆ ನಾಶವನ್ನು ಒಪ್ಪುತ್ತೇನೆ.

ಶ್ರೀ—ನಾನು ಶಾಂಕರಾದ್ವೈತಿಯಲ್ಲವೆಂದು ತಾವು ಹೇಳುತ್ತೀರಿ ಹೊರತು ಅಧ್ಯಾತ್ಮ ಪ್ರಕರಣ ಮಧ್ಯದಲ್ಲಿ "ಬ್ರಹ್ಮಸತ್ಯಂ ಜಗನ್ಮಿಥ್ಯಾ" ಎಂಬ ಶಂಕರಾಚಾರ್ಯರ ಅದ್ವೈತಮತವನ್ನು ತಾವೇ ಪ್ರತಿಪಾದನ ಮಾಡಿರುತ್ತೀರಿ. ಮತ್ತು ಜಗತ್ತಿಗೆ "ನಾಸ್ತಿ, ನಾಸೀತ್, ನಭವಿಷ್ಯತಿ" (ಈಗ ಇಲ್ಲ, ಇರಲಿಲ್ಲ, ಮುಂದೆ ಇರುವುದಿಲ್ಲ) ಎಂದು ತ್ರೈಕಾಲಿಕ ನಿಷೇಧವೆಂದರೆ ಮೂರು ಕಾಲದಲ್ಲಿಯೂ ಇಲ್ಲವೆನ್ನುವ ಮಿಥ್ಯಾತ್ವವನ್ನು ಒಪ್ಪಿದರೆ ಶಾಂಕರಾದ್ವೈತಕ್ಕು ತಮ್ಮ ಮತಕ್ಕು ಏನು ಭೇದವಿದೆ?

ತಿ—ಜಗತ್ತಿನ ವಿಷಯದಲ್ಲಿ ಮಿಥ್ಯಾ ಶಬ್ದವನ್ನು ಉಪಯೋಗಿಸಿದರೆ ಲೋಕದ ಮನಸ್ಸಿಗೆ ಕ್ಷೋಭನಾಗುತ್ತದೆ. ಆದುದರಿಂದ ನಾನು ಆ ಶಬ್ದವನ್ನು ಉಪಯೋಗಿಸುವುದಿಲ್ಲ. ಕಾಣುವ (ದೃಶ್ಯ) ಎಂಬ ಪದವನ್ನು ಉಪಯೋಗಿಸುತ್ತೇನೆ.

ಶ್ರೀ—ಮಿಥ್ಯಾ ಶಬ್ದವು ಸಂಸ್ಕೃತವು. ಕಾಣುವ ಎಂಬ ಶಬ್ದವು ಪ್ರಾಕೃತವು. ಇಷ್ಟೇ ಅಲ್ಲವೇ ಭೇದ? ಅರ್ಥವಲ್ಲೇನೂ ಭೇದವಿರುವುದಿಲ್ಲ. ಮಿಥ್ಯಾ ಶಬ್ದವನ್ನು ಪ್ರಯೋಗಿಸಿದರೆ ಕ್ಷುಬ್ಧವಾಗುವ ಲೋಕದ ಮನಸ್ಸು ಕಾಣುವ ಎಂಬ ಶಬ್ದವನ್ನು ಉಪಯೋಗಿಸಿದರೂ ಕೂಡ ಕ್ಷುಬ್ಧವಾಗಿಯೇ ತೀರುತ್ತದೆ.

ತಿ—ನನ್ನ ಮುಖ್ಯಕಟಾಕ್ಷವು ಲೋಕಸಂಗ್ರಹದ ಕಡೆ ಇರುವುದರಿಂದ ಗೀತೆಯು ಅಂತಹ ಅರ್ಥಗಳನ್ನು ಪ್ರತಿಪಾದನ ಮಾಡುತ್ತದೆ ಎಂಬುದೇ ನನ್ನ ಲೇಖನದ ಅಭಿಪ್ರಾಯವು.

ಶ್ರೀ—ಅದ್ವೈತ ಪ್ರತಿಪಾದನ ಮಾಡದೆ ಅಂತಹ ಅರ್ಥಗಳನ್ನು ತಾವು ಬರೆದಿದ್ದರೆ ಈ ವಿಚಾರ ಮಾಡುವುದಕ್ಕೆ ಕಾರಣವೇ ಇರುತ್ತಿರಲಿಲ್ಲ.

(ಪೂರ್ವದಿವಸದ ೨೧ನೆಯ ವಿಷಯದ ಮೇಲೆ ೧ನೆಯ ದಿವಸ ನಡೆದ ಚರ್ಚೆ.)

ತಿ—"ಯಸ್ಸ ಸರ್ವೇಷು ಭೂತೇಷು ನಶ್ಯತ್ಸು ನ ವಿನಶ್ಯತಿ" ಎಂಬ ಶ್ಲೋಕವು ಸಕಲ ಭೂತಗಳು ನಷ್ಟವಾದರೂ ಆವನು ಇರುತ್ತಾನೋ ಅವನು ಪರಮಾತ್ಮನೆಂದು ಹೇಳುತ್ತದೆ. ಮತ್ತು "ಅಹಂ ಸರ್ವಸ್ಯ ಪ್ರಭವೋ ಮತ್ತಸ್ಸರ್ವಂ ಪ್ರವರ್ತತೇ" ಈ ಶ್ಲೋಕವು ಸರ್ವಕ್ಕೂ ಈಶ್ವರನು ಕರ್ತನೆಂದು ಪ್ರತಿಪಾದಿಸುತ್ತದೆ. ಇದರಿಂದ ಪ್ರಕೃತಿಗೆ ಕೂಡ ಅನಿತ್ಯತ್ವವನ್ನು ಕಾರ್ಯತ್ವವನ್ನು ಒಪ್ಪಬೇಕಾಗುತ್ತದೆ.

ಶ್ರೀ—"ಪ್ರಕೃತಿಂ ಸ್ವಾಮವಷ್ಟಭ್ಯ" "ಮಯಾಧ್ಯಕ್ಷೇಣ ಪ್ರಕೃತಿಸ್ಸೂಯತೇ ಸಚರಾಚರಂ" "ಪ್ರಕೃತಿಂ ಪುರುಷಂ ಚೈವ ವಿದ್ಧ್ಯನಾದೀ ಉಭಾವಪಿ" ಎಂಬುವು ಮೊದಲಾದ ಪುಷ್ಕಳ ಶ್ಲೋಕಗಳು ಪ್ರಕೃತಿ ಅನಾದಿ ಎಂದೊಪ್ಪಿ ಅದರ ಸಹಕಾರದಿಂದ ಪರಮಾತ್ಮನು ಸರ್ವಸೃಷ್ಟಿಯನ್ನು ಮಾಡುತ್ತಾನೆಂದು ಪ್ರತಿಪಾದಿಸುತ್ತಿರುವ ಕಾರಣ; "ಅಹಂ ಸರ್ವಸ್ಯ ಪ್ರಭವಃ" ಎಂಬ ಶ್ಲೋಕದಲ್ಲಿ ಪ್ರಕೃತಿಯ ಕಿಂತಲೂ ಭಿನ್ನವಾದ ಭೂತಗಳನ್ನು ಪರಮಾತ್ಮನು ಹುಟ್ಟಿಸುತ್ತಾನೆ; ಪ್ರಕೃತಿಯನ್ನು ಹುಟ್ಟಿಸುವುದಿಲ್ಲವೆಂದು ಅಂಗೀಕರಿಸಬೇಕಾಗಿದೆ. "ಯಸ್ಸ ಸರ್ವೇಷು ಭೂತೇಷು" ಎಂಬ ಈ ಶ್ಲೋಕವಾದರೋ ಸ್ಪಷ್ಟವಾಗಿ ಭೂತಗಳಿಗೆ ನಾಶವನ್ನು ಹೇಳುತ್ತದೆ. ಇದಕ್ಕೆ ಪೂರ್ವದಲ್ಲಿ "ಭೂತಗ್ರಾಮಸ್ಸ ಏವಾಯಂ ಭೂತ್ವಾ ಭೂತ್ವಾ ಪ್ರಲೀಯತೇ। ರಾತ್ರ್ಯಾಗಮೇಽವಶಃ ಪಾರ್ಥ ಪ್ರಭವತ್ಯಹರಾಗಮೇ" "ಪರಸ್ತಸ್ಮಾತ್ತು ಭಾವೋಽನ್ಯೋಽವ್ಯಕ್ತೋಽವ್ಯಕ್ತಾತ್ಸನಾತನಃ" ಎಂಬ ಶ್ಲೋಕದಲ್ಲಿ ಈ ಭೂತಗ್ರಾಮವು ಪ್ರತಿದಿನವು ಉತ್ಪನ್ನವಾಗಿ ನಷ್ಟವಾಗುತ್ತದೆಂದು ಹೇಳಿ "ಯಸ್ಸ ಸರ್ವೇಷು ಭೂತೇಷು" ಎಂಬುದರ ಪೂರ್ವಾರ್ಧದಲ್ಲಿ ಜಡದಕಿಂತಲೂ ಬ್ರಹ್ಮರೂಪನಾದ ಅವ್ಯಕ್ತನು ಬೇರೆಯಾಗಿ ಉತ್ತಮ

ವಾಗಿದೆ ಎಂದು ಹೇಳಲ್ಪಟ್ಟಿದೆ. ಇದರಿಂದ ಪ್ರಕೃತಿಯು ಭೂತ ಪದ ದಿಂದ ವಾಚ್ಯವಾಗುವದಿಲ್ಲ. ಹೀಗಿರುವಾಗ "ಯಸ್ಸಸರ್ವೇಷುಭೂತೇಷು" ಎಂಬ ಶ್ಲೋಕದಲ್ಲಿ ಭೂತಗಳಿಗೆ ನಾಶಹೇಳಿದೆ ಎಂಬುವದರಿಂದ ಪ್ರಕೃತಿಗೂ ನಾಶವನ್ನು ಒಪ್ಪಬೇಕೆಂಬುದು ಎಲ್ಲಿಂದ ಬಂದಿತು?

ತಿ—ಪ್ರಕೃತಿ ಪುರುಷ ಈ ಎರಡೂ ಅನಾದಿಯೆಂದು ಒಪ್ಪುವದಾದರೆ ಸಾಂಖ್ಯಮತವನ್ನೊಪ್ಪಿದಂತಾಗುವುದು. ಆದಕಾರಣ ಅನಾದಿ ಎಂಬ ಶಬ್ದಕ್ಕೆ "ನವಿದ್ಯತೆಆದಿಃಯಸ್ಯ" ಆವುದಕ್ಕೆ ಆದಿ ಇಲ್ಲವೋ ಅದು ಎಂಬರ್ಥವನ್ನು ಮಾಡಬಾರದು. "ನಜ್ಞಾಯತೆಆದಿಃಯಸ್ಯ" ಆವುದಕ್ಕೆ ಆದಿಯು ತಿಳಿದುಬರುವುದಿಲ್ಲವೋ ಅದು ಎಂದು ಅರ್ಥವನ್ನು ಮಾಡಬೇಕು.

ಶ್ರೀ—ಸಾಂಖ್ಯಮತದಲ್ಲಿ ಪ್ರಕೃತಿ ಮತ್ತು ಪುರುಷ ಎರಡೂ ಸ್ವತಂತ್ರವೆಂದು ಒಪ್ಪುತ್ತಾರೆ. ನಾವು "ಮಯಾಧ್ಯಕ್ಷೇಣಪ್ರಕೃತಿಃ ಸೂಯತೆಸಚರಾಚರಂ" ಎಂಬ ಶ್ಲೋಕದಲ್ಲಿ ಹೇಳಿರುವ ಪ್ರಕಾರ ಪ್ರಕೃತಿಯು ಪರಮಾತ್ಮನಿಗೆ ಅಧೀನವೆಂದು ಒಪ್ಪುತ್ತೇವೆ. ಇದರಿಂದ ನಮ್ಮ ಮತಕ್ಕೂ ಸಾಂಖ್ಯಮತಕ್ಕೂ ಭೇದವು ಇದೆ. ಅನಾದಿ ಎಂಬ ಪದಕ್ಕೆ 'ನವಿದ್ಯತೆಆದಿಃಯಸ್ಯ' ಆವುದಕ್ಕೆ ಆದಿ ಇಲ್ಲವೋ ಅದು ಎಂದು ಅರ್ಥಮಾಡುವದೇ ಯುಕ್ತವು. ತಮ್ಮ ಪ್ರಕಾರ ಅರ್ಥಮಾಡಿದರೆ ಕ್ಲೇಶಪಡಬೇಕಾಗುವುದಲ್ಲದೆ ವಿಗ್ರಹವಾಕ್ಯದಲ್ಲಿ 'ಜ್ಞಾಯತೆ' ಎಂಬ ಇಲ್ಲದೆ ಇರುವ ಪದವನ್ನು ಸೇರಿಸಬೇಕಾಗುತ್ತದೆ.

ವ್ಯಾಖ್ಯೇಯ ಶ್ಲೋಕದಲ್ಲಿ 'ಸತ್' ಮತ್ತು 'ಅಸತ್' ಈ ಪದಕ್ಕೆ ಅರ್ಥವು ಬ್ರಹ್ಮ ಮತ್ತು ಪ್ರಕೃತಿಯು ಎಂದು ನಮ್ಮ ಮತದಲ್ಲಿರುವುದರಿಂದ 'ಸತ್' ಮತ್ತು 'ಅಸತ್' ಈ ಎರಡೂ ಪರಸ್ಪರ ವಿರುದ್ಧಾರ್ಥಕವೇ ಅಲ್ಲ. ಹೀಗೆಯೇ 'ಭಾವ' ಮತ್ತು 'ಅಭಾವ' ಈ ಪದಗಳ ಪ್ರಸ್ತಾವಕ್ಕೂ ಕಾರಣವಿಲ್ಲ. ಎರಡನೆಯ 'ಸತ್' ಮತ್ತು 'ಅಸತ್' ಈ ಪದಗಳು ವಿರುದ್ಧಾರ್ಥಕವಾಗಿದ್ದರೂ ಕೂಡ 'ಭಾವ' ಮತ್ತು 'ಅಭಾವ' ಈ ಪದಗಳ ಪ್ರಸ್ತಾವವಾಗಬೇಕೆಂದು ನಿಯಮವೂ ಇಲ್ಲ.

ಇದರಮೇಲೆ ತಾವು, ಹೀಗೆ ‘ಅಭಾವ’ ಎಂಬ ಪದವನ್ನು ಪ್ರಥಮ ಪಾದದಲ್ಲಿ ಬಿಡುವುದಾದರೆ ‘ಅಭಾವ’ ಮತ್ತು ‘ವಿದ್ಯತೆ’ ಈ ಪದಗಳನ್ನು ಎರಡಾವೃತ್ತಿ ಪ್ರಯೋಗಿಸುವುದಕ್ಕೆ ಅವಶ್ಯಕತೆ ಇರಲಾರದು ಎಂಬದಾಗಿ ಹೇಳಬೇಕಾಗಿದೆ. ಇದರಮೇಲೆ ನಾವು ವಿಚಾರ ಮಾಡುವುದೇನೆಂದರೆ ತಮ್ಮ ಮತದಲ್ಲಿ ಕೂಡ ‘ನಷ್ಟೆ’ ಮತ್ತು ‘ವಿದ್ಯತೆ’ ಎಂಬ ಪದಗಳನ್ನು ಎರಡಾವೃತ್ತಿ ಏತಕ್ಕೆ ಪ್ರಯೋಗಿಸಿದಾರೆ? ಒಂದೇ ‘ನಷ್ಟೆ’ ಪದಕ್ಕೆ ಮತ್ತು ‘ವಿದ್ಯತೆ’ ಎಂಬ ಪದಕ್ಕೂ ಎರಡು ಕಡೆಯೂ ಅನ್ವಯ ಮಾಡಬಹುದಾಗಿತ್ತಲ್ಲವೆ?

ಮತ್ತು “ಕ್ಷುದ್ರಂ ಹೃದಯ ದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ” ಎಂಬ ಶ್ಲೋಕಕ್ಕೆ ವ್ಯಾಖ್ಯಾನ ಮಾಡುವಾಗ ‘ಪರಂತಪ’ ಎಂಬ ಪದಕ್ಕೆ ಈ ಸ್ಥಳದಲ್ಲಿ ನಾವು ಅರ್ಥಕೊಟ್ಟಿರುವುದು ಸರಿಯಷ್ಟೆ; ಆದರೆ ಅನೇಕ ಸ್ಥಳಗಳಲ್ಲಿ ಬರುವ ವಿಶೇಷಣ ರೂಪವಾದ ಸಂಬೋಧನಪದಗಳನ್ನೂ ಮತ್ತು ಕೃಷ್ಣಾರ್ಜುನರ ಹೆಸರುಗಳನ್ನು ಗೀತೆಯಲ್ಲಿ ಹೇತುಗರ್ಭ ಅಥವಾ ಸಾಭಿಪ್ರಾಯವಾಗಿ ಯೋಜಿಸಿ ಇದೇವೆ ಎಂದು ಅನೇಕ ಟೀಕಾಕಾರರು ಹೇಳಿರುವುದು ನಮ್ಮ ಮತದಲ್ಲಿ ಸಯುಕ್ತಿಕವಾಗಿಲ್ಲ. ಪದ್ಯರಚನೆಗೆ ಅನುಕೂಲ ಬೇಕಾದಹಾಗೆ ಈ ಪದಗಳು ಪ್ರಯೋಗಿಸಲ್ಪಟ್ಟಿರುವಾಗ ಅದರಲ್ಲಿ ಅವುದೋ ಒಂದು ವಿಶಿಷ್ಟ ಅರ್ಥವು ಉದ್ದಿಷ್ಟವಾಗಿರುವುದಿಲ್ಲ ಎಂದು ನಮ್ಮ ಮತವಾಗಿದೆ. ಈ ಕಾರಣದಿಂದ ಕೆಲವು ವೇಳೆಗಳಲ್ಲಿ ಶ್ಲೋಕದಲ್ಲಿರುವ ಪದಗಳಿಗೆ ಭಾಷಾಂತರವನ್ನು ಮಾಡದೆ ‘ಅರ್ಜುನ’ ಅಥವಾ ‘ಶ್ರೀಕೃಷ್ಣ’ ಎಂದು ಅವುಗಳಿಗೆ ಸಾಮಾನ್ಯವಾಗಿ ನಾವು ಪರಿವರ್ತನ ಮಾಡಿದೇವೆ” ಎಂದು (ಗೀ. ರ. ೬೨೨) ತಾವು ಬರೆದಿದ್ದೀರಿ.

ಮೇಲೆ ತೋರಿಸಿದ ಬರವಣಿಗೆಯಲ್ಲಿ ತಾವು ಹೇಳಿರುವ ಪ್ರಕಾರವೇ ಪದ್ಯರಚನೆಗೆ ಅನುಕೂಲವಾಗಿ ಸೇರಿಸಲ್ಪಟ್ಟಿರುವ ಪದಗಳಿಗೆ ವಿಶಿಷ್ಟಾರ್ಥವು ಇದೆ ಎಂಬ ನಿಯಮವಿರುವುದಿಲ್ಲ. ಇದೇ ಪ್ರಕಾರವೇ ನಾವೂ ಕೂಡ ‘ಅಭಾವ’ ಮತ್ತು ‘ವಿದ್ಯತೆ’ ಎಂಬ ಎರಡು ಪದಗಳನ್ನು ಪದ್ಯರಚನೆಗೆ ಅನುಕೂಲಕ್ಕಾಗಿ ಪ್ರಯೋಗಿಸಿದಾರೆ ಎಂಬು

ಹೇಳುತ್ತೇವೆ. ಆವ ಮನುಷ್ಯರು ತಮ್ಮ ಗೀತಾ ವ್ಯಾಖ್ಯಾನದಲ್ಲಿ "ಕೆಲವು ಪದಗಳಿಗೆ ಅರ್ಥವಿಲ್ಲ. ಕೇವಲ ಪದ್ಯರಚನೆಯ ಅನುಕೂಲಕ್ಕಾಗಿ ಸೇರಿಸಲ್ಪಟ್ಟಿವೆ" ಎಂದು ಹೇಳುತ್ತಾರೋ ಅವರೇ ಆ ಗೀತೆಯಲ್ಲಿರುವ ಪದಗಳ ವಿಷಯದಲ್ಲಿ ಈ ಎರಡು ಪದಗಳು ಏಕೆ ಪ್ರಯೋಗಿಸಲ್ಪಟ್ಟಿವೆ ಎಂದು ವಿಚಾರ ಮಾಡಿದರೆ ನಾವು ಅವರಿಗೆ ಅವರ ಮಾತನ್ನೇ ಉತ್ತರವಾಗಿ ಕೊಟ್ಟಿದ್ದೇವೆ. ಅಥವಾ ದ್ವಿರುಕ್ತಿಯು ಆದರಾರ್ಥಕವೆಂದು ನಾವು ಹೇಳಿದರೂ ಕೂಡ ಅದನ್ನು ಅವರು ಒಪ್ಪಬೇಕಾಗಿದೆ. ಕಾವ್ಯ ಮತ್ತು ಶಾಸ್ತ್ರ ಗ್ರಂಥಗಳಲ್ಲಿ ಅನೇಕ ಸ್ಥಳಗಳಲ್ಲಿ ದ್ವಿರುಕ್ತಿ ಇದೆ. ಲೋಕವ್ಯವಹಾರದಲ್ಲಿಯೂ 'ಬಾಬಾ' 'ಕೂಡುಕೂಡು' ಎಂದು ಆದರಾರ್ಥಕವಾದ ದ್ವಿರುಕ್ತಿಗಳು ಕಾಣುತ್ತಿವೆ.

'ಅಸತ್' ಎಂದರೆ ಇಲ್ಲದುದು, 'ಸತ್' ಎಂದರೆ ಇರುವುದು ಎಂದು ಅರ್ಥವನ್ನು ತಾವು "ನಾಸತೋವಿದ್ಯತೆಭಾವಃ" ಎಂಬ ಶ್ಲೋಕ ವ್ಯಾಖ್ಯಾನದಲ್ಲಿ ಮಾಡಿ ಮುಂದೆ 'ಸತ್' ಎಂದರೆ ಬ್ರಹ್ಮ, 'ಅಸತ್' ಎಂದರೆ ನಾಮರೂಪಾತ್ಮಕ ಜಗತ್ತು ಎಂದು ಅರ್ಥಮಾಡೋಣವಾಗಿದೆ. ಇದು ಎಲ್ಲಿಂದ ಬಂದಿತು? ಈ ಅರ್ಥವು ಕ್ಲಿಷ್ಟವಲ್ಲವೆ?

(ಎರಡನೆಯ ದಿವಸದ ಆರನೆಯ ವಿಷಯಕ್ಕೆ ಸಂಬಂಧಪಟ್ಟ ನಡೆದ ಚರ್ಚೆ)

ತಿ—"ಯದಾಭೂತಪೃಥಗ್ಭಾವಮೇಕಸ್ಥಮನುಪಶ್ಯತಿ। ತತ ಏವಚ ವಿಸ್ತಾರಂಬ್ರಹ್ಮ ಸಂಪದ್ಯತೇತದಾ" ಎಂಬ ಈ ಶ್ಲೋಕವು ಅದ್ವೈತಬೋಧಕವಾಗಿದೆ.

ಶ್ರೀ—ಇದಕ್ಕೆ ಅರ್ಥ ಹೇಳಿರಿ?

ತಿ—(ಯದಾ) ಆವಾಗ (ಭೂತಪೃಥಗ್ಭಾವಂ) ಭಿನ್ನವಾಗಿರುವಂತೆ ತೋರುವ ಜಗತ್ತು (ಏಕಸ್ಥಂ) ಒಂದಾಗಿ ಕಾಣುತ್ತದೋ ಎಂದು ಇದಕ್ಕೆ ಅರ್ಥವು.

ಶ್ರೀ—'ಏಕಸ್ಥಂ' ಎಂದರೆ ಒಂದು ಸ್ಥಾನದಲ್ಲಿರುವುದೆಂದು ಅರ್ಥವಾಗುತ್ತದೆ, ಒಂದಾಗಿ ಎಂದರ್ಥವಾಗುವುದಿಲ್ಲ. ಹಾಗರ್ಥಮಾಡಿದರೆ 'ಸ್ಥ' ಎಂಬ ಶಬ್ದಕ್ಕೆ ಗತಿಯಿಲ್ಲದೆ ಹೋಗುತ್ತದೆ. ಈಗ

ನಾವು ‘ ನಭೂಸ್ಸಸರ್ವಲೋಕಃ ’ ಎಂದು ಹೇಳಿದರೆ ಸಮಸ್ತ ಜನವೂ ನಭೋರೂಪವೆಂದು ಅರ್ಥವಾಗುವುದಿಲ್ಲ. ಮತ್ತು ‘ ಭೂತಪೃಥಗ್ಭಾವಂ ’ ಎಂಬ ಪದಕ್ಕೆ ಭಿನ್ನವಾದ ಜಗತ್ತು ಎಂದು ಅರ್ಥವಾಗುತ್ತಿರುವಾಗ ಭಿನ್ನದಂತೆ ತೋರುವ ಎಂಬರ್ಥವು ಎಲ್ಲಿಂದ ಬಂದಿತು.

ಈ ಶ್ಲೋಕಕ್ಕೆ ಸರಳವಾದ ಅರ್ಥವು ಈ ಪ್ರಕಾರವಿದೆ ಆವಾಗ (ಭೂತಪೃಥಗ್ಭಾವಂ) ಭಿನ್ನವಾಗಿರುವ ಜಗತ್ತನ್ನು (ಏಕಸ್ಥಂ) ಒಬ್ಬ ಪರಮಾತ್ಮನನ್ನೇ ಆಶ್ರಯಿಸಿಕೊಂಡಿರುವುದನ್ನಾಗಿ ಕಾಣುತ್ತಾನೋ, (ತತಏವಚ) ಆ ಪರಮಾತ್ಮನ ಕಡೆಯಿಂದಲೇವೆ (ವಿಸ್ತಾರಂ) ಭೂತಗಳ ವಿಸ್ತಾರ (ಸೃಷ್ಟಿ) ಆಗಿದೆ ಎಂದು ತಿಳಿಯುತ್ತಾನೋ (ತದಾ) ಆಗ (ಬ್ರಹ್ಮ) ಬ್ರಹ್ಮನನ್ನು ಕುರಿತು (ಸಂಪದ್ಯತೆ) ಅವನು ಹೊಂದುತ್ತಾನೆ. ಹೀಗೆ ಅರ್ಥವಿರುವುದರಿಂದ ಈ ಶ್ಲೋಕವು ಅದ್ವೈತಪ್ರತಿಪಾದಕವಾಗುವುದಿಲ್ಲ.

ತಿ—ಈ ಶ್ಲೋಕದಲ್ಲಿ ಸ್ಪಷ್ಟವಾಗಿ ಐಕ್ಯವು ಉಕ್ತವಲ್ಲದೇ ಇದ್ದರೂ ಕೂಡ “ ಅವಿಭಕ್ತಂಚಭೂತೇಷು ವಿಭಕ್ತಮಿವಚಸ್ಥಿತಂ ” ಎಂಬ ಶ್ಲೋಕದಲ್ಲಿ “ ವಿಭಕ್ತಮಿವ ” ವಿಭಕ್ತದಂತೆ ಇದೆ ಎಂದು ಹೇಳಿರುವುದರಿಂದ ಜಗತ್ತು ಪರಮಾತ್ಮನ ಕಡೆಯಿಂದ ವಿಭಕ್ತವಲ್ಲದೆ ಒಂದಾಗಿದೆ ಎಂದು ಅಂಗೀಕಾರಮಾಡಬೇಕಾಗುತ್ತದೆ.

ಶ್ರೀ— “ ಯದಾಭೂತಪೃಥಗ್ಭಾವಮೇಕಸ್ಥ ಮನುಪಶ್ಯತಿ । ತತಏವಚವಿಸ್ತಾರಂಬ್ರಹ್ಮಸಂಪದ್ಯತೇತದಾ ” ಈ ಶ್ಲೋಕವು ಹದಿಮೂರನೆಯ ಅಧ್ಯಾಯದಲ್ಲಿ ಮೂವತ್ತನೆಯ ಶ್ಲೋಕವಾಗಿದೆ. “ ಅವಿಭಕ್ತಂಚಭೂತೇಷು ವಿಭಕ್ತಮಿವಚಸ್ಥಿತಂ । ಭೂತಭರ್ತೃಚತಜ್ಜ್ಞೇಯಂಗ್ರಸಿಷ್ಣುಪ್ರಭವಿಷ್ಣುಚ ” ಈ ಶ್ಲೋಕವು ಅದೇ ಅಧ್ಯಾಯದ ೧೬ ನೆಯ ಶ್ಲೋಕವಾಗಿದೆ. ಆ ಪ್ರಕರಣ ಬೇರೆ. ಈ ಪ್ರಕರಣ ಬೇರೆ. ಅಲ್ಲಿ “ ಜ್ಞೇಯಂಯತ್ತತ್ಪ್ರವಕ್ಷ್ಯಾಮಿಯಜ್ಜ್ಞಾತ್ವಾಮೃತಮಶ್ನುತೇ । ಅನಾದಿಮತ್ಪರಂಬ್ರಹ್ಮ ನಸತ್ತನ್ನಾಸದುಚ್ಯತೇ ॥ ಸರ್ವತಃಪಾಣಿಪಾದಂತತ್ ಸರ್ವತೋಕ್ಷಿಶಿರೋಮುಖಮ್ ” ಎಂದು ಪರಮಾತ್ಮನ ಪ್ರಕರಣಕ್ಕೆ ಆರಂಭವಾಗಿರುವುದರಿಂದ “ ಅವಿಭಕ್ತಂಚಭೂ

ತೇಷು ವಿಭಕ್ತಮಿವಚಸ್ಥಿತಮ್ ” (ಭೂತೇಷು) ಭೂತಾದಿಯಾದ ಜಗತ್ತಿನಲ್ಲಿರುವ ಪರಮಾತ್ಮನು ಅವಿಭಕ್ತಂ ಭಿನ್ನನಾಗಿಲ್ಲ ಎಂದರೆ ನಿಯಾಮಕನಾಗಿರುವ ಪರಮಾತ್ಮನು ಸಕಲ ಸ್ಥಳಗಳಲ್ಲಿಯೂ ಒಬ್ಬನೆಯಾಗಿದ್ದರೂ (ವಿಭಕ್ತಮಿವ) ಭಿನ್ನವಾಗಿರುವಂತೇ (ಸ್ಥಿತಮ್) ಇದಾನೆ ಎಂದು ಪರಮಾತ್ಮನ ವರ್ಣನೆ ಇರುವುದರಿಂದ ಇದರಿಂದ ಜೀವಪರಮಾತ್ಮರಿಗೆ ಐಕ್ಯವು ಸಿದ್ಧಿಸುವುದಿಲ್ಲ. ಮುಂದೆಯೇ ಹತ್ತೊಂಭತ್ತನೆಯ ಶ್ಲೋಕದಲ್ಲಿ “ ಪ್ರಕೃತಿಂಪುರುಷಂಚೈವ ವಿದ್ಧ್ಯನಾದೀಉಭಾವಪಿ ” ಎಂದು ಪ್ರಕೃತಿಗೂ ಪರಮಾತ್ಮನಿಗೂ ಅನಾದಿತ್ವವನ್ನು ಒಪ್ಪಿ “ ಉಭಾ ” ಯೆಂಬ ಪದದಿಂದ ಭೇದವು ಹೇಳಲ್ಪಟ್ಟಿದೆ.

ಬಹಳ ಹೊತ್ತಿನವರೆಗೂ ಚರ್ಚೆಯು ನಡೆದಮೇಲೆ, ನಾ|| ಜೋಶೀಯವರು “ ಬಹಳ ಕಾಲವಾಗಿದೆ. ರಾ|| ಶ್ರೀ|| ತಿಲಕರವರಿಗೆ ಶ್ರಮ ಬಹಳವಾಗಿ ಇದೆ. ಆದುದರಿಂದ ಉಳಿದ ವಿಷಯಗಳಮೇಲೆ ಶ್ರೀ ಪಾದಂಗಳವರು ಏನಾದರೂ ಟೀಕೆಯನ್ನಾಗಿ ಬರಿಯಬೇಕಾಗಿದ್ದರೆ ಬರಿಯಬಹುದು. ಅದಕ್ಕೆ ಮ|| ರಾ|| ತಿಲಕರವರು ಯೋಗ್ಯವಾದ ಉತ್ತರವನ್ನು ಲಿಖಿತರೂಪವಾಗಿ ಕೊಟ್ಟಾರು ” ಎಂದು ಸೂಚಿಸಿದರು. ಅದರ ಮೇಲೆ ಶ್ರೀ ಸ್ವಾಮಿಗಳವರು ಅಪ್ಪಣೆ ಕೊಡಿಸಿದುದೇನಂದರೆ— “ ರಾ|| ಶ್ರೀ ತಿಲಕರವರು ಈ ಗ್ರಂಥ ಬರಿಯುವುದರಲ್ಲಿ ಏಳೆಂಟುವರ್ಷ ಶ್ರಮ ಪಟ್ಟಿದಾರೆ. ಅದರಲ್ಲಿರುವ ಸಿದ್ಧಾಂತಗಳನ್ನು ಸ್ಥಾಪಿಸಬೇಕಾದರೆ ಏಳೆಂಟು ದಿವಸಗಳ ಅವಕಾಶವನ್ನಾದರೂ ತೆಗೆದುಕೊಳ್ಳುವುದು ಯೋಗ್ಯ ಕಾಣುತ್ತದೆ. ಮುಖಪ್ರಸಂಗದಲ್ಲಿ ಹೇಗೆ ಒಬ್ಬೊಬ್ಬರ ಅಭಿಪ್ರಾಯವು ವ್ಯಕ್ತವಾಗುತ್ತದೆಯೋ, ಹಾಗೆ ಲೇಖನದಲ್ಲಿ ಆಗುವುದಿಲ್ಲ. ಬರವಣಿಗೆಯಿಂದಲೇ ಒಬ್ಬೊಬ್ಬರ ಅಭಿಪ್ರಾಯವು ಯಥಾಸ್ಥಿತವಾಗಿ ತಿಳಿಯುವುದಾದರೆ ನಿಮ್ಮಂತಹ ವಕೀಲರು ಕೋರ್ಟಿನಲ್ಲಿ ಹೋಗಿ ಕೆಲಸ ನಡೆಸುವುದಕ್ಕೆ ಕಾರಣವೇ ಇರುತ್ತಿರಲಿಲ್ಲ. ಬರವಣಿಗೆಯ ಉತ್ತರ-ಪ್ರತ್ಯುತ್ತರಗಳಲ್ಲಿ ಸರ್ವಕೆಲಸಗಳೂ ಬೇರೆಯಾಗುತ್ತವೆ. ಸಮಕ್ಷ ವಾದವಿವಾದಗಳಿಂದ ಅಭಿಪ್ರಾಯವು ಹೇಗೆ ತಿಳಿಯುತ್ತದೆಯೋ ಮತ್ತೂ ಮನಸ್ಸಿನಲ್ಲಿ ನಿಲ್ಲುತ್ತದೆಯೋ ಹಾಗೆ ಬರವಣಿಗೆಯಿಂದ ತಿಳಿಯುವುದೂ ಇಲ್ಲ; ನಿಲ್ಲುವುದೂ

ಇಲ್ಲ. ಈ ಕಾರಣಗಳಿಂದಲೇ ರಾ॥ ತಿಲಕರವರೊಂದಿಗೆ ಸಮಕ್ಷ ಚರ್ಚೆಯಾಗಬೇಕೆಂದು ಇಷ್ಟು ದಿವಸಗಳೂ ನಾವು ನಿರೀಕ್ಷಿಸುತ್ತಿದ್ದೆವು. ಇಲ್ಲವಿದ್ದರೆ ಅವರ ಪುಸ್ತಕವನ್ನು ನಾವು ನೋಡಿದಾಗಲೇ ಆ ಸಂಬಂಧದಿಂದ ನಾವು ಬರೆಯಬೇಕಾದುದನ್ನು ಬರವಣಿಗೆ ಮಾಡಿರುವೆವು. ಈಗ ಅವಕಾಶವಿಲ್ಲದಿದ್ದರೂ ನಾವು ಪುಣೆಗೆ ಬಂದಾಗ ವಿಚಾರ ನಡೆಯಬಹುದು. ಮುಂದೆ ನಿಂತಿರುವ ವಿಷಯಗಳನ್ನು ಕುರಿತು ಲೇಖನಮೂಲಕವಾಗಿಯೂ ನಮ್ಮ ಹೇಳುವಿಕೆಯನ್ನು ತಿಳಿಸುತ್ತೇವೆ. ಇದುವರೆಗೂ ಗೀತೆಯ ಮೇಲೆ ಅನೇಕರು ಅನೇಕ ಲೇಖನಗಳನ್ನು ಮಾಡಿ ಪ್ರಸಿದ್ಧಪಡಿಸಿರುತ್ತಾರೆ. ಆದರೆ ಅವುಗಳನ್ನೆಲ್ಲಾ ವಿಚಾರಮಾಡುವುದರಲ್ಲಿ ಆವಶ್ಯಕತೆಯು ನಮಗೆ ಕಾಣಬರುವುದಿಲ್ಲ. ಇವರ ಲೇಖನದಲ್ಲಿ ಜನರಿಗೆ ಗೌರವವಿರುವುದರಿಂದ ನಮ್ಮ ಮತವಿಷಯದಲ್ಲಿ ಜನರಿಗೆ ಸಂಶಯ ಹುಟ್ಟತಕ್ಕ ಸಂಭವವಿದೆ. ಈ ಕಾರಣದಿಂದ ಇವರ ಲೇಖನ ವಿಷಯದಲ್ಲಿ ವಿಚಾರಮಾಡಬೇಕಾದ ಅವಶ್ಯಕತೆಯು ತೋರುತ್ತದೆ."

ತಿ—ನನ್ನ ಮುಖ್ಯ ಕಟಾಕ್ಷವು ಲೋಕಸಂಗ್ರಹದ ಕಡೆ ಇದೆ, ಆ ಅರ್ಥವನ್ನು ಗೀತೆಯು ಪ್ರತಿಪಾದಿಸುತ್ತದೆ ಎಂಬುದು ನನ್ನ ಬರವಣಿಗೆಯ ಉದ್ದೇಶವು.

ಶ್ರೀ—ತಮಗೆ ಇಷ್ಟೇ ಮನೋಗತವಾದ ಅಭಿಪ್ರಾಯವನ್ನು ಲೋಕಕ್ಕೆ ತಿಳಿಸುವುದಕ್ಕಾಗಿ ಗೀತಾರಹಸ್ಯದಲ್ಲಿ ಬರೆದಿದ್ದ ಪಕ್ಷದಲ್ಲಿ ನಮಗೆ ಈ ವಾದವನ್ನು ನಡೆಸಬೇಕಾದ ಆವಶ್ಯಕತೆಯೇ ಇರಲಿಲ್ಲ.

ಇಷ್ಟು ನಡೆದಮೇಲೆ ರಾ॥ ತಿಲಕರು ಮೊದಲಾದ ಮಂಡಲಿಯು ಶ್ರೀಗಳವರ ಅಪ್ಪಣೆಯನ್ನು ಪಡೆದು ಮನೆ ಸೇರಿತು.

ಗೀತಾರಹಸ್ಯದಲ್ಲಿ ಮಾಧ್ವಮತದಮೇಲೆ ಏನು ಆಕ್ಷೇಪವು ಹೇಳಲ್ಪಟ್ಟಿದೆಯೋ ಅದರ ಪರಿಹಾರವು ಕ್ರಮಕ್ರಮವಾಗಿ ಪ್ರಸಿದ್ಧವಾಗಬೇಕೆಂಬುದಾಗಿಯೂ ಆ ವಿಷಯದಲ್ಲಿ ಚರ್ಚೆಯು ಮುಂದೆ ನಡೆಸಲ್ಪಡಬೇಕೆಂಬುದಾಗಿಯೂ ಮಾಧ್ವ ಕಮಿಟಿಯವರು ತೀರ್ಮಾನಿಸಿದರು.

ಶ್ರೀ ಪದ್ಮಾಲಯ ಪ್ರೆಸ್, ಮೈಸೂರು.